ಶ್ರೀ ಪಿ. ಜಿ. ಆರ್. ಸಿಂಧ್ಯ.—ಉತ್ತರ ಕೇಳಲಿಕ್ಕೆ ಸಮಾಧಾನ ಇಲ್ಲವೆಂದರೆ ಹೇಗೆ? ನಮ್ಮ ಸರ್ಕಾರ ಬಂದಮೇಲೆ ನಿರ್ಧಾರ ಮಾಡಿದೆ ಎಂದು ಹೇಳಲಿಲ್ಲ. ಹಿಂದಿನ ಸರ್ಕಾರದವರು 1978–79 ರಿಂದ ಆಚೆಗೆ ಅಡ್ಮಿಷನ್ ಆದವರಿಗೆ ಖಾಸಗೀ ಮೆಡಿಕಲ್ ಕಾಲೇಜಿನಲ್ಲಿ ಸ್ಟೈಪೆಂಡ್ ಕೊಡತಕ್ಕ ಅಗತ್ಯ ಇಲ್ಲವೆಂದು ಮಾಡಿದರು. ಅದು ಸರಿ–ತಪ್ಪು ಎಂದು ನಾನು ಹೇಳುವುದಿಲ್ಲ. ಇದರಲ್ಲಿ ಒಳಗಿನ ವ್ಯವಹಾರವೇನೂ ಇಲ್ಲ, ಪ್ರೈವೇಟ್ ಕಾಲೇಜ್ ಮ್ಯಾನೇಜ್‌ಮೆಂಟಿನವರು ಕೊಡದಿದ್ದರೆ ಹೇಗೆ ಕೊಡಿಸಬೇಕೆಂಬುದು ಗೊತ್ತಿದೆ. ಇದರಲ್ಲಿ ನಮಗೆ ಮತ್ತು ಅವರಿಗೆ ಒಳಗಿನ ಮತ್ತು ಹೊರಗಿನ ವ್ಯವಹಾರವೇನು ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕೊಡಿಸದೇ ಹೋದರೆ ಕೊಡಿಸುತ್ತೇವೆಂದು ಹೇಳುವುದು, ಸರಿಯಲ್ಲ. ಸ್ಪಷ್ಟವಾಗಿ ಕೊಡಿಸುತ್ತೇವೆಂದು ಹೇಳಿದರೆ ತೊಂದರೆ ಇಲ್ಲ. ಅದು ಬಿಟ್ಟು ಕೊಡಿಸದೆ ಹೋದರೆ ಕೊಡಿಸುತ್ತೇವೆಂದರೆ ಅದರಲ್ಲಿ ನಮಗೆ ಅನುಮಾನಕ್ಕೆ ಆಸ್ಪದವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಪೂರ್ತಿ ಏನು ಎಂದು ಹೇಳಲಿಲ್ಲ.

ಅಧ್ಯಕ್ಷರು.—ಅವರು ಪೂರ್ತಿ ಹೇಳುವುದಕ್ಕೆ ತಾವು ಬಿಡುವುದಿಲ್ಲ.ವಲ್ಲ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಸಮಾಧಾನದಿಂದ ನನ್ನ ಮಾತನ್ನು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ನಮ್ಮ ಸರ್ಕಾರ ನಿಲ್ಲಿಸಬೇಕು ಎಂದು ನಿರ್ಧಾರ ಮಾಡಿಲ್ಲ. ಒಂದು ಸಾರಿ ಕಮಿಟ್‌ಮೆಂಟ್ ಮಾಡಿಕೊಂಡ ಮೇಲೆ ಪ್ರತಿ ಸಾರಿ ಕೊಡಬೇಕಾಗುತ್ತದೆ. ನಾವು ಈ ದಿಸೆಯಲ್ಲಿ ನೀತಿಯನ್ನು ಸಹ ಹಾಕಿಕೊಂಡಿದ್ದೇವೆ. ಖಾಸಗೀ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮಗೂ ಅವರಿಗೂ ಯಾವ ರೀತಿ ಒಳವ್ಯವಹಾರ ಇಲ್ಲ. ಏನು ಮಾಡಬೇಕು ಎಂಬುದು ನಮಗೆ ಗೊತ್ತಿದೆ. ಸದನದ ಮೂಲಕ ವಿಧ್ಯಾರ್ಥಿ ಮುಖಂಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರು ಮುಷ್ಕರವನ್ನು ವಾಪಸ್ ತೆಗೆದುಕೊಳ್ಳಲಿ. ಹೊರರಾಜ್ಯಗಳಲ್ಲಿ ಇಷ್ಟು ಹಣ ಕೊಡುತ್ತಿದ್ದಾರೆ, ಕೇಂದ್ರ ಸರ್ಕಾರದವರು 600 ರೂಪಾಯಿಗಳನ್ನು ಕೊಡುತ್ತಿದ್ದಾರೆ ಎಂದು ಸದಸ್ಯರು ಹೇಳಿದರು. ಕುಡಿಯುವುದಕ್ಕೇ ನೀರಿಲ್ಲದೇ ಇರುವಾಗ ಇದಕ್ಕೆ ಎಷ್ಟು ಹಣ ಒದಗಿಸಬೇಕು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ಯಾವುದೇ ಕುಂಟು ನೆಪ ಹೇಳದೇ ಅವರಿಗೆ ಕೊಡಬೇಕಾದುದನ್ನು ಕೊಡುತ್ತೇವೆ. ಆದರೆ ಯಾವ ರೀತಿ ಕೊಡಬೇಕು, ಯಾವಾಗ ಕೊಡಬೇಕು ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ವೈದ್ಯರಿಗೆ ಕೊಡುತ್ತಿದ್ದ ದುಡ್ಡು ಏನು ನಿಂತುಹೋಗಿತ್ತು ಅದನ್ನು ಕೊಡುತ್ತೇವೆ. ವಿದ್ಯಾರ್ಥಿಗಳು ಏನು ಮುಷ್ಕರ ಹೂಡಿದ್ದಾರೋ ಅವರು ಅದನ್ನು ವಾಪಸ್ ತೆಗೆದುಕೊಳ್ಳಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ನಕ್ಷತ್ರ, ರಾಹುಕಾಲ, ಗುಳಿಕಕಾಲ ನೋಡಿ ಕೊಡಿ ಎಂದು ಹೇಳುತ್ತಿಲ್ಲ. ಯಾವರೀತಿ ಕೊಡಬೇಕೋ, ಯಾವಾಗ ಕೊಡಬೇಕೋ ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದರೆ ಸರಿಹೋಗುವುದಿಲ್ಲ. ನಿರ್ದಿಷ್ಟವಾಗಿ ಹೇಳಬೇಕು. ಯಾವ ರೀತಿ ಕೊಡಬೇಕು ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದರೆ ದವಸಧಾನ್ಯಗಳ ಮೂಲಕ ಕೊಡುತ್ತೀರೋ. ಬಟ್ಟೆ ಮೂಲಕ ಕೊಡುತ್ತೀರೋ ಎಂಬುದನ್ನು ಹೇಳಬೇಕು. ಕಡ್ಡಾಯವಾಗಿ 15 ದಿವಸಗಳಲ್ಲಿ ಅಥವಾ 1 ವಾರದಲ್ಲಿ ಹೌಸ್ ಸರ್ಜನ್‌ಗಳಿಗೆ ಏನು ಕೊಡಬೇಕೋ ಅದನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಲಿ. ಸ್ಪಷ್ಟವಾಗಿ ಹೇಳಿದರೆ ನಮಗೂ ಸಂತೋಷ; ಅವರೂ ಮುಷ್ಕರ ನಿಲ್ಲಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಅಧ್ಯಕ್ಷರೆ......

ಅಧ್ಯಕ್ಷರು.—ಹೇಳುವುದಕ್ಕೆ ಬಿಡುವುದಿಲ್ಲವಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರ್ಕಾರ ಒಪ್ಪಿದೆ. ಅವರು ಮುಷ್ಕರವನ್ನು ವಾಪಸ್ ತೆಗೆದುಕೊಳ್ಳಲಿ. ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಪ್ರೈವೇಟ್ ಮ್ಯಾನೇಜ್‌ಮೆಂಟಿನವರಿಗೆ ಬರೆದು ಅವರು ಎಷ್ಟು ಕೊಡಬೇಕು, ನಾವು ಎಷ್ಟು ಕೊಡಬೇಕು ಎಂಬುದನ್ನು ವಿಚಾರ ಮಾಡಿ ಆದಷ್ಟು ಜಾಗ್ರತೆ ಕೊಡಬೇಕಾದ ಹಣವನ್ನು ಕೊಡುತ್ತೇವೆ. 8 ತಿಂಗಳಿಂದ ಬಾಕಿ ಇದೆ. ಯಾವ ರೀತಿ ಕೊಡಬೇಕು ಎಂಬುದನ್ನು ನೋಡಿ ಕೊಡುತ್ತೇವೆ.

ಶ್ರೀ ಜೆ. ಡಿ. ಸೋಮಪ್ಪ.—ನಾನು, ಆನೆ ಹೊಡೆದಿದ್ದರ ಬಗ್ಗೆ ಗಮನ ಸೆಳೆಯುವ ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಮಾನ್ಯ ಚಿಕ್ಕೇಗೌಡರೂ ಕಳುಹಿಸಿಕೊಟ್ಟಿದ್ದಾರೆ. ಸೋಮವಾರ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರೂ ಬರಲಿಲ್ಲ. ನಾವು ಕೊಟ್ಟ ಕಾಲಿಂಗ್ ಅಟೆನ್‌ಷನ್ ಒಂದೂ ಬರುವುದಿಲ್ಲವಲ್ಲ.

ಅಧ್ಯಕ್ಷರು.— ನೋಡೋಣ, ಕುಳಿತುಕೊಳ್ಳಿ.

ವಿತ್ತೀಯ ಕಾರ್ಯಕಲಾಪಗಳು.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—ಶಿಕ್ಷಣ ಇಲಾಖೆ ಬಗ್ಗೆ ಉತ್ತರ

ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ 22 ಜನ ಮಾನ್ಯ ಸದಸ್ಯರುಗಳು, ಶಿಕ್ಷಣ ಇಲಾಖೆ ಬೇಡಿಕೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿ ಅತ್ಯಂತ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಟೀಕೆಗಳನು

ಮಾಡಿದ್ದಾರೆ. ಮತ್ತೆ ಕೆಲವರು ಶಿಕ್ಷಣ ಇಲಾಖೆ ನವಚೈತನ್ಯವನ್ನು ಪಡೆದು ಹೆಚ್ಚಿನ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಿಳಿಸಿದ್ದಾರೆ. ಯುವಜನ ಸೇವಾ ಮಂತ್ರಿಗಳಾದ ಶ್ರೀ ಜೀವರಾಜ ಆಳ್ವ ಅವರು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಬೇಡಿಕೆಗಳಿಗೆ ಉತ್ತರ ಕೊಟ್ಟಿದ್ದಾರೆ. ಪ್ರಾಥಮಿಕ, ಪ್ರೌಢ ಶಿಕ್ಷಣ, ಕಿರಿಯ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೃತ್ತಿ ಶಿಕ್ಷಣಗಳಿಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರ ಮಾತುಗಳನ್ನು ಅತ್ಯಂತ ಗಮನ ಕೊಟ್ಟು ನಾನು ಕೇಳಿದ್ದೇನೆ. ಬಹುಶಃ ಮಾತನಾಡಿದ ಎಲ್ಲಾ ಸದಸ್ಯರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಶಾಲೆಗಳ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳ ಸ್ಥಿತಿ ಅನಾವಸ್ಥೆಯಲ್ಲಿದೆ. ಸಾಕಷ್ಟು ರೀತಿಯಲ್ಲಿ ಅದಕ್ಕೆ ಹಣ ಒದಗಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡುವುದರ ಜೊತೆಗೆ ಉಪಾಧ್ಯಾಯರನ್ನು ನೇಮಿಸಬೇಕೆಂದು ಹೇಳಿದ್ದಾರೆ. ಹಂಗಾಮಿಯಾಗಿಯಾದರೂ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಹಂಗಾಮಿಯಾಗಿರತಕ್ಕವರನ್ನು ಹೇಗಾದರೂ ಮಾಡಿ ಖಾಯಂ ಮಾಡಬೇಕು ಎಂದೂ ಹೇಳಿದ್ದಾರೆ. ಅದಕ್ಕೆ ಕೊಟ್ಟಿರತಕ್ಕ ಹಣ ಕೂಡ ಸಾಕಷ್ಟಿಲ್ಲ ಎಂದ ಮಾತನ್ನೂ ಹೇಳಿದ್ದಾರೆ. 6 ವರ್ಷಗಳಿಂದ 10 ವರ್ಷಗಳ ಮಕ್ಕಳಿಗೆ ಉಚಿತ ಶಿಕ್ಷಣವನ್ನು ರಾಜ್ಯಾಂಗದಲ್ಲಿ ಕೊಡಬೇಕೆಂದು ಹೇಳಿದ್ದರೂ ಕೂಡ 35 ವರ್ಷಗಳ ಕಾಲದಿಂದ ನಾವು ಕೊಡುವುದಕ್ಕಾಗಲಿಲ್ಲ ಎಂಬ ಮಾತನ್ನು ಸದಸ್ಯರೂ ಒಪ್ಪಿದ್ದಾರೆ, ನಾವೂ ಒಪ್ಪಿದ್ದೇವೆ. ಅಂದಮೇಲೆ ಹಿಂದೆ ಇದ್ದವರು ಕೊಟ್ಟಂಥ ಬಳುವಳಿಯನ್ನು ಹೊತ್ತುಕೊಂಡು ನಾವು ಕೆಲಸ ಮಾಡಬೇಕಾಗಿರುವುದರಿಂದ ಅವರೂ ನಾವು ಒಟ್ಟಿಗೆ ಸೇರಿ ಕೆಲಸಗಳನ್ನು ತ್ವರಿತವಾಗಿ ಮಾಡಬೇಕಾಗಿದೆ. ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ರಾಜ್ಯದಲ್ಲಿ 1666 ಶಿಶುವಿಹಾರಗಳಿವೆ. ರಾಜ್ಯಾಂಗಬದ್ಧವಾಗಿ ಕಡ್ಡಾಯವಾಗಿ ಶಾಲೆಗಳನ್ನು ತೆರೆಯಬೇಕೆಂಬ ಉದ್ದೇಶ ಇಲ್ಲದಿದ್ದರೂ ಪಟ್ಟಣಗಳಲ್ಲಿ ಪೂರ್ವಪ್ರಾಥಮಿಕ ಶಾಲೆಗಳನ್ನು ತೆರೆದು ಯಾವ ರೀತಿ ಮಕ್ಕಳಿಗೆ ತರಬೇತಿ ಕೊಡುತ್ತಿದ್ದೇವೋ ಮತ್ತು ಪಟ್ಟಣಗಳಲ್ಲಿರತಕ್ಕ ಕೊಳಚೆ ಪ್ರದೇಶಗಳ ಹಿಂದುಳಿದ ಪ್ರದೇಶಗಳ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಯಾವ ರೀತಿ ತರಬೇತಿ ನೀಡಿ ಪ್ರಾಥಮಿಕ ಶಾಲೆಗಳಿಗೆ ಹೋಗಲು ಅನುಕೂಲ ಮಾಡಿಕೊಟ್ಟಿದ್ದೇವೋ ಅದೇ ರೀತಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೂ ಮಾಡಬೇಕೆಂದು ಮೊದಲು ಮಾತನಾಡಿದ ಖಾರ್ಗೆಯವರು ಮತ್ತು ಕೊನೆಯಲ್ಲಿ ಮಾತನಾಡಿದ ಹನುಮಂತ ರಾವ್ ದೇಸಾಯಿಯವರು ಹೇಳಿರುವುದಲ್ಲದೆ ಎಲ್ಲಾ ಸದಸ್ಯರೂ ಒಂದಲ್ಲ ಒಂದು ರೀತಿಯಲ್ಲಿ ಇದೇ ರೀತಿಯ ಅಭಿಪ್ರಾಯಗಳನ್ನು ಹೇಳಿದ್ದಾರೆ. ಹಂತ ಹಂತವಾಗಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ವರ್ಷ 2 ಸಾವಿರ ಪೂರ್ವಪ್ರಾಥಮಿಕ ಶಾಲೆಗಳನ್ನು ಅಂದರೆ ಶಿಶುವಿಹಾರಗಳನ್ನು ತೆರೆಯಬೇಕು ಎಂದು ಸರ್ಕಾರ ಆಲೋಚನೆ ಮಾಡಿದೆ. ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಯೋಜನೆ ಇಲ್ಲ ಎಂದು ಮಾನ್ಯ ಹಿರಿಯ ಶಾಸಕರಾದ ಕೆ. ಹೆಚ್. ರಂಗನಾಥ್ ಅವರು ಹೇಳಿದರು. ಈ ವರ್ಷ 1983–84ರಿಂದ 1990–94ರ ವರೆಗೆ 65 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕಕ್ಕೆ ಸಂಬಂಧಪಟ್ಟಂತೆ ದೀರ್ಘವಾದ ಯೋಜನೆಯೊಂದನ್ನು ತಯಾರು ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಯೋಜನೆ ಇಲ್ಲ ಎಂದು ಹಿಂದೆ ಇದ್ದುದನ್ನು ನೋಡಿ ಹೇಳಿದ್ದಾರೆಂದು ಭಾವಿಸಿಕೊಂಡಿದ್ದೇನೆ. ಈ ವರ್ಷ ಈ ಯೋಜನೆಯನ್ನು ತಯಾರು ಮಾಡಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಅಂಗವಾಗಿ ಮುಂದಿನ ವರ್ಷ 2 ಸಾವಿರ ಶಿಶುವಿಹಾರಗಳನ್ನು ತೆರೆಯುತ್ತೇವೆ. 300 ಜನಸಂಖ್ಯೆ ಇರುವ ಕಡೆ ಪಾಠಶಾಲೆಗಳನ್ನು ತೆರೆಯುತ್ತೇವೆ. 30 ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗೆ ಮಕ್ಕಳು ಬಂದರೆ ಅವರೆಲ್ಲರಿಗೂ ಪ್ರಾಥಮಿಕ ಶಾಲೆಗಳನ್ನು ಕೊಡಬೇಕೆಂದು ಈ ಸರ್ಕಾರ ತೀರ್ಮಾನ ಮಾಡಿದೆ. ಆದ್ದರಿಂದ ಈ ರಾಜ್ಯದಲ್ಲಿ ಇರತಕ್ಕಂಥ ಸುಮಾರು 36 ಸಾವಿರ ಪ್ರಾಥಮಿಕ ಶಾಲೆಗಳು ಏನಿವೆ ಅವುಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಉಪಾಧ್ಯಾಯರೂ ಕೂಡ ಬೇಕಾಗುತ್ತಾರೆ. ಈ ದೃಷ್ಟಿಯಿಂದ ಇರತಕ್ಕ ಒಂದು ಲಕ್ಷದ ಆರು ಸಾವಿರದ ಎಂಬತ್ತೈದು ಶಿಕ್ಷಕರ ಸಂಖ್ಯೆ ಏನಿದೆ, ಇವರಲ್ಲಿ ಸುಮಾರು ಹದಿನೇಳು ಸಾವಿರ ಶಾಲೆಗಳಲ್ಲಿ ಏಕೋಪಾಧ್ಯಾಯ ಶಿಕ್ಷಕರು ಇದ್ದಾರೆ. ಅದನ್ನು ಪರಿವರ್ತನೆ ಮಾಡತಕ್ಕಂಥ ಒಂದು ಯೋಜನೆ ಇದೆ. ಬಹುಶಃ ಹಳ್ಳಿಗಳಲ್ಲಿ ಒಂದು ಶಾಲೆಯಲ್ಲಿ ಒಬ್ಬರೇ ಉಪಾಧ್ಯಾಯರು ಇದ್ದರೆ ಅವರು ರಜ ಹಾಕಿಬಿಟ್ಟರೆ ಮುಂದೆ ಮಕ್ಕಳಿಗೆ ಪಾಠಪ್ರವಚನ ಮಾಡುವುದಕ್ಕೆ ಯಾರೂ ಇರುವುದಿಲ್ಲವೆಂದು ತಿಳಿದು ಹಂತಹಂತವಾಗಿ ಇದನ್ನು ಹೆಚ್ಚು ಮಾಡಬೇಕೆಂದು ಮುಂದಿನ ವರ್ಷ ಎರಡು ಸಾವಿರ ಹೊಸ ಶಾಲೆಗಳನ್ನು ತೆರೆಯತಕ್ಕದ್ದು, ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡತಕ್ಕದ್ದು, ಈ ಅಂಶಗಳನ್ನೂ ಕೂಡ ಅದರಲ್ಲಿ ಅಳವಡಿಸಿಕೊಂಡಿದ್ದೇವೆ. ಬಹುಶಃ ಕಟ್ಟಡಗಳನ್ನು ಕಟ್ಟತಕ್ಕಂಥ ಕಾಲದಲ್ಲಿಯೇ ಇದುವರೆಗೆ ಸುಮಾರು 1066 ಕಟ್ಟಡಗಳನ್ನು ಈ ವರ್ಷ ಎನ್. ಆರ್. ಇ. ಪಿಯಲ್ಲಿ ಕಟ್ಟಿಸಿದ್ದೇವೆ ಎಂಬುದಾಗಿ ಸರ್ಕಾರಕ್ಕೆ ವರದಿ ಬಂದಿದೆ. ಇನ್ನು ಉಳಿದಂಥ ಹೊಸ ಕಟ್ಟಡಗಳನ್ನು ಕಟ್ಟಿಸತಕ್ಕದ್ದು ನಮ್ಮ ಮುಂದೆ ಇದೆ. ಈಗ. ಎಲ್ಲಿ ಇರತಕ್ಕ ಕಟ್ಟಡಗಳು ಬಿದ್ದು ಹೋಗಿವೆ. ಅವುಗಳನ್ನು ರಿಪೇರಿ ಮಾಡುವುದಕ್ಕೆ ದುಡ್ಡು ಇಲ್ಲವೆಂದು ಹೇಳಿದ್ದಾರೆ. ಈ ವರ್ಷ ಅರವತ್ತೈದು ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟುಕೊಂಡು ರಿಪೇರಿ ಕೆಲಸ, ಬಿದ್ದುಹೋಗಿರತಕ್ಕಂಥ ಕಟ್ಟಡಗಳ ದುರಸ್ತಿ ಮಾಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ರಿಪೇರಿ ಮಾಡುವುದಕ್ಕೆ ಆಗದೇ ಇದ್ದರೆ ಹೊಸ ಕಟ್ಟಡ ಕಟ್ಟಬೇಕೆಂಬ ಯೋಜನೆಯನ್ನು ನಾವು ಇಟ್ಟುಕೊಂಡಿದ್ದೇವೆ.

ಅದಕ್ಕೋಸ್ಕರ ನಾನು ಹೆಚ್ಚಿಗೆ ಲಂಬಿಸದೆ ಇಷ್ಟು ಮಾತ್ರ ಹೇಳಬಲ್ಲೆ. ಏರ್‌ಮಾರ್ಕ್ ಆಫ್ ರಿಪೇರ್ಸ್‌ಗಾಗಿ ಅರವತ್ತೈದು ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ ಎಂದು ತಮಗೆ ಸಂತೋಷದಿಂದ ತಿಳಿಸುತ್ತಿದ್ದೇನೆ. ಬಹುಶಃ ಇದುವರೆಗೂ ಕೂಡ 9 ಕೋಟಿ 20 ಲಕ್ಷ. ರೂಪಾಯಿಗಳು ಪ್ರಾಥಮಿಕ ಶಾಲೆಗಳಲ್ಲಿ ಖರ್ಚಾಗಿದೆ. ಈ ಯೋಜನೆಯೇತರ ಬಾಬಿನಲ್ಲಿ 136·47 ಕೋಟಿ ರೂಪಾಯಿಗಳು ಖರ್ಚಾಗಿದೆ. ಈ ಪ್ರಾಥಮಿಕ ಶಾಲೆಗಳನ್ನು ಕಟ್ಟುವುದಕ್ಕೆ, ದುರಸ್ತಿ ಮಾಡುವುದಕ್ಕೆ ತೊಂಬತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಒಪ್ಪಿದೆ. ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಿಸತಕ್ಕದ್ದು, ಅವರಿಗೆ ತರಬೇತಿ ಕೊಡತಕ್ಕದ್ದರ ಬಗ್ಗೆ ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ 13 ಸಾವಿರ ಉಪಾಧ್ಯಾಯರ ಜಾಗಗಳು ಖಾಲಿ ಇವೆ. ಮೊದಲಿನಿಂದಲೂ ಕೂಡ ಈ ಹುದ್ದೆಗಳನ್ನು ಭರ್ತಿ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆದರೂ ಕೂಡ ಹಿಂದಿನ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಸುಮಾರು ಏಳು ಸಾವಿರ ಚಿಲ್ಲರೆ ಉಪಾಧ್ಯಾಯರನ್ನು ಹಂಗಾಮಿಯಾಗಿ ನೇಮಿಸಿಕೊಂಡಿದ್ದಾರೆ. ಉಳಿದಿರತಕ್ಕಂಥ ಆರು ಸಾವಿರ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳನ್ನು ಕೂಡ ಪ್ರಕಟಿಸಿದ್ದೇವೆ. ಅದರ ಮಧ್ಯ ಶ್ರೇಷ್ಠ ನ್ಯಾಯಾಲಯ ಹಂಗಾಮಿಯಾಗಿ ಯಾರನ್ನೂ ನೇಮಿಸಕೊಳ್ಳಕೂಡದೆಂದು ಆದೇಶ ಕೊಟ್ಟಿದ್ದರಿಂದ ಸಧ್ಯಕ್ಕೆ ಈ ಹುದ್ದೆಗಳಿಗೆ ಹತ್ತು ರೂಪಾಯಿ ಕಡಿಮೆ ಸಂಬಳದಲ್ಲಿ ನೇಮಿಸಿಕೊಳ್ಳಬೇಕೆಂದು ನಿಯಮಾವಳಿಗಳನ್ನು ಮಾಡಿದ್ದೇವೆ. ಇಷ್ಟೇ ಅಲ್ಲ, ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಿಂದಿನ ಸರ್ಕಾರದವರು 29 ರಿಂದ 40 ವರ್ಷದ ವರೆಗಿನವರು ಮಾತ್ರ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳಬಹುದೆಂದು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದರಿಂದ ಅವರಿಗೆ ಬಹಳ ಕಷ್ಟವಾಗಿತ್ತು. ಇವತ್ತು ನಾವು 18 ವರ್ಷಗಳಿಂದ 48 ವರ್ಷಗಳವರೆಗೆ ವಯೋಮಿತಿಯನ್ನು ನಿಗದಿಮಾಡಿ ಅವರೆಲ್ಲರಿಗೂ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮತ್ತು ಅರ್ಜಿ ಶುಲ್ಕ ಐದು ರೂಪಾಯಿ ಇದ್ದುದನ್ನು ಒಂದು ರೂಪಾಯಿಗೆ ಇಳಿಸಿದ್ದೇವೆ. ಇವತ್ತು ಸ್ಟೈಪೆಂಡರಿ ಪದವೀಧರರು, ಹಂಗಾಮಿ ಶಿಕ್ಷಕರು ಬಾರಿಬಾರಿಗೂ ಅರ್ಜಿ ಹಾಕುವುದು ಕಷ್ಟವಾಗುತ್ತದೆ ಎಂದು ಹೇಳಿದ್ದರಿಂದ ಅದನ್ನು ಕೂಡ ಬದಲಾವಣೆ ಮಾಡಿ ಒಂದು ರೂಪಾಯಿ ಶುಲ್ಕದೊಡನೆ ಒಂದು ಅರ್ಜಿ ಕೊಟ್ಟರೆ ಸಾಕು ಎಂದು ಮಾಡಿದ್ದರಿಂದ ಅವರೂ ಕೂಡ ಇದರಿಂದ ತೃಪ್ತರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅರ್ಜಿ ಹಾಕಿದ ಆರು ತಿಂಗಳ ಒಳಗೆ ಅವರು ಹಂಗಾಮಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರೆ ಅವರು ಈ ಹುದ್ದೆಗಳಿಗೆ ಅರ್ಜಿ ಹಾಕುವುದಕ್ಕೆ ಅರ್ಹರಾಗಿರುತ್ತಾರೆ. ಮತ್ತೆ ಒಂದು ವರ್ಷ ಹಿಂದೆ ಕೆಲಸದಲ್ಲಿ ಇದ್ದರೆ ಸ್ಟೈಪೆಂಡರಿ ಪದವೀಧರರೂ ಕೂಡ ಇದನ್ನು ಪಡೆಯಬಹುದೆಂದು ಮಾಡಿದ್ದೇವೆ. ಇಷ್ಟೆಲ್ಲಾ ಬದಲಾವಣೆಗಳನ್ನು ನಿಯಮಾವಳಿಗಳಲ್ಲಿ ಮಾಡಿದ್ದರಿಂದ ಅವರೂ ಬಹುಮಟ್ಟಿಗೆ ಸಮಾಧಾನಗೊಂಡಿದ್ದಾರೆ. ಬಹುಶಃ ಮುಂದಿನ ವರ್ಷ ಬೇಕಾಗತಕ್ಕಂಥ ಇನ್ನೂ ಐದು ಸಾವಿರ ಉಪಾಧ್ಯಾಯರು ಏನು ಇದ್ದಾರೆ, ಅವರನ್ನು ಭರ್ತಿ ಮಾಡುವುದರಿಂದ ಈ ಆರು ಸಾವಿರ ಮತ್ತು ಐದು ಸಾವಿರ ಒಟ್ಟು 11 ಸಾವಿರ ಅಭ್ಯರ್ಥಿಗಳನ್ನು ಭರ್ತಿ ಮಾಡತಕ್ಕಂಥ ಅವಕಾಶ ಇರುವುದರಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿರವವರು ಯೋಚನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಕಾನೂನುಬದ್ಧವಾಗಿ ಅವರನ್ನು ಭರ್ತಿಮಾಡುವುದಕ್ಕೆ ಅವರು ಈ ರೀತಿ ಡ್ರಿಲ್ ಮಾಡಬೇಕಾಗುತ್ತದೆ. ಹಂಗಾಮಿ ಶಿಕ್ಷಕರ ವಿಷಯದಲ್ಲಿ ಅವರಿಗೆ ತರಬೇತಿ ಸಾಕಷ್ಟು ಸಿಗುತ್ತಿಲ್ಲವಾದ್ದರಿಂದ ಇನ್ನುಮುಂದೆ ಹತ್ತು ಪರ್ಸೆಂಟ್‌ನಷ್ಟು ಹೆಚ್ಚಿನ ಪ್ರಮಾಣ ಮಾಡಿ ಟಿ.ಸಿ.ಎಚ್.ಗೆ ಅವರು ಕುಳಿತುಕೊಳ್ಳಲಿಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ.

ಇನ್ನು ಪಠ್ಯ ಪುಸ್ತಕಗಳ ವಿಚಾರದಲ್ಲಿ ಏನೇನು ಲೋಪದೋಷಗಳು ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಬಹುಶಃ ಲಕ್ಷಾಂತರ ಪುಸ್ತಕಗಳನ್ನು ನಾವು ಪ್ರಕಟಣೆ ಮಾಡುವಾಗ ಇಂತಹ ಲೋಪದೋಷಗಳು ಸಾಮಾನ್ಯವಾಗಿ ಆಗುತ್ತವೆ. ಸರ್ಕಾರಿ ಮುದ್ರಣಾಲಯದಲ್ಲಿ ಅಲ್ಲದೆ ಖಾಸಗಿ ಮುದ್ರಣಾಲಯಗಳಲ್ಲಿ ಇಂತಹ ಲೋಪದೋಷಗಳು ಆಗಿರುವಂತಹ ನಿದರ್ಶನಗಳಿವೆ. ಇದು ಆಗಬಾರದಾಗಿತ್ತು. ಆದರೂ ಕೂಡ ಇಂತಹ ಲೋಪದೋಷಗಳು ಎಲ್ಲಿ ಕಂಡುಬಂದಿವೆ, ಇಂತಹ ಪುಸ್ತಕಗಳನ್ನು ವಾಪಸ್ಸು ತೆಗೆದುಕೊಂಡು ಬೇರೆ ಪುಸ್ತಕ ಕೊಡಲು ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಪಠ್ಯ ಪುಸ್ತಕಗಳಲ್ಲಿ ಯಾವ್ಯಾವ ವಿಷಯಗಳು ಇರಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು, ರಂಗನಾಥ್ ಮತ್ತು ಮೊದಲಾದವರು ಯಾವ್ಯಾವ ವಿಷಯಗಳು ಪಠ್ಯಪುಸ್ತಕಗಳಲ್ಲಿ ಇರಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಶಿಕ್ಷಣ ಎಂದರೆ ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ ವ್ಯಕ್ತಿಯಲ್ಲಿ ಜಡತ್ವವನ್ನು ನೀಗಿ ವಿಕಾಸದತ್ತ ಕರೆದೊಯ್ಯುವುದು ಶಿಕ್ಷಣದ ಗುರಿ. ಬಹುಶಃ ನಾವೆಲ್ಲರೂ ವಿದ್ಯಾರ್ಥಿಯ ಭೌತಿಕ, ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ, ಸರ್ವತೋಮುಖವಾದ ಬೆಳವಣಿಗೆಗೆ ಅವಶ್ಯಕವಾದ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಎಲ್ಲ ರೀತಿಯ ಪರಿಸರವನ್ನು ಸೃಷ್ಟಿ ಮಾಡಬೇಕು. ಇದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸಮಾಜದಲ್ಲಿರತಕ್ಕ ಪ್ರತಿಯೊಬ್ಬರೂ ಕೂಡ ಇದನ್ನು ಅರಿತುಕೊಳ್ಳಬೇಕು. ಮಾನ್ಯ

ಕೃಷ್ಣನ್‌ರವರು ಮಾತನಾಡುತ್ತಾ: ಅವಾಸ್ತಿಕವಾದ ವಿಷಯ ಅಭ್ಯಾಸ ಕ್ರಮದಲ್ಲಿ ಇದೆಯೆಂದು ಹೇಳಿದರು. ರಾಜ್ಯಾಂಗದಲ್ಲಿರುವ ಹಾಗೆ ವಿಷಯಗಳು ನಮ್ಮ ರಾಜ್ಯದಲ್ಲಿ ಹಾಗೂ ನಮ್ಮ ದೇಶದಲ್ಲಿ ಅನೇಕ ಮತಗಳು, ಸಿದ್ಧಾಂತಗಳು, ಧರ್ಮಗಳು ಇವೆ. ಎಲ್ಲವನ್ನೂ ಸಮಾನವಾಗಿ ನೋಡಿಕೊಂಡು ಹೋಗಬೇಕೆಂದು ನಮ್ಮ ಹಿರಿಯರು ಹೇಳಿಕೊಟ್ಟಿರುವುದರಿಂದ, ಭಾವೈಕ್ಯತೆಯನ್ನು ಮೂಡಿಸುವುದಕ್ಕೆ, ಸಮಾನತೆಯನ್ನು ಬೆಳೆಸುವುದಕ್ಕೆ ಪಾಠ ಪ್ರವಚನಗಳಲ್ಲಿ ಅವಕಾಶ ಇದೆ. ಇದನ್ನು ಒಂದೇ ದೃಷ್ಟಿಯಿಂದ ನೋಡಬಾರದೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಪಠ್ಯ ಪುಸ್ತಕಗಳ ವಿಷಯದಲ್ಲಿ ಹೊರಬಾರದಷ್ಟು ಹೊರೆಯನ್ನು ಹಾಕಿದ್ದಾರೆ; ನುಂಗಬಾರದಷ್ಟು ಚೆಂಡನ್ನು ಇಟ್ಟಿದ್ದೀರಿ ಎಂದು ಮಾನ್ಯ ರಂಗನಾಥ್‌ರವರು ಹೇಳಿದರು. ಹಿಂದಿನ ಕಾಲದಿಂದಲೂ ಮಾಡುವಂಥ ಅಕ್ಷರ ಅಭ್ಯಾಸ, ವ್ಯಾಕರಣ ಹಾಗೂ ಒತ್ತಕ್ಷರಗಳು ಬಾಲಬೋಧೆ ಇವತ್ತು ಇಲ್ಲ. ವೈಜ್ಞಾನಿಕ ವಿಷಯಗಳನ್ನು ಸಣ್ಣ ಮಕ್ಕಳು ತಿಳಿದುಕೊಳ್ಳುತ್ತಿರುವುದರಿಂದ ಅಂಥ ಪರಿಸರದಲ್ಲಿ ಯಾವ ಯಾವ ಪಾಠಗಳನ್ನು ಕಲಿಸಿಕೊಡಬೇಕೆಂಬ ಬಗ್ಗೆ ತಜ್ಞರು ವಿಮರ್ಶೆ ಮಾಡಿದ್ದಾರೆ. ಇವತ್ತು ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಮಾನ್ಯ ಸದಸ್ಯರು ಹೇಳಿದಂಥ ವಿಷಯಗಳ ಬಗ್ಗೆ ಮಾರ್ಪಾಡುಗಳನ್ನು ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡುತ್ತಾ; ಅದರಲ್ಲಿಯೂ ಪ್ರಾಥಮಿಕ ಶಾಲೆಗಳಿಗೆ ಸಿಗತಕ್ಕಂಥ ಆದ್ಯತೆ ಬಗ್ಗೆ ಎಲ್ಲರೂ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮಾತನಾಡಿದವರೆಲ್ಲಾ ಇದಕ್ಕೆ ಕಡಿಮೆ ಹಣ ಕೊಟ್ಟಿದ್ದಾರೆಂದು ಹೇಳಿದರು. ಎಲ್ಲಾ ವಿಷಯಗಳನ್ನು ವಿದ್ಯಾಭ್ಯಾಸದ ಬಗ್ಗೆ ಪಕ್ಷಾತೀತವಾಗಿ ಪರಿಗಣಿಸಬೇಕೆಂದು ಹೇಳಿದ್ದಾರೆ. ಲೋಪದೋಷಗಳು ಇವತ್ತು ಸೃಷ್ಟಿಯಾಗಿಲ್ಲ; ಮಾನ್ಯ ಭಾರ್ಗವರ ಕಾಲದಿಂದಲೂ ಇವೆ. ನನಗೇನು ಅನುಕಂಪ ಇದೆ; ಅದೇ ಅನುಕಂಪ ಅವರಿಗೂ ಇತ್ತೆಂದು ಕಾಣುತ್ತೆ. ಏಕಕಾಲದಲ್ಲಿ ಎಲ್ಲಾ ಕಟ್ಟಡಗಳನ್ನು ಒಟ್ಟಿಗೆ ಕಟ್ಟಿಸುವುದಕ್ಕೆ ಆಗುವುದಿಲ್ಲ. ಎಲ್ಲಾ ಉಪಾಧ್ಯಾಯರುಗಳನ್ನು ಒಂದೇ ಸಾರಿ ನೇಮಕ ಮಾಡುವುದಕ್ಕೆ ಅನೇಕ ರೀತಿಯ ಎಡರು ತೊಡರುಗಳು ಇವೆ. ಒಟ್ಟಿನಲ್ಲಿ ಇನ್ನೊಂದು ವರ್ಷದಲ್ಲಿ ಉಪಾಧ್ಯಾಯರ ಖಾಲಿ ಜಾಗಗಳನ್ನು ತುಂಬುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ; ಅದರಂತೆ ಭರ್ತಿ ಮಾಡಲಾಗುವುದಕ್ಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಈ ಸದನಕ್ಕೆ ಆ ರೀತಿ ಇವತ್ತು ಆಶ್ವಾಸನೆ ಕೊಡುತ್ತೇನೆ. ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿಯೂ ಉಪಾಧ್ಯಾಯರ ಕೊರತೆ ಇದೆ. ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಪ್ರೌಢಶಾಲೆಗಳನ್ನು ಕೊಟ್ಟಿರುವುದರ ಬಗ್ಗೆ ಕೂಡ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಪ್ರೌಢಶಾಲೆಗಳನ್ನು ಕೊಟ್ಟ ತಕ್ಷಣ ಎಲ್ಲಾ ಸರಿಹೋಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಗ್ರಾಮಾಂತರ ಪ್ರದೇಶಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಒದಗಿಸುವ ದೃಷ್ಟಿಯಿಂದ ಹಾಗೂ ಮಕ್ಕಳಿಗೆ ಈಗ ಇರತಕ್ಕ ತೊಂದರೆಯನ್ನು ತಪ್ಪಿಸುವ ದೃಷ್ಟಿಯಿಂದ ವಿಕೇಂದ್ರೀಕರಣ ಮಾಡಿ ಸಾಧ್ಯವಾದ ಮಟ್ಟಿಗೆ ವಿದ್ಯಾ ಇಲಾಖೆಯ ನಿರ್ದೇಶಕರಿಂದ ಸಲಹೆಗಳನ್ನು ತರಿಸಿಕೊಂಡು ಹಳ್ಳಿಗಳಿಗೆ ಪ್ರೌಢಶಾಲೆಗಳನ್ನು ಕೊಟ್ಟಿದ್ದೇವೆ. ಹೊಸ ಸರ್ಕಾರ ಬಂದಮೇಲೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಎಷ್ಟು ಪ್ರೌಢಶಾಲೆಗಳಿವೆ? ಎಷ್ಟು ಶಾಲೆಗಳನ್ನು ಕೊಡಬೇಕಾಗುತ್ತದೆ ಎನ್ನುವ ವಿವರಗಳನ್ನು ತರಿಸಿಕೊಂಡು ಮಂಜೂರು ಮಾಡಿದೆ. ಹಿಂದಿನ ಸರ್ಕಾರದವರು ಮೊದಲಿನಿಂದಲೂ ಸರಿಯಾಗಿ ಮಾಡಿಕೊಂಡು ಬಂದಿದ್ದರೆ ಈ ಒಂದು ಇಂಬಾಲೆನ್ಸ್ ಆಗುತ್ತಿರಲಿಲ್ಲ ಎನ್ನುವ ವಿಷಯವನ್ನು ಮಾನ್ಯ ರಂಗನಾಥ್‌ರವರಿಗೆ ತಿಳಿಸುತ್ತೇನೆ. ಇದಕ್ಕೆ ನಾನು ಹೊಣೆಯಲ್ಲ. ವಿಕೇಂದ್ರೀಕರಣ ಮಾಡಿರುವಂಥ ಉದ್ದೇಶ, ಪಟ್ಟಣಕ್ಕೆ ಬಂದು ಮಕ್ಕಳೆಲ್ಲರೂ ಒಂದೇ ಕಡೆ ಓದುವುದು ಕಷ್ಟವಾಗುತ್ತದೆ. ಹತ್ತಿರದಲ್ಲಿಯೇ ಶಾಲೆಗಳನ್ನು ಮಾಡುವುದರಿಂದ ಬಡವರ ಮಕ್ಕಳಿಗೂ ಅನುಕೂಲವಾಗುತ್ತದೆ ಎಂದು ಯೋಚನೆ ಮಾಡಿ 300 ಪ್ರೌಢಶಾಲೆಗಳನ್ನು ಕೊಟ್ಟಿದ್ದೇವೆ. 100 ಪ್ರೌಢಶಾಲೆಗಳನ್ನು ಕಿರಿಯ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಿದ್ದೇವೆ. ಇರತಕ್ಕಂಥ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸಿದ್ದೇವೆ. 4 ಸ್ಥಳಗಳಲ್ಲಿ ಸ್ವತಂತ್ರವಾಗಿರುವ ಜೂನಿಯರ್ ಕಾಲೇಜುಗಳನ್ನು ಮಾಡಿದ್ದೇವೆ. ಮಲ್ಲೇಶ್ವರಂನಲ್ಲಿ ಹೆಣ್ಣು ಮಕ್ಕಳಿಗಾಗಿ ಒಂದು ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದಂಥ ಒಂದು ಕಿರಿಯ ಕಾಲೇಜನ್ನು ಕೊಡಬೇಕೆಂದು ಮನವಿ ಬಂದಾಗ ಕೋಲಾರ ಜಿಲ್ಲೆಯಲ್ಲಿ ಅಂಥ ಒಂದು ಕಾಲೇಜನ್ನು ಸ್ಥಾಪನೆ ಮಾಡಿದ್ದೇವೆ. ಹೀಗೆ ಮಾಡುವಾಗ 5–10 ಮೈಲಿಗಳ ಅಂತರವನ್ನು ನೋಡಿಕೊಂಡು ಪ್ರಾರಂಭ ಮಾಡಿದ್ದೇವೆ. ಇದು ಪಟ್ಟಣಕ್ಕೆ ಅನ್ವಯಿಸುವುದಿಲ್ಲ. ಹೊಸದಾಗಿ ಕೊಟ್ಟಂತಹ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡುವ ವಿಷಯದಲ್ಲಿ ಗಮನ ಕೊಟ್ಟಿದ್ದೇವೆ. ಅನುಭವ ಇರುವ ಉಪಾಧ್ಯಾಯರುಗಳನ್ನು ಹೊಸ ಶಾಲೆಗಳಿಗೆ ಮತ್ತು ಜೂನಿಯರ್ ಕಾಲೇಜುಗಳಿಗೆ ಕೊಟ್ಟಿದ್ದೇವೆ. ಪ್ರೌಢಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡತಕ್ಕವರು ಲೋಕಸೇವಾ ಆಯೋಗದವರು. 93 ಅಭ್ಯರ್ಥಿಗಳನ್ನು ಚುನಾಯಿಸಿದ ತಕ್ಷಣ ಅವರ ವಿದ್ಯಾರ್ಹತೆಯನ್ನು ಕೇಳದೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಬೇಗ ಆದೇಶ ನೀಡಿ ಕಳುಹಿಸಿಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದೇ ರೀತಿ ಕಿರಿಯ ಕಾಲೇಜುಗಳಿಗೆ ಕೆಲವು ಅಭ್ಯರ್ಥಿಗಳು ಬಂದಿದ್ದರು. ಸರ್ಕಾರ ಕೂಡಲೇ ಆಜ್ಞೆ ಹೊರಡಿಸಿ 63 ಜನರನ್ನು ನೇಮಕ ಮಾಡಿದೆ. ಇರತಕ್ಕಂಥ ಉಪನ್ಯಾಸಕರುಗಳಿಗೆ, ರೀಡರ್ಸ್‌ಗಳಿಗೆ

ಹಾಗೂ ಪ್ರೊಫೆಸರುಗಳಿಗೆ ಬಡ್ತಿ ಕೊಡುವ ಸಲುವಾಗಿ ಸೀನಿಯಾರಿಟಿ ಪಟ್ಟಿಯನ್ನು ಹಂಗಾಮಿಯಾಗಿ ತಯಾರು ಮಾಡಿದ್ದೇವೆ. ಹಿಂದಿನಿಂದಲೂ ಇದನ್ನು ಮಾಡದೇ ಇದ್ದುದರಿಂದ ಇವರಲ್ಲಿ ಎರಡು ಗುಂಪುಗಳಾಗಿವೆ. ಒಂದು ಗುಂಪು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿದೆ. ಈಗ ಅದನ್ನು ಒಂದು ಅಂತಿಮ ಘಟಕ್ಕೆ ತಂದಿದ್ದೇವೆ. ಎರಡೂ ವರ್ಗಗಳಿಗೂ ನ್ಯಾಯ ದೊರಕಿಸುವ ವ್ಯವಸ್ಥೆ ಮಾಡಲಾಗುವುದು. ಹಿಂದಿನಿಂದಲೂ ಬಂದಿರತಕ್ಕ ಉಪನ್ಯಾಸಕರುಗಳಿಗೆ, ರೀಡರುಗಳಿಗೆ ಹಾಗೂ ಪ್ರೊಫೆಸರುಗಳಿಗೆ ವಿದ್ಯಾರ್ಹತೆಯಲ್ಲಿ ರಿಯಾಯಿತಿ ಕೊಡಬೇಕೆಂದು ಕೇಳಿದ್ದಾರೆ; ಇದರ ಬಗ್ಗೆ ತಿದ್ದುಪಡಿ ಮಾಡಬೇಕಾಗುತ್ತದೆ. 2ನೇ ದರ್ಜೆಯಲ್ಲಿ ಪಾಸಾಗಿರತಕ್ಕಂಥ ಉಪನ್ಯಾಸಕರುಗಳಿಗೆ ಹಾಗೂ ಪ್ರೊಫೆಸರುಗಳಿಗೆ ಬಡ್ತಿ ಕೊಡುವ ಬಗ್ಗೆ ಕೂಡ ಯೋಚನೆ ಮಾಡಲಾಗುವುದು. ಜೊತೆಗೆ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ತೆಗೆದುಕೊಳ್ಳಲಾಗುವುದು. ಇವೊತ್ತು 50 ಸಹಸ್ರ ರೂಪಾಯಿಗಳ ಒಂದು ಪ್ರೌಢಶಾಲೆಯನ್ನು ಕೊಡಬೇಕಿದ್ದರ, ಸಂಬಂಧಪಟ್ಟವರು ಇಷ್ಟು ಹಣ ಡಿಪಾಸಿಟ್ ಮಾಡಬೇಕಾದ್ದು ಇರುತ್ತದೆ. 5 ಎಕರೆ ಜಮೀನು ಕೊಡಬೇಕಾಗಿರುತ್ತದೆ. ಈ ಎಲ್ಲಾ ಷರತ್ತುಗಳನ್ನು ಹಾಕಿದಾಗ ಹಳ್ಳಿಯವರು ನಾವು ಹಂತಹಂತವಾಗಿ ಕೊಡಲ್ಲಿಕ್ಕೆ ಪ್ರಯತ್ನ ಮಾಡುತ್ತೇವೆ. ಸಾಧ್ಯವಾದಷ್ಟು ಮಟ್ಟಿಗೂ ಮಕ್ಕಳಿಗೆ ವಿದ್ಯಾಭ್ಯಾಸ ಕೊಡತಕ್ಕದ್ದು ಮಾಡಿ ಎಂದು ಹೇಳುವಾಗ ನಾವು ಧಾರಾಳವಾಗಿ ಈ ರೀತಿಯ ಭಾವನೆಯಿಂದ ಈ ಕೆಲಸ ಮಾಡಿದ್ದೇವೆ. ಈ ಕಡೆಯ ಮತ್ತು ಆ ಕಡೆಯ ಸದಸ್ಯರು ಪ್ರೌಢ ಶಾಲೆಗಳನ್ನು ಕೊಡುವುದರಲ್ಲಿ ಬಹಳ ಉದಾರಿಗಳಾಗಿದ್ದೀರಿ ಎಂದು ಹೇಳಿದ್ದಾರೆ. ಮಾನ್ಯ ಖರ್ಗೆಯವರು ಎಲೆಯಾಳ್‌ದಲ್ಲಿ ಒಂದು ಕಡೆ ಸ್ಕೂಲನ್ನು ಕೊಟ್ಟು ಅದನ್ನು ಬದಲಾಯಿಸಿದ್ದೀರಿ ಮತ್ತು ಅಲ್ಲಿನ ಸ್ಥಳದ ಬಗ್ಗೆ ಭೂಪಟ ಗೊತ್ತಾಗಲಿಲ್ಲ ಎಂದು ಹೇಳಿದರು. ಅಲ್ಲಿಗೆ ಯಾವ ಪಾಠಶಾಲೆ ಮಂಜೂರು ಮಾಡಿದ್ದೇವೆ. ಅದನ್ನು ನಡೆಸಿಕೊಂಡು ಹೋಗಲಿ ಎಂದು ಸರ್ಕಾರದಿಂದ ಆದೇಶ ಹೋಗುತ್ತಿದೆ. ಒಟ್ಟಿನಲ್ಲಿ ಪಕ್ಷಾತೀತವಾಗಿ ಶಿಕ್ಷಣವನ್ನು ಎಲ್ಲ ಕಡೆ ಕೊಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಕ್ಷಾತೀತವಾಗಿ ಬದಲಾವಣೆ ಮಾಡಿಲ್ಲ ಎಂದು ಆತ್ಮಸಾಕ್ಷಿಯಾಗಿ ಹೇಳಿದರೆ ಸಾಕು.

ಶ್ರೀ ಬಿ. ರಾಚಯ್ಯ.—ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ಕಂದಕೂರು—ಅಲ್ಲಿ ಮೂವತ್ತು ವರ್ಷದಿಂದ ಶಾಲೆ ಕೊಟ್ಟಿರಲಿಲ್ಲ. ನಮ್ಮ ಪಕ್ಷದ ಮಂತ್ರಿಗಳು ಆ ಭಾಗದವರು, ಅವರು ಕೂಡ ಹೇಳಿದರು. ನಾನು ಅವರಿಗೂ ಕೊಟ್ಟಿದ್ದೇನೆ. ನಿಮಗೂ ಕೊಡುತ್ತೇನೆ ಎಂದು ಹೇಳಿದಾಗ ಅವರು, ಅವರಿಗೂ ಶಾಲೆಯನ್ನು ಕೊಡಿ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಅವರಿಗೆ ಎಷ್ಟು ಉದಾರ ಭಾವನೆ ಇತ್ತು ಅಷ್ಟು ಇವರಿಗೆ ಇಲ್ಲ. ಹಿಂದಿನ ಸಾರಿಯೇ ಶಿಫಾರಸ್ಸು ಆಗಿತ್ತು, ಅವರಿಗೆ ಕೊಡಬೇಕಾಗುತ್ತದೆ. ಇದನ್ನು ಪಕ್ಷಾತೀತವಾಗಿ ಮಾಡಿದ್ದೇನೆ. ಈ ದೃಷ್ಟಿಯಿಂದ 300 ಶಾಲೆಗಳಿಂದ, ಮಕ್ಕಳು ಪಟ್ಟಣಕ್ಕೆ ಬರತಕ್ಕ ಕಷ್ಟ ಏನಿತ್ತು ಅದು ಕಡಿಮೆಯಾಗುತ್ತದೆ. ಇನ್ನು ಹಳ್ಳಿಯ ಉಪಾಧ್ಯಾಯರನ್ನು ಹಾಕಬೇಕೆಂದು ಹೊರಟಾಗ ಏನಾಗುತ್ತದೆ ಎಂದರೆ, ಪಟ್ಟಣದಲ್ಲಿ ಮಕ್ಕಳು ಓದುತ್ತಿದ್ದಾರೆಂದು ಏನಾದರೂ ಒಂದು ಸಂಬಂಧ ತಂದು ಅವರು ಹಳ್ಳಿಗೆ ಹೋಗುವುದಿಲ್ಲ. ಪ್ರಾಥಮಿಕ ಶಿಕ್ಷಕರು ಕೂಡ ನಮ್ಮ ಮಕ್ಕಳು ಕಾಲೇಜಿನಲ್ಲಿ ಓದಬೇಡವೆ ಎಂದು ಕೇಳುತ್ತಾರೆ. ಈಗ ನಾವು ಸರ್ಕಾರದ ನಿಯಮಾವಳಿ ಪ್ರಕಾರ ಕೆಲಸ ಮಾಡುತ್ತಿದ್ದೇವೆ.

ಇನ್ನು ವರ್ಗಾವರ್ಗಿ ವಿಷಯದಲ್ಲಿ ಒಂದು ಕಡೆ ಪ್ರಸ್ತಾಪ ಮಾಡಿದರು. ಪ್ರೈಮರಿಸ್ಕೂಲು ಉಪಾಧ್ಯಾಯರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವರ್ಗ ಮಾಡಿದ್ದಾರೆಂದು ಕೆಲವರು ಹೇಳಿದ್ದಾರೆ. ಈ ರೀತಿ ವರ್ಗಾವರ್ಗಿ ಮಾಡುವುದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆಂದು ಹೇಳಿದ್ದಾರೆ. ಅದನ್ನು ಹೇಳಿರುವವರು, ಆ ಕಡೆಯ ಸದಸ್ಯರಾಗಲಿ, ಈ ಕಡೆಯ ಸದಸ್ಯರಾಗಲಿ, ಅವರಿಗೆ ಒಂದು ವಿಚಾರ ನಾನು ತಿಳಿಸಬೇಕೆಂದರೆ, ಯಾರು ಕಷ್ಟದಲ್ಲಿರುತ್ತಾರೆ, ಗಂಡ ಒಂದು ಕಡೆ, ಹೆಂಡತಿ ಮತ್ತೊಂದು ಕಡೆ, ಮತ್ತು ಗಂಡ ರಿಟೈರ್ ಆಗುತ್ತಾನೆ, ಹೆಂಡತಿ ದೂರದಲ್ಲಿದ್ದು ಕಷ್ಟವಾಗುವಂಥ ಸಂದರ್ಭದಲ್ಲಿ, ಹಿಂದುಳಿದವರಿಗೆ, ಹರಿಜನ ಗಿರಿಜನರಿಗೆ ಎಲ್ಲಿ ಮನೆಗಳು ಸಿಕ್ಕುವುದಿಲ್ಲ, ಅಂಥ ಸಂದರ್ಭದಲ್ಲಿ, ಯಾರು ಆಸ್ಪತ್ರೆಯಲ್ಲಿರುತ್ತಾರೆ, ಯಾರು ಕಷ್ಟದಿಂದ ಇರುತ್ತಾರೆ, ಯಾರು ಅನಾರೋಗ್ಯದಿಂದ ನರಳುತ್ತಿರುತ್ತಾರೆ ಅಂಥ ಸಂದರ್ಭಗಳಲ್ಲಿ, ಸರ್ಕಾರದ ನಿಯಮಾವಳಿ 5 ವರ್ಷ ಕಡ್ಡಾಯ ಸೇವೆ ಸಲ್ಲಿಸಬೇಕೆಂದು ಇದ್ದರೂ ಸಹ ಅದನ್ನು ಸಡಿಲಿಸಿ, ಕೆಲವೊಂದು ವರ್ಗಾವರ್ಗಿ ಮಾಡಬೇಕಾಗಿ ಬಂದಿದೆ. ಇದುವರೆಗೂ ಇದು ಮುಖ್ಯ ಮಂತ್ರಿಗಳ ಕೈಯಲ್ಲಿತ್ತು. ಅದನ್ನು ವಿಕೇಂದ್ರೀಕರಣಗೊಳಿಸಿ, ಆಯಾ ಮಂತ್ರಿಗಳೇ ಮಾಡಬೇಕೆಂದು ಮಾಡಿದ್ದಾರೆ. ಅದು ನನಗೆ ಹೆಚ್ಚಿನ ಅನುಕೂಲವಾಗಿದೆ ಎಂದು ಹೇಳುವಬದಲು ಜಾಸ್ತಿ ಹೊರೆಯಾಗಿದೆ ಎಂದು ಹೇಳಬೇಕಾಗಿದೆ. ನಮಗೆ ಬಂದಿರತಕ್ಕ 16 ಸಾವಿರ ಅವಧಿಪೂರ್ಣ ಅರ್ಜಿಗಳನ್ನು ನೋಡಿದಾಗ ನಾವು ಕೊಟ್ಟಿರತಕ್ಕ ವರ್ಗಾವರ್ಗಿ ನೋಡಿದರೆ 3 ಸಾವಿರ ಚಿಲ್ಲರೆ. ಒಟ್ಟು ವರ್ಗ ಆಗಿರತಕ್ಕದ್ದು 8,133 ಏನು ಬಂದಿದೆ, ಅದರಲ್ಲಿ ಅವಧಿಪೂರ್ಣವಾಗಿರತಕ್ಕದ್ದು 3 ಸಾವಿರಕ್ಕೂ ಕಡಿಮೆ ಇದೆ. ಅಂದರೆ ಎಷ್ಟು ಪರ್ಸೆಂಟ್ ಆಯಿತು ? ಒಂದೂವರೆ ಲಕ್ಷ, ಈ ಇಲಾಖೆಯ ಉಪಾಧ್ಯಾಯರ ಸಂಖ್ಯೆ ನೋಡಬೇಕೆಂದಾಗ ನಾವು ವಿಚಕ್ಷಣೆಯಿಂದ ಇದರಲ್ಲಿ ಬಹಳ ಕಡಿಮೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರ ಕೇಳಿಕೆಯ ಮೇಲೆ ಕೊಟ್ಟಿರುವುದರಿಂದ ಅವರಿಗೆ ಟಿ.ಎ., ಡಿ.ಎ. ಬರುವುದಿಲ್ಲ. ಈ ರೀತಿಯಾಗಿ ಮಾನವೀಯತೆಯ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಕಣ್ಣುಮುಚ್ಚಿಬಿಟ್ಟು ಮಾಡಿಲ್ಲ. ಮಾನ್ಯ

ರಂಗನಾಥ್ ಅವರು ಕೇಳಿಕೊಂಡಂತವರದು ವರ್ಗ ಮಾಡಿಲ್ಲ ಎಂದು ಹೇಳಿದರು. ಪತ್ರಿಕೆಗಳಲ್ಲಿ ಈ ಬಗ್ಗೆ ಹೇಳಿಕೆ ಕೊಡುವಂಥದ್ದು, ಇನ್ನೊಂದು ರೀತಿಯಲ್ಲಿ ಅಲ್ಲೋಲ ಕಲ್ಲೋಲವಾಗಿದೆ ಎಂದು ಹೇಳಿದಾಗ 1-6-1983 ರಲ್ಲಿ ಯಾವ ಯಾವದನ್ನೂ ವರ್ಗ ಮಾಡಬೇಕೆಂದು ಮಾಡಿದ್ದೆವೋ ಅದನ್ನು ನಿಲ್ಲಿಸಬೇಕೆಂದು ಕಟ್ಟಿ ಇಟ್ಟಿದ್ದೇವೆ. ಆ ಒಂದು ಗುಂಪಿನಲ್ಲಿ ಇವರದು ಅಪ್ಲಿಕೇಷನ್ ಸೇರಿರಬೇಕು. ಮುಂದಿನ ವರ್ಷ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್‌ಗೆ ನಾವು ಅನುಮತಿ ಕೊಟ್ಟಿದ್ದೇವೆ. ಮಾನ್ಯ ರಂಗನಾಥ್ ಅವರ ಮೇಲೆ ಕೋಪ ಇಲ್ಲ, ನಮಗೆ ಈ ವಿಚಾರದಲ್ಲಿ ಕೆಟ್ಟ ಉದ್ದೇಶವೂ ಇಲ್ಲ. ಕಷ್ಟದಲ್ಲಿರುವವರಿಗೆ, ಕೆಲವು ಸಂದರ್ಭದಲ್ಲಿ ನಾವು ವರ್ಗ ಮಾಡ ಬೇಕಾಗುತ್ತದೆ. ಈ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ನ್ಯಾಯವಾಗಿ ಮಾಡಬೇಕೆಂದು ಕೆಲವರು ಹೇಳಿದ್ದಾರೆ. ಅದನ್ನು ಮಾಡಿದ್ದೇನೆ. ಇನ್ನು ಈ ಟ್ರಾನ್ಸ್‌ಫರ್ ಪವರ್ ಏತಕ್ಕೆ ನೀವೇ ಇಟ್ಟುಕೊಂಡಿದ್ದೀರಿ, ನಿಮ್ಮ ಅಧಿಕಾರಿಗಳಿಗೆ ವಿಕೇಂದ್ರೀಕರಣ ಮಾಡಿ. ನಿಮಗೆ ಭಾರ ಕಡಿಮೆಯಾಗುತ್ತದೆ ಎಂದೂ ಹೇಳಿದ್ದಾರೆ. ಈ ಒಂದು ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ 5 ವರ್ಷದ ಅವಧಿ ಆದಮೇಲೆ ಯಾವ ಅಧಿಕಾರಿಗೆ ಅಧಿಕಾರವಿದೆಯೋ ಅವರೇ ಮಾಡಬಹುದು. ಪ್ರೌಢಶಾಲೆ ಉಪಾಧ್ಯಾಯರು 4 ವರ್ಷ ಪೂರೈಸಿದರೆ, ಕಮಿಷನರ್‌ರವರಿಗೆ ಮತ್ತು ಡಿವಿಜನಲ್‌ನಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಿಗೆ ವರ್ಗ ಮಾಡತಕ್ಕ ಅಧಿಕಾರ ಕೊಟ್ಟಿದ್ದೇವೆ. ಮೂರು ವರ್ಷ ಕೆಲಸ ಮಾಡಿರತಕ್ಕ ಅಧಿಕಾರಿಗಳು ಯಾರು ಇರುತ್ತಾರೆ, ಅವರನ್ನು ಅಧಿಕಾರ ಇದ್ದವರೇ ಮಾಡಬಹುದು ಎಂದು ಮಾಡಿದ್ದೇವೆ. ಈ ಅವಧಿಪೂರ್ಣ ಏನಿದೆ ಅಂಥವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದು ಲಕ್ಷಾನುಗಟ್ಟಲೆ ಆಗುತ್ತದೆ. ಒಬ್ಬರಿಗೆ ವರ್ಗ ಮಾಡುತ್ತೇವೆಂದರೆ ಒಂದು ಸಾವಿರ ರೂಪಾಯಿಗಳ ಟಿ.ಎ., ಡಿ.ಎ. ಕೊಡಬೇಕು. ವರ್ಗಾವರ್ಗಿ ಬಗ್ಗೆ ಲೆಕ್ಕ ಹಾಕಿದರೆ ಕೋಟ್ಯಾಂತರ ರೂಪಾಯಿಗಳ ಖರ್ಚು ಮಾಡಬೇಕಾಗುತ್ತದೆ. ಅಷ್ಟು ಹಣ ಇಲ್ಲ. ಎಲ್ಲಿ ಅಗತ್ಯ ಇದೆ ಅಲ್ಲಿ ವರ್ಗ ಮಾಡಬೇಕಾಗುತ್ತದೆ. ಇದನ್ನು ಮಾಡತಕ್ಕ ಕಾಲದಲ್ಲಿ ನಾವು ನ್ಯಾಯಬದ್ಧವಾಗಿ ಮಾಡಬೇಕೆಂಬ ದೃಷ್ಟಿಯಿಂದ ಮಾಡಿದ್ದೇವೆ. ಇದರ ಬಗ್ಗೆ ಆದಷ್ಟು ಕಡಿಮೆ ಮಾಡಿಕೊಂಡು ಆಯಾಯ ಅಧಿಕಾರಿಗಳಿಗೆ ಅಧಿಕಾರ ಕೊಟ್ಟರೆ ಒಳ್ಳೆಯದು ಎಂದು ನಾನು ವೈಯಕ್ತಿಕವಾಗಿ ಹೇಳಿದ್ದೇನೆ.

ಇನ್ನು ನೇಮಕಾತಿ ವಿಷಯದಲ್ಲಿ ಹೇಳುವುದಾದರೆ, ಪ್ರೌಢಶಾಲೆಯಲ್ಲಿ ಕೆಲಸ ಮಾಡತಕ್ಕವರನ್ನು ಪ್ರಾಥಮಿಕ ಶಾಲೆಯಲ್ಲಿ ಹಂಗಾಮಿ ಶಿಕ್ಷಕರಾಗಿ ಏನು ಕೆಲಸ ಮಾಡುತ್ತಿದ್ದಾರೆ ಅವರನ್ನು ಮುಂದುವರಿಸಿ ಕೊಂಡು ಬಂದಿದ್ದೇವೆ. ಹಾಗೆಯೇ ಜೂನಿಯರ್ ಕಾಲೇಜಿನಲ್ಲಿ ಕೆಲಸ ಮಾಡತಕ್ಕವರನ್ನು ಮುಂದುವರಿಸಿ ಕೊಂಡು ಹೋಗಿದ್ದೇವೆ. ಈ ಹಂಗಾಮಿ ಕೆಲಸ ಮಾಡತಕ್ಕವರ ಜೊತೆಗೆ ಪಾರ್ಟ್‌ಟೈಮ್ ಲೆಕ್ಚರರ್ಸ್‌ಗೆ 200 ರೂಪಾಯಿಗಳನ್ನು ಕೊಡುತ್ತಿದ್ದುದನ್ನು 400 ರೂಪಾಯಿಗಳನ್ನು ಕೊಡಲಿಕ್ಕೆ ಮಾಡಿದ್ದೇವೆ. ಹೈಸ್ಕೂಲಿ ನಲ್ಲಿ 50 ರೂಪಾಯಿ ಕೊಡುತ್ತಿದ್ದವರಿಗೆ 100 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. 5 ವಿಷಯಗಳಲ್ಲಿ ಪಾಠ ಮಾಡಬೇಕು ಅಂದರೆ, ಒಬೊಬ್ಬರಿಗೆ ನೂರು, ನೂರು ರೂಪಾಯಿ ಅಂದರೆ 500 ರೂಪಾಯಿಗಳು ಆಗುತ್ತದೆ. ಇದು ಕಡಿಮೆ ಎಂದು ಕೆಲವರು ಹೇಳಿದರು, ಅದು ಕಡಿಮೆ ಆಗಲಾರದು.

ಶ್ರೀ ಎಂ. ಎಸ್. ಕೃಷ್ಣನ್.—ಹಂಗಾಮಿ ಉಪಾಧ್ಯಾಯರ ವಿಷಯವನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಈ ದೃಷ್ಟಿಯಿಂದ ಇವತ್ತು ಪಾರ್ಟ್ ಟೈಂ ಲೆಕ್ಚರರ್ಸ್ ಯಾರಿದ್ದಾರೆ ಅವರಿಗೆ 50 ರೂಪಾಯಿ ಗಳಿಂದ 100 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಜೂನಿಯರ್ ಕಾಲೇಜಿನಲ್ಲಿ ಫುಲ್ ಟೈಂ ಲೆಕ್ಚರರ್ಸ್‌ಗೆ 200 ರೂಪಾಯಿಗಳಿಂದ 400 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಹಿಂದೆ ಇವರಿಗೆ ಮಿನಿಮಂ ವೇಜಸ್ 100 ರೂಪಾಯಿ ಕೊಟ್ಟಿದ್ದುದನ್ನು ಈಗ 400 ರೂ. ಗಳಿಗೆ ಹೆಚ್ಚು ಮಾಡಿದ್ದೇವೆ. ಅದಕ್ಕೂ ಅವರು ಸಮಾಧಾನಪಟ್ಟುಕೊಳ್ಳದಿದ್ದರೆ ನಾವು ಏನು ಮಾಡುವುದಕ್ಕೆ ಬರುತ್ತದೆ? ಇವತ್ತು ಸಂಬಳದ ಸ್ಕೇಲ್‌ನಲ್ಲಿ 10 ರೂಪಾಯಿ ಕಡಿಮೆ ಮಾಡಿ ಅವರಿಗೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಸಂಬಳವನ್ನು ಕೊಡುವಂತೆ ನಿಯಮಾ ವಳಿಗಳನ್ನು ಸಡಿಲ ಮಾಡಿದ್ದೇವೆ. ಹೈಸ್ಕೂಲು ಶಾಲಾ ಕಟ್ಟಡಗಳ ವಿಚಾರದಲ್ಲಿ ಹೇಳುವುದಾದರೆ, ಯಾರಾದರೂ ಸಾರ್ವಜನಿಕರು ಮುಂದೆಬಂದು ತಮ್ಮ ವಂತಿಗೆಯನ್ನು ಕೊಡುತ್ತಾರೋ ಅವರು ಕಟ್ಟಡಕ್ಕೆ ತಗಲುವ ವೆಚ್ಚದಲ್ಲಿ ಅರ್ಧ ಭಾಗದಷ್ಟು ಹಣವನ್ನು ಕೊಟ್ಟರೆ ಅವರ ಹೆಸರನ್ನು ಕಲ್ಲಿನಲ್ಲಿ ಕೆತ್ತಿಸಿ ಹಾಕುತ್ತೇವೆ. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಇವತ್ತು ಶಾಲಾಕಾಲೇಜುಗಳಲ್ಲಿ ಬೆಂಚು, ಕುರ್ಚಿ, ಬೋರ್ಡುಗಳು ಸರಿಯಾಗಿಲ್ಲ ಎಂದು ಹಿಂದಿನ ಮಾನ್ಯ ವಿದ್ಯಾ ಸಚಿವರು ಹೇಳಿದರು. ಹಿಂದೆ ಶಾಲಾಕಾಲೇಜುಗಳಲ್ಲಿ ಬೆಟರ್‌-ಮೆಂಟ್ ಕಮಿಟಿ ಎಂದು ಅವರೇ ನಡೆಸುತ್ತಿದ್ದರು. ಅದನ್ನು ನಾವು ಮುಂದುವರಿಸಿಕೊಂಡು ಬರುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಇಟ್ಟಿದ್ದೀರಾ ಎಂದು ನಾನು ತಮ್ಮನ್ನು ಕೇಳಿದೆ. ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ಹೈಸ್ಕೂಲು ಕಟ್ಟಡಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ಈ ಹಳೇ ಕಟ್ಟಡಗಳ ರಿಪೇರಿಗಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂಬುದನ್ನು ಹೇಳಿ; ಅದು ಬಿಟ್ಟು ಹಿಂದಿನವರು ಮಾಡಿದ್ದನ್ನೇ ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ, ಅವರದ್ದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ಏತಕ್ಕೆ ಹೇಳುತ್ತೀರಿ ? ಈ ವರ್ಷ 2 ಸಾವಿರ ಹೈಸ್ಕೂಲ್ ಕಟ್ಟಡಗಳನ್ನು ಕಟ್ಟಿಸುವ ಸಲುವಾಗಿ 3 ಕೋಟಿ ರೂಪಾಯಿಗಳನ್ನು

ಇಟ್ಟಿದ್ದೇವೆ. ಅಥವಾ ಹತ್ತು ಸಾವಿರ ಪೂರ್ವ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸುವ ಸಲುವಾಗಿ ಇಷ್ಟು ಹಣವನ್ನು ತೆಗೆದಿಟ್ಟಿದ್ದೇವೆಂದು ಹೇಳಿ.

ಶ್ರೀ ಬಿ. ರಾಚಯ್ಯ.—ನಾನ್ ಪ್ಲಾನ್ಡ್ ಸ್ಕೀಂನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಕ್ಕೋಸ್ಕರ ಹಿಂದಿನ ಸರ್ಕಾರದವರು 117 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಆದರೆ ನಾವು ಈಗ 136 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ವರ್ಷ ನಾನ್ ಪ್ಲಾನ್ಡ್ ಸ್ಕೀಂನಲ್ಲಿ ಕೂಡ ಇದಕ್ಕಾಗಿ 90 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಇಟ್ಟಿರುವ 90 ಲಕ್ಷ ರೂಪಾಯಿಗಳಲ್ಲಿ 900 ಕ್ಲಾಸ್ ರೂಂಗಳೂ ಕೂಡ ಆಗುವುದಿಲ್ಲ. ಇದರಲ್ಲಿ ರಿಪೇರಿಗೂ ಹಣವನ್ನು ಕೊಟ್ಟರೆ 500 ರೂಂಗಳೂ ಕೂಡ ಆಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತಿನ ಪರಿಸ್ಥಿತಿಯಲ್ಲಿ ಇಷ್ಟನ್ನಾದರೂ ಖರ್ಚು ಮಾಡುವುದಕ್ಕೆ ಸಾಧ್ಯವೇ ? ಎಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ದೊಡ್ಡ ಮನಸ್ಸು ಮಾಡಿ ಮುಖ್ಯ ಮಂತ್ರಿಗಳಜೊತೆ ಮಾತನಾಡಿ ಇನ್ನೂ 2–3 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹಂತ ಹಂತವಾಗಿ ಮಾಡಿ. ಇದನ್ನು ಯೋಚನೆ ಮಾಡುವುದನ್ನು ಬಿಟ್ಟು ಹಿಂದಿನ ಸರ್ಕಾರದವರು ಮಾಡಲಿಲ್ಲ, ಹಿಂದಿನ ಸರ್ಕಾರದವರು ಮಾಡಲಿಲ್ಲ ಎಂದು ಹೇಳುವುದಕ್ಕೆ ಏಕೆ ಹೊರಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ಈ ವರ್ಷ 65 ಲಕ್ಷದ ಜೊತೆಗೆ ಇನ್ನೂ 90 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ಅಂದರೆ $1\frac{1}{2}$ ಕೋಟಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಅಲ್ಲದೆ ಹಣವನ್ನು ಖರ್ಚು ಮಾಡುವಾಗ ಇಲಾಖೆಗಳ ಅವಶ್ಯಕತೆಗಳನ್ನು ನೋಡಿ ಮಾಡಬೇಕಾಗುತ್ತದೆ. ಈ ವರ್ಷ ಇಷ್ಟು ಖರ್ಚುಮಾಡಿ, ಮುಂದಿನ ವರ್ಷ 17 ಕೋಟಿ ರೂಪಾಯಿಗಳ ಅಂದಾಜನ್ನು ತಯಾರು ಮಾಡುತ್ತೇವೆ. ಮುಂದಿನ ವರ್ಷ 2 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿಸುವುದು, ಪೂರ್ವಪ್ರಾಥಮಿಕ ಪಾಠಶಾಲೆಗಳನ್ನು ಕಟ್ಟಿಸುವುದು, ಇನ್ನೂ ಮುಂತಾದ ನಾಲ್ಕಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇಂಥ ಯೋಜನೆ ಇಲ್ಲದಿರುವ ಕಡೆ ಹೊಸ ಯೋಜನೆಯನ್ನು ಮುಂದಿನ ವರ್ಷ ಸೇರಿಸಿಕೊಳ್ಳೋಣ.

ಇನ್ನು ಶಾಲಾ ಕಾಲೇಜುಗಳಲ್ಲಿ ಮಕ್ಕಳ ಹಾಜರಾತಿ ಬಗ್ಗೆ ಹೇಳುವುದಾದರೆ, ಎಲ್ಲಾ ಹಳ್ಳಿಗಳಲ್ಲೂ ಬಡತನ ಜಾಸ್ತಿ ಇರುವುದರಿಂದ ರೈತರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದೆ ದೊಡ್ಡ ಮಕ್ಕಳಿದ್ದರೆ ಸಣ್ಣ ಮಕ್ಕಳನ್ನು ನೋಡಿಕೊಳ್ಳುವಂತೆ ಹೇಳುತ್ತಾರೆ. ಅಥವಾ ವ್ಯವಸಾಯ ಕೆಲಸವನ್ನು ನೋಡಿಕೊಳ್ಳಲು ಕಳುಹಿಸುತ್ತಾರೆ. ಇದರಿಂದಾಗಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆಯಾಗುತ್ತಿದೆ ಎಂಬುದನ್ನು ಗಮನಿಸಿ ಇವರ ಹಾಜರಾತಿಯನ್ನು ಹೆಚ್ಚಿಸಲು ಮಧ್ಯಾಹ್ನದ ಊಟವನ್ನು ಕೊಡುವುದು, ಶಿಕ್ಷಣದ ಗುಣಮಟ್ಟವನ್ನು ಹೆಚ್ಚುಮಾಡುವುದು ಮುಂತಾದ ಹಲವಾರು ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಇದರಲ್ಲಿ ಕೇವಲ 12 ಲಕ್ಷ ಮಕ್ಕಳಿಗೆ ಮಾತ್ರ ಕೊಡಲು ಸಾಧ್ಯವಾಗಿದೆ. ಆದರೆ ಶಾಲೆಗೆ ಹೋಗತಕ್ಕ ಎಲ್ಲಾ ಮಕ್ಕಳಿಗೂ ಸಂಪೂರ್ಣವಾಗಿ ಮಧ್ಯಾಹ್ನದ ಊಟವನ್ನು ಕೊಡಲು ಸಾಧ್ಯವಾಗುವುದಿಲ್ಲ. ಹಾಗೆ ಕೊಡಬೇಕಾದರೆ ಹೆಚ್ಚಿನ ಹಣ ಬೇಕಾಗುತ್ತದೆ. ತಮಿಳುನಾಡು ಮತ್ತು ಆಂಧ್ರದಲ್ಲಿ ಈ ರೀತಿ ಮಾಡುತ್ತಿರುವುದರಿಂದ ನೀವೂ ಏತಕ್ಕೆ ಮಾಡಬಾರದೆಂದು ಮಾನ್ಯ ಸದಸ್ಯರು ಕೇಳಿದರು. ಆದರೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಮುಂದಿನ ವರ್ಷ ಇನ್ನೂ ಹೆಚ್ಚು ಮಕ್ಕಳಿಗೆ ಊಟ, ಉಪಹಾರಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ. ಆದರೆ ರಾಜ್ಯದಲ್ಲಿ ಶಾಲೆಗಳಿಗೆ ಹೋಗತಕ್ಕ ಮಕ್ಕಳಿಗೆಲ್ಲಾ ಊಟ ಕೊಡಲು ಸರ್ಕಾರಕ್ಕೆ ಕಷ್ಟವಾಗುತ್ತದೆ. ಈ ಮಧ್ಯಾಹ್ನದ ಊಟದ ವ್ಯವಸ್ಥೆಯಲ್ಲಿ ಸ್ವಲ್ಪ ನ್ಯೂನತೆಗಳು ಬಂದಿವೆ ಎಂದು ಹೇಳಿದರು. ಆಹಾರವನ್ನು ಕೊಡುವಾಗ, ಊಟವನ್ನು ಹಾಕುವಾಗ ಕೆಲವು ತೊಂದರೆಗಳಾಗುತ್ತವೆ. ಅದ್ದರಿಂದ ಈಗ ನಾವು ಕೆಲವಾರು ಪಾಠಶಾಲೆಗಳನ್ನು ಸೇರಿಸಿ ಆ ಮಕ್ಕಳಿಗೆಲ್ಲಾ ಒಂದೇ ಕಡೆ ಅಡಿಗೆ ಮಾಡಿ ನಂತರ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಸಂಬಂಧಪಟ್ಟ ಶಾಲೆಯ ಉಪಾಧ್ಯಾಯರುಗಳು ಹತ್ತಿರದಲ್ಲಿರತಕ್ಕ ಬಸ್ ನಿಲ್ದಾಣಕ್ಕೆ ಬಂದು ಊಟವನ್ನು ಮಕ್ಕಳಿಗೆ ತೆಗೆದುಕೊಂಡು ಹೋಗುವಂತೆ ಮಾಡಿದ್ದೇವೆ. ಆದರೆ ಈ ಊಟದ ಸಾಗಾಣಿಕೆಯನ್ನೂ ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೇಳಿದರು. ಇದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ಪರಿಶೀಲಿಸಿ ನೋಡುತ್ತೇವೆ. ಇದುವರೆಗೆ ನಮಗೆ ಕೇಂದ್ರ ಸರ್ಕಾರದಿಂದ ಏನು ಆಹಾರ ಬರುತ್ತಿತ್ತು ಅದು ಇವತ್ತು ಕಡಿಮೆಯಾಗಿರುವುದರಿಂದ ನಾವೂ ಕೂಡ ಮಕ್ಕಳಿಗೆ ಸ್ವಲ್ಪ ಕಡಿಮೆ ಮಾಡಿದ್ದೇವೆ. ನಮ್ಮ ಸರ್ಕಾರದ ವತಿಯಿಂದ ಪೌಷ್ಟಿಕ ಆಹಾರವನ್ನು ಮಕ್ಕಳಿಗೆ ಕೊಡುವ ಸಲುವಾಗಿ ಅದನ್ನು ತಯಾರಿಸಲು ನಾಲ್ಕಾರು ಕಾರ್ಖಾನೆಗಳವರಿಗೆ ಹೇಳಿದ್ದೇವೆ. ಮತ್ತೆ ಕೆಲವು ಕಡೆ ಬ್ರೆಡ್ಡನ್ನು ಕೂಡ ತಯಾರಿಸಿ ಸರಬರಾಜು ಮಾಡಲು ವ್ಯವಸ್ಥೆ ಮಾಡಿದ್ದೇವೆ. ಇಷ್ಟೇ ಅಲ್ಲದೆ ಸಾರ್ವಜನಿಕರಿಂದಲೂ ಕೂಡ ಏನಾದರೂ ಸಹಾಯ ಸಿಕ್ಕಿದರೆ ತೆಗೆದುಕೊಳ್ಳುವಂತೆ ಬೆಟರ್‌ಮೆಂಟ್ ಕಮಿಟಿಯವರಿಗೆ ಹೇಳಿದ್ದೇವೆ. ಬಡ ಮಕ್ಕಳಿಗೋಸ್ಕರ

ಸಾರ್ವಜನಿಕರಿಂದ ಬರಬಹುದಾದ ಎಲ್ಲಾ ರೀತಿಯ ಸೌಲಭ್ಯಗಳನ್ನೂ ತೆಗೆದುಕೊಂಡು ಹಂಚಲು ವ್ಯವಸ್ಥೆ ಮಾಡುತ್ತಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಕೇವಲ ಹರಿಜನರ ಮಕ್ಕಳಿಗೇ ಎಲ್ಲಾ ಸೌಲಭ್ಯಗಳನ್ನೂ ಕೊಟ್ಟರೆ ಬೇರೆ ಬಡ ಮಕ್ಕಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆ ರೀತಿ ಮಾಡಿದರೆ ಆ ಮಕ್ಕಳ ಮನಸ್ಸಿನಲ್ಲೂ ತಪ್ಪು ಕಲ್ಪನೆ ಬರುತ್ತದೆ. ಅದು ಬರದಂತೆ ನೋಡಿಕೊಳ್ಳುವ ಸಲುವಾಗಿ ಪ್ರಾಥಮಿಕ ಹಂತದಲ್ಲಿ ಹರಿಜನ ಮಕ್ಕಳು ಮತ್ತು ಬಡವರ ಮಕ್ಕಳಿಗೆ ಅದರಲ್ಲೂ ಹಿಂದುಳಿದ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಏನು ಸೌಲಭ್ಯ ಗಳನ್ನು ಕೊಡಲು ಸಾಧ್ಯವಿದೆ ಎಂಬುದನ್ನು ನೋಡಿ ಅದನ್ನೆಲ್ಲಾ ಮುಂದಿನ ವರ್ಷದಿಂದ ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ.

ಇನ್ನು ಶಿಕ್ಷಣ ಸುಧಾರಣೆ ಮಾಡಿ ಹಾಜರಾತಿಯನ್ನು ಹೆಚ್ಚಿಸುವ ಕಾರ್ಯಕ್ರಮವನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಅಂದರೆ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಹೋಗುವ ಹೊತ್ತಿಗೆ ಬಹಳ ಜನ ವಿದ್ಯಾರ್ಥಿಗಳು ಶಾಲೆಯನ್ನು ಬಿಡುತ್ತಿದ್ದುದನ್ನು ಗಮನಿಸಿ ಈಗ 21 ತಾಲ್ಲೂಕುಗಳಲ್ಲಿ ಹೆಚ್ಚಿನ ಉಪಾಧ್ಯಾಯ ರನ್ನು ಹಾಕುವುದು, ಮಧ್ಯಾಹ್ನ ಊಟ, ಉಪಾಹಾರವನ್ನು ಕೊಡುವುದು, ಬೇರೆ ಕಡೆಯಿಂದ ಉಪಾಧ್ಯಾಯರನ್ನು ಕರೆಸಿ ಪಾಠ ಹೇಳಿಸಿಕೊಡುವುದು ಮುಂತಾದುವನ್ನು ಮಾಡುತ್ತಿರುವುದರಿಂದ ಸುಮಾರು 10–11 ಪರ್ಸೆಂಟ್ ಮಕ್ಕಳ ಹಾಜರಾತಿ ಶಾಲೆಗಳಲ್ಲಿ ಜಾಸ್ತಿಯಾಗಿದೆ. ಇದನ್ನು ನೋಡಿದ ಮೇಲೆ ಇನ್ನೂ 20 ತಾಲ್ಲೂಕುಗಳಿಗೆ ಈ ಯೋಜನೆಯನ್ನು ವಿಸ್ತರಣೆ ಮಾಡಲಿಚ್ಛಿಸಿದ್ದೇವೆ. ಇನ್ನುಮುಂದೆ ಪ್ರತಿ ವರ್ಷವೂ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದಲ್ಲದೆ. ಪಾಠ ಪ್ರವಚನಗಳ ಗುಣಮಟ್ಟದ ಕಡೆಗೆ ಗಮನ ಹೆಚ್ಚು ಕೊಡುವುದಲ್ಲದೆ. ಶಾಲಾ ಕಾಲೇಜುಗಳಿಗೆ ಪೀಠೋಪಕರಣಗಳನ್ನೊದಗಿಸುವುದರ ಜೊತೆಗೆ ಅಲ್ಲಿ ಓದತಕ್ಕ ಎಲ್ಲಾ ಹರಿಜನ ಹೆಣ್ಣುಮಕ್ಕಳಿಗೂ 7ನೇ ತರಗತಿಯವರೆಗೂ ಸಮವಸ್ತ್ರವನ್ನು ಕೊಡುವ ವ್ಯವಸ್ಥೆಯನ್ನು ಮುಂದಿನ ವರ್ಷದಿಂದ ಮಾಡುತ್ತೇವೆ. ಆದ್ದರಿಂದ ಅನೇಕ ವರ್ಷಗಳಿಂದ ಪಾಠಶಾಲೆಗಳಲ್ಲಿ ಓದತಕ್ಕಂಥ ಎಲ್ಲಾ ಹರಿಜನ ಹೆಣ್ಣುಮಕ್ಕಳಿಗೆ ಸಮವಸ್ತ್ರ ಕೊಡತಕ್ಕಂಥ ಯೋಜನೆಯನ್ನು ಇಟ್ಟುಕೊಂಡು ಏಳನೇ ತರಗತಿಯಲ್ಲಿ ಓದತಕ್ಕಂಥ ಹರಿಜನ ಮಕ್ಕಳಿಗೆ ಬಟ್ಟೆಗಳನ್ನು ಈಗ ಎಲ್ಲರಿಗೂ ಕೊಡತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಮತ್ತೆ ಈ ಹರಿಜನರಲ್ಲದ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನವನ್ನು ಅವರ ಪ್ರತಿಭೆ ಯನ್ನು ಗುರುತಿಸಿ ಹೆಚ್ಚಿಸಿದ್ದೇವೆ. 50 ರಿಂದ 75 ರೂಪಾಯಿಗಳ ವಿದ್ಯಾರ್ಥಿವೇತನವನ್ನು ಕೊಡಲು ನಾವು ನಿರ್ಧರಿಸಿದ್ದೇವೆ. 50 ರೂಪಾಯಿಗಳಿಂದ 75 ರೂಪಾಯಿಗಳಿಗೆ ಹೆಚ್ಚಿಸಿರುವುದರಿಂದ ಒಂದು ರೀತಿಯ ಉತ್ಸಾಹ ಮಕ್ಕಳಲ್ಲಿ ಉಂಟಾಗಿ ಹೆಚ್ಚಿನ ಮಕ್ಕಳು ಶಾಲೆಗೆ ಬರುವುದಕ್ಕೆ ಆರಂಭಿಸಿದ್ದಾರೆ. ಸಮಾಜದಲ್ಲಿ ಹಿಂದುಳಿದಿರತಕ್ಕಂಥವರ ವಿಷಯದಲ್ಲಿ ಹೆಚ್ಚಿನ ಅನುಕಂಪ ಇರತಕ್ಕಂಥವರು ಸಾಧ್ಯವಾದಮಟ್ಟಿಗೆ ಅವರ ಒಂದು ಪ್ರಭಾವ ಬೀರಿ ಮಕ್ಕಳು ಶಾಲೆಗೆ ಹೋಗುವಂತೆ ಮಾಡಬೇಕೆಂದು ಕೋರಿಕೊಳ್ಳುತ್ತೇವೆ. ಕೇವಲ ಉಪಾಧ್ಯಾಯರಿಂದಲೇ ಎಲ್ಲವೂ ಆಗುತ್ತದೆ ಎಂದು ಭಾವಿಸಿಕೊಂಡರೆ ತಪ್ಪಾಗುತ್ತದೆ. ಉಪಾಧ್ಯಾಯರಂತೆ ಡಿಪಾರ್ಟ್‌ಮೆಂಟ್‌ನವರು ಎಲ್ಲರೂ ನಿಷ್ಠೆಯಿಂದ ತಮ್ಮ ಮಕ್ಕಳು ಶಾಲೆಗೆ ಹೋಗಿದ್ದಾರೆಯೋ ಇಲ್ಲವೇ ಎನ್ನುವುದನ್ನು ನೋಡುವಂಥ ಕೆಲಸವನ್ನು ಅವರು ಮಾಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಒಟ್ಟಿನಲ್ಲಿ ಈ ವರ್ಷ ಪ್ರೈಮರಿ ಶಾಲೆ ಪೂರ್ವಪ್ರೈಮರಿ ಶಾಲೆಗಳ ಬಗ್ಗೆ ಒಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.. ಅದಕ್ಕೆ ಯಾವ ರೀತಿ ಆದ್ಯತೆಯನ್ನು ಕೊಡಬೇಕು ಎಂದು ಹೇಳಿರುತ್ತಾರೆಯೋ ಅದನ್ನು ನಾನು ಒಪ್ಪುತ್ತೇನೆ.. ಮೇಲಾಗಿ ಹಣಕಾಸುಗಳನ್ನು ಒದಗಿಸುವುದಕ್ಕೆ ಮಕ್ಕಳ ಹಿತದೃಷ್ಟಿಯಿಂದ ಪ್ರಯತ್ನ ಮಾಡುತ್ತೇನೆ.. ಈವರ್ಷ ಕೊಟ್ಟಿರತಕ್ಕಂಥ ಹಣ ಉಳಿಯದ ಹಾಗೆ ಹೆಚ್ಚು ಖರ್ಚು ಮಾಡಲಿಕ್ಕೆ ಅವಕಾಶ ಮಾಡಿದ್ದೇವೆ.

ಇನ್ನು ಪಠ್ಯಪುಸ್ತಕಗಳ ಬಗ್ಗೆ ಕಂಡುಬಂದಿರತಕ್ಕಂಥ ಲೋಪದೋಷಗಳನ್ನು ಸರಿಮಾಡಲಿಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಮತ್ತು ಹಳ್ಳಿಗಳಲ್ಲಿರತಕ್ಕಂಥ ಶಾಲೆಗಳಿಗೆ ಕೂಡ ಗ್ರಂಥಾಲಯ ವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿರುವಂಥದ್ದನ್ನು ಕೊಡಬೇಕೆಂದು ಯೋಚನೆಯನ್ನೂ ಕೂಡ ಮಾಡಿರುತ್ತೇವೆ. ಕೇವಲ ಪಟ್ಟಣಗಳಲ್ಲಿ ಮಾತ್ರವಲ್ಲ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಒಂದು ಗ್ರಂಥಾಲಯ ಇರಬೇಕೆಂದು ಅದಕ್ಕೋಸ್ಕರವಾಗಿ ವಿಶೇಷವಾದಂಥ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಕೊನೆಯದಾಗಿ. ಈ ಒಂದು ಶಾಲೆಗಳ ವಿಷಯದಲ್ಲಿ ಇಷ್ಟೊಂದು ಕಳಕಳಿಯನ್ನು ವ್ಯಕ್ತ ಪಡಿಸಿ ಎಲ್ಲರೂ ಕೂಡ ಏಕಕಂಠದಿಂದ ಪ್ರಾಥಮಿಕ ಶಾಲೆಗಳಿಗೆ ಮತ್ತು ಪ್ರೌಢಶಾಲೆಗಳಿಗೆ ಹೆಚ್ಚಿನ ಹಣವನ್ನು ಕೊಡಲು ಒಪ್ಪಿಗೆ ಕೊಡುತ್ತೀರೆಂದು ಭಾವಿಸಿಕೊಂಡಿದ್ದೇನೆ. ಕೆಲವು ಮಾನ್ಯ ಸದಸ್ಯರುಗಳು ಎರಡನೆಯ ದಿವಸ ಮಾಡಿದಂಥ ಭಾಷಣಗಳನ್ನು ಕೇಳಿದ್ದೇನೆ. ಮಾನ್ಯ ವೀರಪ್ಪ ಮೊಯ್ಲಿ ಹುವರಿಂದ ಹಿಡಿದು ಕೊನೆಯ ಸದಸ್ಯರ ವರೆಗೂ ಅವರು ಏನು ವ್ಯಕ್ತಮಾಡಿದ್ದಾರೆ ಅದನ್ನು ನೋಡಿದಾಗ ನನಗೆ ಹೆಚ್ಚು ಕಡಿಮೆ ಖೇದವಾಯಿತೆಂದು ಹೇಳಿದರೆ ತಪ್ಪಾಗಲಾರದು. ರಾಜ್ ಕಮಿಟಿಯ ವರದಿಯನ್ನು ತರಿಸಿ ಸರ್ಕಾರದವರು 1981ನೇ ಇಸವಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಕ್ಯಾಪಿಟೇಷನ್ ಫೀಜನ್ನು 5 ವರ್ಷಗಳ ಕಾಲ ಕಲೆಕ್ಟ್ ಮಾಡುವಂತೆ ಹೇಳಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಅದರ ಮೇಲೆ ಖಾಸಗೀ ಶಾಲೆಗಳವರು ನ್ಯಾಯಾಲಯಕ್ಕೆ

ಹೋಗಿ ದಾವ ಹಾಕಿದರು. ನಾವು ಬಂದಮೇಲೆ ಕೂಡ ಹಾಗೆಯೇ ನಡೆಯುತ್ತಿದ್ದುದನ್ನು ನೋಡಿ ರಾಜ್ ಕಮಿಟಿಯ ಆಧಾರದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಇನ್ನು ಐದು ವರ್ಷಗಳು ಈ ಒಂದು ತಲೆಗಂದಾಯ ಹಾಕತಕ್ಕಂಥದ್ದು ವಿದ್ಯಾರ್ಥಿಗಳ ಮೇಲೆ ಏನು ಇದೆ, ಅದನ್ನು ಹಂತಹಂತವಾಗಿ ತೆಗೆಯಬೇಕೆಂದು ಹೇಳಿರುತ್ತಾರೆ. ಅದನ್ನು ಅನುಸರಿಸಿ ಈವೊತ್ತು ಸರ್ಕಾರದವರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ. ಇದರಿಂದ ನಮ್ಮಲ್ಲಿರತಕ್ಕಂಥ ಎಲ್ಲಾ ಖಾಸಗೀ ಮತ್ತು ಸರ್ಕಾರಿ ಶಾಲೆಗಳಲ್ಲಿ 27 ಶಾಲೆಗಳು ಸರ್ಕಾರದ ಗ್ರಾಂಟನ್ನು ಪಡೆದಿಲ್ಲ. ಸರ್ಕಾರವೂ ಕೂಡ ಯಾವ ಸಹಾಯವನ್ನೂ ಕೊಟ್ಟಿಲ್ಲ. 28 ಇಂಜಿನೀಯರಿಂಗ್ ಕಾಲೇಜುಗಳು ಏನು ಇವೆ, ಅವುಗಳಿಂದ 20 ಪರ್ಸೆಂಟ್ ಸೀಟ್‌ಗಳನ್ನು ಸರ್ಕಾರಕ್ಕೆ ಕೊಡಬೇಕೆಂದು ಮಾಡಿದ್ದಾರೆ. ಆದರೂ ಸಹ ಅವರು ಇದನ್ನು ಒಪ್ಪದೆ ನ್ಯಾಯಾಲಯದ ಮುಂದೆ ಹೋಗಿ ವಾದ ಮಾಡಿ ಕೊನೆಗೆ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧಿಪತಿಗಳು ಸಲಹೆಯನ್ನು ಕೊಟ್ಟ ಮೇಲೆ. ನಾವು 10 ಪರ್ಸೆಂಟನ್ನು ಇನ್‌ಟೇಕನ್ನು ಕೊಡುವುದಕ್ಕೆ ಒಪ್ಪಿಕೊಂಡಮೇಲೆ ಅವರು 20 ಪರ್ಸೆಂಟ್ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಹೇಳಿದರು. ಈ ಸಲಹೆಯ ಮೇಲೆ ಈವತ್ತು 10 ಪರ್ಸೆಂಟ್ ಇನ್‌ಟೇಕ್ ಹೆಚ್ಚು ಮಾಡಿದ್ದೇವೆ. 20 ಪರ್ಸೆಂಟ್ ಮೆರಿಟ್ ಸೀಟ್ ಬಗ್ಗೆ ಭರ್ತಿ ಮಾಡತಕ್ಕ ಅವಕಾಶ ಇರತಕ್ಕಂಥ ಕಾಲದಲ್ಲಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ಮಾಡಲು ಸಾಧ್ಯವಾಗುತ್ತದೆ. ಅದೇ ರೀತಿ ಕೂಡ ಹಿಂದಿನ ಸರ್ಕಾರ ಏನು ಅನುಸರಿಸಿಕೊಂಡು ಬಂದಿದೆ ಎನ್ನುವುದನ್ನು ನಾವು ನೋಡಿದಾಗ, ವಿಶ್ವವಿದ್ಯಾನಿಲಯದವರು ಈ ಕಾಲೇಜುಗಳಿಗೆ ಪರವಾನಗಿಯನ್ನು ಕೊಡಬೇಕು ಎಂದು ಹೇಳಿ ಶಿಫಾರಸ್ಸು ಮಾಡಿದ್ದಾರೆಯೇ ಹೇಗೆ? ರಾಜ್ ಕಮಿಟಿಯಲ್ಲಿ ಹೇಳಿರತಕ್ಕ ರೀತಿ ಕೆಲವು ವಿಷಯಗಳಲ್ಲಿ ನ್ಯಾಯಯುತವಾಗಿ ಕಾಲೇಜುಗಳನ್ನು ಕೊಡಬೇಕೆಂದು ಹೇಳುವಾಗ ಅವರಿಗೆ ಅಗತ್ಯತೆಯನ್ನು ನೋಡಿ 11 ಕಾಲೇಜುಗಳನ್ನು ಕೊಟ್ಟಿರತಕ್ಕಂಥ ಕಾಲದಲ್ಲಿ. ಸರ್ಕಾರ ಅಧಿಕಾರ ತೆಗೆದುಕೊಂಡು ಅದನ್ನೆಲ್ಲಾ ರ್‍ಯಾಟಿಫೈ ಮಾಡುವುದಕ್ಕೋಸ್ಕರವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. ಇದರಿಂದಾಗಿ ಹೆಚ್ಚಿನ ಜನರನ್ನು ಮೆರಿಟ್‌ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತೆಂದು ನಮ್ರತೆಯಿಂದ ತಿಳಿಸಲು ಇಚ್ಛೆಪಡುತ್ತೇನೆ. ಆ ಹಿಂದಿನ ಸರ್ಕಾರದವರು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಶಿಫಾರಸು ಮಾಡಿದ ಸೀಟುಗಳ ಮೇಲೆ ಸುಮಾರು ಸೀಟುಗಳನ್ನು ಅವರಿಗೆ ಹೆಚ್ಚಿಗೆ ಕೊಟ್ಟುಬಿಟ್ಟಿರು: ಇದನ್ನು ನಾವು ಕೊಟ್ಟಿಲ್ಲ. ಈವೊತ್ತು ಇಂತಿಂಥ ಕಾಲೇಜುಗಳಿಗೆ ಇಷ್ಟಿಷ್ಟು ಎಂದು ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅದರ ಪ್ರಕಾರ 9 ಸಾವಿರ ಚಿಲ್ಲರೆ ಅಭ್ಯರ್ಥಿಗಳು ಪ್ರವೇಶ ಪಡೆದಿದ್ದಾರೆ. 1300 ಜನಕ್ಕಿಂತ ಹೆಚ್ಚಿಗೆ ನಾವು ಕೊಟ್ಟಿಲ್ಲ. ಮತ್ತೆ ಈ ವಿಚಾರವಾಗಿ ಟೆಕ್ನಿಕಲ್ ಕಮಿಟಿಯವರನ್ನು ಎಲ್ಲಾ ಕಾಲೇಜುಗಳಿಗೆ ಕಳುಹಿಸಿ ಇರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಏನು ಇದೆ. ಅದನ್ನೆಲ್ಲಾ ಅವರು ತಿಳಿದುಕೊಂಡು ಬಂದಿದ್ದಾರೆ. ಮತ್ತು ವರದಿಯನ್ನು ಸಲ್ಲಿಸಿದ್ದಾರೆ. ವರದಿ ಪ್ರಕಾರ ನಾವು ಹಿಂದೆ ವಿಶ್ವವಿದ್ಯಾನಿಲಯದವರು ಏನು ಶಿಫಾರಸ್ಸು ಮಾಡಿದ್ದರು, ಅದನ್ನು ಅನುಸರಿಸಿ ಕೊಟ್ಟಿದ್ದೇವೆ. ಈಗ ಕೊಟ್ಟಿರತಕ್ಕಂಥ 10 ಪರ್ಸೆಂಟ್ ಏನು ಇದೆ. ಅದಕ್ಕಿಂತ ಹೆಚ್ಚಾಗುವುದಿಲ್ಲ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು. ಕ್ಯಾಪಿಟೇಷನ್ ಫೀಸ್ ತೆಗೆಯಬೇಕು. ಬೇರೆಯವರಿಂದ ಹಣವನ್ನು ವಸೂಲಿ ಮಾಡಿಕೊಂಡರೂ ಸಹ ನಮ್ಮ ವಿದ್ಯಾರ್ಥಿಗಳಿಗೆ ಪ್ರಕ್ಕಟೆ ಆಗಬೇಕೆಂದು ಈ ಸುಗ್ರೀವಾಜ್ಞೆಯನ್ನು ತಂದೆವು. ಐದು ವರ್ಷಗಳ ಪ್ರವೇಶ ಕೋರಿ ಬರತಕ್ಕಂಥ ವಿದ್ಯಾರ್ಥಿಗಳು ಏನು ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ ಓದತಕ್ಕಂಥವರಿಗೆ ಕನ್ನಡಿಗರು ಅವರೆಲ್ಲರಿಗೂ ಪ್ರವೇಶದ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಈ ಆದ್ಯಾದೇಶವನ್ನು ವಿಸ್ತಾರಮಾಡಿ ಮುಂದೆ ಕನ್ನಡಿಗರಿಗೆ ಯಾವುದೇ ವಿದ್ಯಾಭ್ಯಾಸದ ಕಾಲೇಜುಗಳಲ್ಲಿಯಾಗಲಿ. ಟೆಕ್ನಿಕಲ್ ಕಾಲೇಜುಗಳಲ್ಲಿಯಾಗಲಿ. ಆದೇಶಾನುಸಾರವಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕುವಂತೆ ಮಾಡಿದ್ದೇವೆ. ಬಹುಶಃ ಈ ವರ್ಷ ಹಿಂದಿನ ವರ್ಷಕ್ಕಿಂತ ಹೆಚ್ಚಿಗೆ ಸಿಕ್ಕಿದೆ. ಹಂತಹಂತವಾಗಿ ಅಂದರೆ. 20 ಪರ್ಸೆಂಟ್. ಮುಂದಿನ ವರ್ಷ 40 ಪರ್ಸೆಂಟ್ ಅದಕ್ಕೆ ಮುಂದಿನ ವರ್ಷ 60–80 ಪರ್ಸೆಂಟ್ ಈ ರೀತಿ ತೆಗೆದುಕೊಂಡು ಹೋಗಿ ಕೊನೆಗೆ 90 ಪರ್ಸೆಂಟ್‌ಗೆ ತರಬೇಕೆಂದು ಇರುತ್ತೇವೆ. ರಾಜ್ ಕಮಿಟಿಯ ವರದಿಯನ್ನು ಅನುಸರಿಸಿ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಸರ್ಕಾರ ತಂದಿರತಕ್ಕಂಥ ಈ ಸುಗ್ರೀವಾಜ್ಞೆಯನ್ನು ವಿದ್ಯಾರ್ಥಿಗಳು ಮೆಚ್ಚಿಕೊಂಡಿರುತ್ತಾರೆ. ಮತ್ತು ಅವರ ತಂದೆತಾಯಿಗಳೂ ಕೂಡ ಮೆಚ್ಚಿಕೊಂಡಿರುತ್ತಾರೆ. ಇದೇ ಸಂದರ್ಭದಲ್ಲಿ ಈ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ವಿಚಾರವನ್ನು ಮಾನ್ಯ ಸದಸ್ಯರು ಹೇಳಿರುತ್ತಾರೆ. ಅದೇ ರೀತಿ ನನಗೂ ಅಭಿಪ್ರಾಯವಿರುತ್ತದೆ. ಅದರಲ್ಲಿ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ. ಆದರೆ ಇದು ಹೇಳುವಷ್ಟು ಸುಲಭವಲ್ಲ. ಇವೊತ್ತು ಒಂದುವೇಳೆ ಕೇಂದ್ರ ಸರ್ಕಾರದವರು ಏನಾದರೂ ಇಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇನೆ. ಈ ಕ್ಯಾಪಿಟೇಷನ್ ಫೀ ತೆಗೆಯಿರಿ ಎಂದು ತಮ್ಮ ಒಂದು ಪ್ರಭಾವವನ್ನು ಬೀರಿ ಕೊಟ್ಟರೆ I will be the first person to accept it with gratefulness. ಇಲ್ಲಿರತಕ್ಕಂಥ ವಿಷಯವೆಂದರೆ ನಮಗೆ 18 ಕೋಟಿ ರೂಪಾಯಿಗಳು ಖರ್ಚಿಗೆ ಬೇಕಾಗುತ್ತದೆ. ಪರಿಹಾರ ಕೊಡುವುದು ಬೇರೆ. 90 ಕೋಟಿ ರೂಪಾಯಿಗಳು ಇತರೇ ಬೇರೆ ಬೇರೆ ಖರ್ಚಿಗೆ ಬೇಕಾಗುತ್ತದೆ. ಇಷ್ಟು ದುಡ್ಡು ಕೊಡುವುದಾದರೆ ಇವೊತ್ತು ಇದನ್ನು ನಾವು ಸ್ವಾಗತ ಮಾಡುತ್ತೇವೆ ಮತ್ತು ಇವುಗಳನ್ನು

ರಾಷ್ಟ್ರೀಕರಣ ಮಾಡಲು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಪ್ರೈಮರಿ ಶಾಲೆಗಳನ್ನೂ ಸಹ ಏತಕ್ಕೆ ರಾಷ್ಟ್ರೀಕರಣ ಮಾಡಬಾರದೆಂದು ಕೆಲವರು ಕೇಳಿದ್ದಾರೆ. ಇವುಗಳನ್ನು ನಿಯಂತ್ರಣ ಮಾಡುವುದಕ್ಕಾಗಿ ನಾವು ಒಂದು ಮಸೂದೆಯನ್ನು ತಂದಿದ್ದೇವೆ. ಇದು ಇಲ್ಲಿ ವಿವರವಾದಂಥ ಚರ್ಚೆಗೆ ಬರುವುದರಿಂದ ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಖಾಸಗಿಯವರು ಎಷ್ಟು ಶಾಲೆಗಳನ್ನು ನಡೆಸುತ್ತಿದ್ದಾರೆ ಮತ್ತು ಎಲ್ಲಾ ಶಾಲೆಗಳಿಗೂ ಅನುಮತಿ ಪಡೆದಿದ್ದಾರೆಯೇ ಅಥವಾ ಇಲ್ಲವೇ ಹಾಗೂ ರಿಜಿಸ್ಟ್ರೇಷನ್ ಮಾಡಿಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನೆಲ್ಲಾ ವಿವರವಾಗಿ ನೋಡಲು 3–4 ಕಮಿಟಿಗಳನ್ನು ರಚನೆ ಮಾಡುವ ವಿಚಾರ ಈ ಮಸೂದೆಯಲ್ಲಿದೆ. ಈಗ ಇದು ವಿವರವಾದಂಥ ಪರಿಶೀಲನೆಗಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಗಿದೆ. ಶ್ರೀ ವೀರಪ್ಪ ಮೊಯ್ಲಿ ಅವರು ಕ್ಯಾಪಿಟೇಷನ್ ಫೀ ವಿಚಾರ ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ಈ ಬಗ್ಗೆ ರಾಜ್ ಕಮಿಟಿಯಲ್ಲಿ ಏನು ಹೇಳಿದೆ ಎಂಬುದನ್ನು ಹೇಳಬೇಕಾಯಿತು. ಈ ಕ್ಯಾಪಿಟೇಷನ್ ಫೀ ವಿಚಾರದಲ್ಲಿ ಖಾಸಗೀ ಕಾಲೇಜುಗಳನ್ನು ನಡೆಸತಕ್ಕಂಥ ಮಾಲೀಕರ ಜೊತೆಈ ಸರ್ಕಾರ ಶಾಮೀಲಾಗಿದೆ ಎಂದು ಏನು ಅವರು ಹೇಳಿದರು, ಇದನ್ನು ಅವರ ಹಿಂದಿನವರ ಅನುಭವದಿಂದ ಹೇಳಿರಬಹುದು. ಆದರೆ ನಮಗೆ ಇನ್ನೂ ಆ ಅನುಭವ ಬಂದಿಲ್ಲ. ಈ ವಿದ್ಯಾ ಇಲಾಖೆಯಲ್ಲಿರುವಂತಹ ಲೋಪದೋಷಗಳನ್ನು ಹಾಗೂ ಇರಬಹುದಾದಂಥ ಅಪ್ರಮಾಣಿಕತೆಯನ್ನು ಹೋಗಲಾಡಿಸುವುದು ಒಬ್ಬರ ಕೈಯಲ್ಲಿ ಆಗುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಆದಕ್ಕಾಗಿ ಮಾನ್ಯ ಸದಸ್ಯರೆಲ್ಲರೂ ಸೇರಿ ಮತ್ತು ಮಂತ್ರಿಮಂಡಲದವರೆಲ್ಲರೂ ಸೇರಿ ಈ ಕೆಲಸ ಮಾಡಬೇಕಾಗಿದೆ. ಇದರ ಜೊತೆಗೆ ನಮ್ಮ ಸಮಾಜ ಕೂಡ ಇದಕ್ಕೆ ಸಹಕಾರ ನೀಡಬೇಕು. ಈ ವಿಚಾರದಲ್ಲಿ ನಾನು ಈಗಾಗಲೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯಾವ ಒಬ್ಬ ವ್ಯಕ್ತಿಯ ಪ್ರಭಾವಕ್ಕೂ ಒಳಗಾಗದೆ ಲೋಪದೋಷಗಳು ಕಂಡುಬಂದಕೂಡಲೇ ಸಂಬಂಧಪಟ್ಟವರ ಮೇಲೆ ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಾನು ಈ ರೀತಿ ಕೈಗೊಂಡಿರುವ ಕ್ರಮದಿಂದ ಕೆಲವರಿಗೆ ನೋವಾಗಿದ್ದರೂ ಸಹ ಬಹುಮಂದಿಗೆ ಇದರ ಲಾಭವಾಗಿದೆ.

ಇನ್ನು ಭಾಷಾ ನೀತಿಯ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ಆಳ್ವಾ ಅವರು ಸ್ವಲ್ಪಮಟ್ಟಿಗೆ ಹೇಳಿದ್ದಾರೆ ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರದಲ್ಲಿ ನಮ್ಮ ಸರ್ಕಾರ ದ್ವಿಮುಖ ನೀತಿಯನ್ನು ಹಾಗೂ ಬಹುಮುಖ ನೀತಿಯನ್ನು ಅನುಸರಿಸಿದೆ ಎಂದು ರಾವಣನಿಗೆ ಹೋಲಿಸಿ ಮಾತನಾಡಿದರು. ಅವರು ಯಕ್ಷಗಾನವನ್ನು ನೋಡಿ ನೋಡಿ ಅದೇ ತರಹದ ಭಾವನೆಯಲ್ಲಿ ಮಾತನಾಡಿದರೆಂದು ಕಾಣುತ್ತದೆ. ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಆಡಳಿತ ಚೆನ್ನಾಗಿ ನಡೆಯಬೇಕಾದರೆ ಮತ್ತು ಎಲ್ಲರಿಗೂ ಅರ್ಥವಾಗಬೇಕಾದರೆ ಆಯಾ ಪ್ರಾಂತ್ಯಭಾಷೆಯಲ್ಲಿಯೇ ಆಡಳಿತವನ್ನು ನಡೆಸುವುದು ಒಳ್ಳೆಯದು. ಈ ಭಾಷಾ ನೀತಿಯ ಬಗ್ಗೆ ನಾನು ಕೊಟ್ಟಿರುವ ಹೇಳಿಕೆ ಹಾಗೂ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ವ್ಯತ್ಯಾಸವೇನೂ ಇಲ್ಲ ಮತ್ತು ಇದರಲ್ಲಿ ಬಹುಮುಖ ನೀತಿ ಏನೂ ಇಲ್ಲ. ಈ ಭಾಷಾ ನೀತಿಯ ಬಗ್ಗೆ ಸರ್ಕಾರ ಹೊರಡಿಸಿರುವ ಆಜ್ಞೆಯ ಬಗ್ಗೆ ಕೆಲವು ಶಾಲೆಗಳವರು ತಡೆಯಾಜ್ಞೆಯನ್ನು ತಂದಿರುವುದರಿಂದ ಒಂದೇ ಸಲ ಎಲ್ಲಾ ಕಡೆಯೂ ಜಾರಿಗೆ ತರಲು ಸಾಧ್ಯವಾಗಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. 1982 ರಲ್ಲಿ ಈ ಒಂದು ಆಜ್ಞೆಯನ್ನು ಈ ಹಿಂದಿನ ಸರ್ಕಾರ, ಹೊರಡಿಸುವುದಕ್ಕೆ ಮೊದಲು ಈ ಮೊದಲು ವಿರೋಧ ಪಕ್ಷದಲ್ಲಿದ್ದ ಎಲ್ಲಾ ಪಕ್ಷಗಳ ಮುಖಂಡರನ್ನು ಕರೆಯಿಸಿ ಅವರ ಜೊತೆಯಲ್ಲಿ ಚರ್ಚೆ ಮಾಡಿದ ನಂತರವೇ ಹೊರಡಿಸಿದ್ದು. ಇದನ್ನು ನಾವು ಏನಾದರೂ ಬದಲಾವಣೆ ಮಾಡಿದ್ದರೆ ಭಾಷಾ ನೀತಿಯ ಬಗ್ಗೆ ನಮಗೂ ಅವರಿಗೂ ಭಿನ್ನಾಭಿಪ್ರಾಯಗಳಿವೆ ಎಂದು ಹೇಳಬಹುದಾಗಿತ್ತು. ಆದರೆ ಇದನ್ನು ಎಲ್ಲರೂ ಪಕ್ಷಾತೀತವಾಗಿ ಒಪ್ಪಿರುವುದರಿಂದ ಇದನ್ನು ಜಾರಿಗೆ ಕೊಡುವುದು ನಮ್ಮ ಕರ್ತವ್ಯವಾಗಿದೆ. ಈ ಭಾಷಾ ನೀತಿಯ ಜಾರಿಯ ಬಗ್ಗೆ ರಚಿಸಿರುವಂತಹ ಸಮಿತಿಯಲ್ಲಿ ಹೆಚ್ಚು ಅನುಭವವಿರುವಂತಹ ಸಾಹಿತಿಗಳಿದ್ದಾರೆ. ಈ ಭಾಷಾ ನೀತಿಯ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ಮೊದಲೇ ತಿಳಿಸಿದ್ದರೆ ಸತ್ಯಾಗ್ರಹವೇ ನಡೆಯುತ್ತಿರಲಿಲ್ಲವೆಂದು ಸಾಹಿತಿಗಳು ನಮಗೆ ಹೇಳಿದರು. 1982ರಲ್ಲಿ ಜಾರಿಗೆ ಬಂದ ಈ ಆಜ್ಞೆಗೆ ಕೋರ್ಟಿನ ತಡೆಯಾಜ್ಞೆ ಬಂದಿಲ್ಲ. ಇದನ್ನು ಜಾರಿಗೆ ತರಬೇಕೆಂಬುದೇ ನಮ್ಮ ಉದ್ದೇಶವಾಗಿದೆ. 11 ಸ್ಕೂಲ್‌ಗಳಿಗೆ ಸಂಬಂಧಪಟ್ಟಂತೆ ಮಾತ್ರ ತಡೆಯಾಜ್ಞೆ ಬಂದಿರುವುದು. ಇನ್ನು ಸಂಸ್ಕೃತವನ್ನು 3ನೇ ಭಾಷೆಯನ್ನಾಗಿ ಮಾಡಿರುವ ವಿಚಾರದಲ್ಲಿಯೂ ಕೂಡ ತಡೆಯಾಜ್ಞೆ ಬಂದಿದೆ. ಇದನ್ನು ಬಿಟ್ಟರೆ ಮಿಕ್ಕ ವಿಷಯಗಳೆಲ್ಲಾ ಜಾರಿಯಲ್ಲಿವೆ. ಕನ್ನಡೇತರ ಶಾಲೆಗಳಲ್ಲಿ ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಈಗ ಸುಮಾರು 277 ಕನ್ನಡೇತರ ಶಾಲೆಗಳಿಗೆ ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡುವ ವಿಚಾರ ಸರ್ಕಾರದ ಮುಂದಿದೆ. ಒಟ್ಟಿನಲ್ಲಿ ಕಾಯಾವಾಚಾ ಈ ಭಾಷಾ ನೀತಿಯನ್ನು ನಾವು ಒಪ್ಪಿದ್ದೇವೆ. ಮುಂದೆ ಈ ಬಗ್ಗೆ ನ್ಯಾಯಾಲಯದ ತೀರ್ಪು ಬರುತ್ತದೆ, ಅದರ ಮೇಲೆ ಪರಿಪೂರ್ಣವಾಗಿ ಈ ಕೆಲಸವನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದರಲ್ಲಿ ಬಹುನೀತಿ ಎಂಬುದು ಇಲ್ಲ. ಇರುವುದು ಒಂದೇ ನೀತಿ. ಅದೇನೆಂದರೆ, ಎಲ್ಲಾ ಹಂತಗಳಲ್ಲಿಯೂ ಕನ್ನಡವನ್ನು ಜಾರಿಗೆ ತರುವುದು ಮತ್ತು ಕನ್ನಡೇತರರು ಕನ್ನಡವನ್ನು ಕಲಿಯಲಿ ಎಂದು......

ಶ್ರೀ ಗೋವಿಂದ ಪಿ. ಒಡೆಯರಾಜ್.—ಕೋರ್ಟಿನಲ್ಲಿರುವ ಸ್ಟೇ ಆರ್ಡರನ್ನು ವೆಕೇಟ್ ಮಾಡಿಸಲು ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆಂದು ಶ್ರೀ ವೀರಪ್ಪ ಮೊಯ್ಲಿ ಅವರು ಕೇಳಿದ್ದುದು ?

ಶ್ರೀ ಬಿ. ರಾಚಯ್ಯ.—ಈಗ ಕೋರ್ಟಿನ ಮುಂದಿರುವ ತಡೆಯಾಜ್ಞೆಯ ಬಗ್ಗೆ ಆದಷ್ಟು ಬೇಗ ತೀರ್ಮಾನ ಕೈಗೊಳ್ಳುವ ವಿಚಾರದಲ್ಲಿ ನಾವು ನಮ್ಮ ಅಡ್ವೋಕೇಟ್ ಜನರಲ್ ಅವರಿಗೆ ಪದೇ ಪದೇ ತಿಳಿಸಿದ್ದೇವೆ. ಈಗ ಆರ್ಗ್ಯುಮೆಂಟ್ಸ್ ನಡೆದು ಕೊನೆಯ ಹಂತಕ್ಕೆ ಬಂದಿರಬಹುದೆಂದು ಕಾಣುತ್ತದೆ. ಆದರೆ ಇಷ್ಟು ಕೆಲಸವನ್ನೂ ಸಹ ಈ ಹಿಂದಿನ ಸರ್ಕಾರ ಮಾಡಿರಲಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ತಡೆಯಾಜ್ಞೆಯ ಬಗ್ಗೆ ಈ ಹಿಂದಿನ ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲ. ಆದರೆ ಇದನ್ನು ಜಾಗ್ರತೆ ತೀರ್ಮಾನ ಮಾಡಬೇಕೆಂದು ನಾವು ಮನವಿ ಮಾಡಿಕೊಂಡಿದ್ದೇವೆ ಮತ್ತು ಈ ಬಗ್ಗೆ ಇರುವಂತಹ ಎಲ್ಲಾ ರಿಟ್ ಅರ್ಜಿಗಳನ್ನೂ ಒಂದೇ ಕಡೆ ಹಾಕಿಸಿದ್ದೇವೆ. It is before the Bench consisting of two Judges. ಹಿಂದಿನ ತಿಂಗಳ ಕೊನೆಯ ವಾರದಲ್ಲಿ ಈ ಬಗ್ಗೆ ವಾದವಿವಾದ ನಡೆಯುತ್ತಿತ್ತು. ಈಗ ಮತ್ತೆ ಪ್ರಾರಂಭವಾಗಿರಬಹುದು. ಈ ಹಿಂದಿನ ಸರ್ಕಾರ ಇಷ್ಟೂ ಸಹ ಮಾಡಿರಲಿಲ್ಲವೆಂಬುದಕ್ಕೆ ನಾನೇ ಸಾಕ್ಷಿ ಇದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಾಗಿದ್ದರೆ ತಾವು ಹಿಂದಿನ ಸರ್ಕಾರದ ಬಂಡವಾಳದಿಂದ ಜೀವನ ಮಾಡುತ್ತಿದ್ದೀರಾ ? ತಾವು ಕಳೆದ 7 ತಿಂಗಳಿನಿಂದ ಏನು ಮಾಡುತ್ತಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಸರ್ಕಾರದ ಬಂಡವಾಳವನ್ನು ನಂಬಿಕೊಂಡರೆ ಬೆನ್ನಿಗೆ ಚಪ್ಪಡಿಕಲ್ಲನ್ನು ಕಟ್ಟಿಕೊಂಡು ಹೊಂಡಕ್ಕೆ ಬಿದ್ದಂತೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:—ಈಗ ಸತ್ಯ ಹರೀಶ್ಚಂದ್ರರ ಮಕ್ಕಳು ಅಧಿಕಾರಕ್ಕೆ ಬಂದಿದ್ದಾರೆ. ಮುಂದೆ ಏನೇನು ಮಾಡುತ್ತಾರೋ ನೋಡೋಣ.

ಶ್ರೀ ಬಿ. ರಾಚಯ್ಯ.—ಯಾರು ಸತ್ಯ ಹರಿಶ್ಚಂದ್ರರು ಎಂಬುದನ್ನು ಜನರೇ ತೀರ್ಮಾನ ಮಾಡುತ್ತಾರೆ. ಯಾರು ಅಪ್ರಮಾಣಿಕತನದಿಂದ ನಡೆದುಕೊಂಡಿದ್ದಾರೆಂಬುದನ್ನೂ ಸಹ ಜನರೇ ತೀರ್ಮಾನ ಮಾಡಲಿ.

ಶ್ರೀ ಕೆ. ಶಿವಮೂರ್ತಿ.—ಈ ಸರ್ಕಾರಕ್ಕೆ ಸ್ವಂತ ಬಂಡವಾಳವಿಲ್ಲ. ಅದನ್ನು ಸಾಲವಾಗಿ ತೆಗೆದು ಕೊಂಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ಅದನ್ನು ಎರವಲಾಗಿ ತೆಗೆದುಕೊಳ್ಳ ಬೇಕಾಗುತ್ತದೆ. ಹಿಂದಿನವರು ಒಳ್ಳೆಯ ಕೆಲಸ ಮಾಡಿದ್ದರೆ, ಮಾಡಿದ್ದಾರೆಂದು ನಾವು ಹೇಳುತ್ತೇವೆ. ಅದೇ ರೀತಿ ನಾವು ಮಾಡಿದ್ದರೆ ಮಾಡಿದ್ದಾರೆ ಎಂದು ನೀವು ಹೇಳಿ. ಆ ದೃಷ್ಟಿಯಿಂದ ಭಾಷಾನೀತಿ ಬಹುಮುಖ ನೀತಿಯಲ್ಲ, ಆದ್ದರಿಂದ ಕನ್ನಡ ಶಾಲೆಗಳನ್ನು ತೆರೆಯುತ್ತೇವೆ. ಕನ್ನಡ ಶಾಲೆಗಳಲ್ಲಿ ಕನ್ನಡೇತರ ಮಕ್ಕಳಿಗೆ ಕನ್ನಡ ಕಲಿಸಲು ಉಪಾಧ್ಯಾಯರುಗಳನ್ನು ನೇಮಿಸುವುದು ತಡವಾಗಿದೆ. ಇದು ತಮಗೆ ಗೊತ್ತಿರತಕ್ಕ ವಿಷಯ. ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕು. ಕನ್ನಡೇತರರ ಮಕ್ಕಳಿಗೆ 10 ವರ್ಷಗಳವರೆಗೆ 15 ಕೃಪಾಂಕಗಳನ್ನು ಕೊಟ್ಟು ಮುಂದಿನ ತರಗತಿಗೆ ಹೋಗುವ ಒಂದು ರಿಯಾಯಿತಿಯನ್ನು ತೋರಿಸಿದ್ದೇವೆ. 10 ವರ್ಷಗಳ ವರೆಗೆ 15 ಕೃಪಾಂಕಗಳನ್ನು ಕೊಡತಕ್ಕದ್ದನ್ನು ತಾವು ಹಿಂದೆಯೇ ಮಾಡಿದ್ದೀರಿ. ತಾವು ತಂದಂತಹ ನೀತಿಯನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಹೀಗೆ ಮಾಡುವುದರಿಂದ ಬಾರ್ಡರ್ ಏರಿಯಾದಲ್ಲಿರ ತಕ್ಕವರಿಗೆ, ಪರಭಾಷೆ ಮಾತನಾಡತಕ್ಕವರಿಗೆ ಬಹಳ ತೊಂದರೆಯಾಗುತ್ತದೆ. ಕನ್ನಡ ನಾಡಿನಲ್ಲಿರತಕ್ಕವರು ಎಲ್ಲರೂ ಕನ್ನಡವನ್ನು ಕಲಿಯಲೇಬೇಕು. ಕನ್ನಡೇತರ ಶಾಲೆಗಳಿಗೆ ಉಪಾಧ್ಯಾಯರುಗಳನ್ನು ನೇಮಕ ಮಾಡ ಲಾಗುತ್ತದೆ. ಜೊತೆಗೆ ಪಾಠಪ್ರವಚನಗಳನ್ನು ಒದಗಿಸುವ ಕೆಲಸವನ್ನು ಮಾಡಲಾಗುತ್ತಿದೆ. 'ಕನ್ನಡ ಭಾರತಿ' ಎಂಬ ಪುಸ್ತಕವನ್ನು ಗೊತ್ತುಮಾಡಿ ವಾರದಲ್ಲಿ 5 ಪಾಠಗಳನ್ನು ಮಾಡಲು ಗೊತ್ತುಮಾಡಲಾಗಿದೆ. ಕೆಲವು ವಿಷಯಗಳನ್ನು ತೆಗೆದುಹಾಕಿದ್ದೇವೆ. ದೈಹಿಕ ಶಿಕ್ಷಣ ವಗೈರೆ ತೆಗೆದುಹಾಕಿ ಕನ್ನಡ ಪಾಠಗಳನ್ನು ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಎಷ್ಟರಮಟ್ಟಿಗೆ ಪ್ರಗತಿಯಲ್ಲಿದೆ ಎನ್ನುವುದನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು. ಮಂತ್ರಿಮಂಡಲದಲ್ಲಿರತಕ್ಕ ಮಾನ್ಯ ಅಜೀಜ್‌ಸೇಠ್‌ರವರು ಉರ್ದು ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಕಲಿಸಬೇಕೆಂದು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಕನ್ನಡ ಬಾರದೆ ಇರುವವರಿಗೆ ಕೆಲಸ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ಅವರಿಗೆ ಕೆಲಸ ಕೊಟ್ಟು ಅವರೂ ಸಹ ಕನ್ನಡ ಕಲಿತು ಕೊಳ್ಳಲಿಕ್ಕೆ 2 ವರ್ಷ ಸಮಯ ಕೊಡದೆಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಜೀಜ್‌ಸೇಠ್‌ರವರು ಕ್ಯಾಬಿನೆಟ್ ಮಂತ್ರಿಗಳಲ್ಲವೆ ? ಮಂತ್ರಿಗಳು ಅದನ್ನು ಹೇಳುತ್ತಾರೆಂದರೆ ಇದು ಸರ್ಕಾರದ ನೀತಿಯೆಂದು ತಿಳಿದುಕೊಳ್ಳುತ್ತೇವೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವೆಂದು ಹೇಳಲಿ, ಆದರೆ ಅವರು ನಾನು ಇದನ್ನು ಮಾಡುವುದಕ್ಕೆ ಬಿಡುವುದಿಲ್ಲ ವೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಜೀಜ್‌ಸೇಠ್‌ರವರು ಭಾಷಾ ನೀತಿಯನ್ನು ಒಪ್ಪಿಕೊಂಡಿದ್ದಾರೆ. ಕರ್ನಾಟಕ ಲೋಕಸೇವಾ ಆಯೋಗ ಮತ್ತು ಇತರ ಪರೀಕ್ಷೆಗಳನ್ನು ನಡೆಸುವಾಗ ಐ.ಪಿ.ಎಸ್. ಮತ್ತು

ಐ.ಎ.ಎಸ್. ಅಧಿಕಾರಿಗಳಿಗೆ ಯಾವ ರೀತಿಯ ಅವಕಾಶವನ್ನು ಕೊಡುತ್ತೀರಿ ಆ ಒಂದು ಅವಕಾಶವನ್ನು ನಮಗೂ ಕೊಡಿ ಎಂದು ಕೇಳುತ್ತಿದ್ದಾರೆ. ಭಾಷಾ ನೀತಿಯ ಬಗ್ಗೆ ಬಹುಮುಖ ನೀತಿ ಏನೂ ಇಲ್ಲ. ಎಲ್ಲರೂ ಕೂಡ ಕನ್ನಡವನ್ನು ಕಲಿಯಲೇಬೇಕು, ಅದಕ್ಕೆ ಕಾಲಾವಕಾಶ ಬೇಕಾಗಿದೆ. ಅದಕ್ಕೆ ಏನು ಕಾರ್ಯಕ್ರಮ ಬೇಕೋ ಅದನ್ನು ಹಾಕಿಕೊಂಡು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಕನ್ನಡನಾಡಿನ ಬಗ್ಗೆ ಹೆಚ್ಚಿನ ಅಭಿಮಾನ ಇಟ್ಟು ಕನ್ನಡ ಶಾಲೆಗಳು ಬರುವುದಕ್ಕೆ ಈ ಸರ್ಕಾರ ಬಹಳವಾಗಿ ಶ್ರಮಿಸಿದೆ. ಕೆಲಸ ನಿಧಾನವಾಗಿರುವುದರ ಬಗ್ಗೆ ಅವರಿಗೆ ಹೇಳಿದಮೇಲೆ ಬಹು ಜನ ನೀವು ಹೋಗಿರತಕ್ಕ ದಾರಿ ಸರಿ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರಾದ ಅಜೀಜ್‌ಸೇಠ್‌ರವರು ಹೇಳಿರುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸಚಿವರು ನಾನು ಹೇಳಿಲ್ಲವೆಂದು ಹೇಳಿದ್ದಾರೆ. ನಾನು ಏನು ಮಾಡಲಿ ?

ಶ್ರೀ ಎಂ. ರಘುಪತಿ.—ಬೆಂಗಳೂರಿನಲ್ಲಿ ಮಾನ್ಯ ಅಜೀಜ್‌ಸೇಠ್‌ರವರು ಕಳೆದ ತಿಂಗಳು ದಿನಾಂಕ 24 ರಂದು ಒಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಜೀಜ್‌ಸೇಠ್‌ರವರು ಇಲ್ಲಿಗೆ ಬಂದಮೇಲೆ ಹೇಳಬೇಕು ಹೊರಗಡೆ ಹೇಳುವುದು ಸರಿಯಲ್ಲ. ಉರ್ದು ಶಾಲೆಗಳಲ್ಲಿ ಕನ್ನಡ ಕಲಿಸಲಿಕ್ಕೆ ಯಾವುದೇ ವಿರೋಧವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಿಮ್ಮ ಧೋರಣೆಯೇನು ?

ಶ್ರೀ ಬಿ. ರಾಚಯ್ಯ.—ಉರ್ದು ಮಾಡಿಯಂ ಶಾಲೆಗಳಲ್ಲಿ ಕನ್ನಡ ಉಪಾಧ್ಯಾಯರುಗಳನ್ನು ಹಾಕಿದ್ದೇವೆ. ಎಲ್ಲೆಲ್ಲಿ ಕನ್ನಡ ಉಪಾಧ್ಯಾಯರುಗಳು ಇಲ್ಲ ಅಂತಹ ಕಡೆಗಳಿಗೆ ಉಪಾಧ್ಯಾಯರುಗಳನ್ನು ಹಾಕತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಅಜೀಜ್‌ಸೇಠ್‌ರವರು ಕೂಡ ನಮ್ಮವರು ಸರ್ಕಾರಿ ಕೆಲಸದಲ್ಲಿ 2 ಪರ್ಸೆಂಟ್ ಕೂಡ ಇಲ್ಲ, ಆದ್ದರಿಂದ ಉರ್ದು ಶಾಲೆಗಳಲ್ಲಿ ಕನ್ನಡವನ್ನು ಕಲಿಸಬೇಕು. ಜೊತೆಗೆ ಅವರು ನಮ್ಮ ಭಾಷಾನೀತಿಯನ್ನು ಒಪ್ಪಿಕೊಂಡಿದ್ದಾರೆ. ಕೆಲವು ಮಾನ್ಯ ಸದಸ್ಯರುಗಳು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ಏತಕ್ಕೆ ಕೊಟ್ಟಿದ್ದೀರಿ ಎಂದು ಕೇಳಿದರು. ಇಂಗ್ಲೀಷ್ ಮಾಡಿಯಂ ಶಾಲೆಗಳನ್ನು ಬೆಳಗಾಂ ಮತ್ತು ಲೋಂಡಾದಲ್ಲಿ ಕೊಟ್ಟಿರತಕ್ಕದ್ದು ನಿಜ. ರಾಜ್ಯಾಂಗದಲ್ಲಿರತಕ್ಕ ಅಂಶವನ್ನು ಗಮನದಲ್ಲಿಟ್ಟು ಆ ಕೆಲಸವನ್ನು ಮಾಡಬೇಕಾಗುತ್ತದೆ. ರಾಜ್ಯಾಂಗದಲ್ಲಿರತಕ್ಕದ್ದನ್ನು ಒಪ್ಪಿಕೊಂಡ ಮೇಲೆ ಅವರವರ ಮಾತೃ ಭಾಷೆಯಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಿದೆ. ಆಂಗ್ಲೋ-ಇಂಡಿಯನ್ ತನ್ನ ಮಾತೃಭಾಷೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಹಿಂದಿನಿಂದ ಬಾರ್ಡರ್ ಏರಿಯಾದಲ್ಲಿ 7ನೇ ತರಗತಿಯವರೆಗೂ ಓದಿಕೊಂಡು ಬಂದಿದ್ದಾರೆ. 10ನೇ ತರಗತಿಯವರೆಗೆ ಅವಕಾಶ ಕೊಡುವುದಿಲ್ಲ ಎಂದರೆ ತಪ್ಪಾಗುತ್ತದೆ. ಈಗಿನ ನೀತಿಯ ಪ್ರಕಾರ, ಕೇಂದ್ರ ಸರ್ಕಾರದ ಅಧಿಕಾರಿಗಳು ಇಲ್ಲಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಈಗ ಕರ್ನಾಟಕ ರಾಜ್ಯದಲ್ಲಿ 162 ಉರ್ದು ಶಾಲೆಗಳಿವೆ. ಎಷ್ಟು ಶಾಲೆಗಳಿಗೆ ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡಿದ್ದೀರಿ. ಕನ್ನಡ ಉಪಾಧ್ಯಾಯರುಗಳನ್ನು ನೇಮಕ ಮಾಡುವ ವ್ಯವಸ್ಥೆ [illegible].

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕ್ವಾಲಿಫಿಕೇಷನ್ ಆಮೇಲೆ ಕೇಳಿರಬಹುದು. ಎರಡು ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಮುಂದುವರಿಸಲು ತೀರ್ಮಾನ ಮಾಡುವುದಕ್ಕೆ ಮೊದಲು ಕೊಟ್ಟಿರುವುದು ನಿಜ. ಭಾಷಾ ನೀತಿಯ [illegible] ಹೆಚ್ಚಿನವರಿಂದ ಆಚೆ [illegible] ಏನು ಹೇಳಿದ್ದಾರೆಂದರೆ ಕೇಂದ್ರ ಸರ್ಕಾರದ ನೌಕರರು ಒಂದು ಕಡೆಯಿಂದ ಮತ್ತೊಂದು ಕಡೆ ವರ್ಗಾವಣೆಯಾಗುವುದರಿಂದ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವಾಗ ಒಂದೇ ನೀತಿಯನ್ನು ಅಡಾಪ್ಟ್ ಮಾಡಿದರೆ ಅವರ ಮಕ್ಕಳು ವಿದ್ಯಾಭ್ಯಾಸ [illegible] ಕಷ್ಟವಾಗುತ್ತದೆ. ಆಗ ನೀತಿಯನ್ನು ಸಡಿಲಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ. ಆಂಗ್ಲೋ ಇಂಡಿಯನ್ಸ್ ಅವರಿಗೆ ಅವರ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶ ಕೊಡಬೇಕಾಗಿ ಬರುತ್ತದೆ. [illegible] ಹಿಂದಿನ ನೀತಿಯನ್ನು ಹಾಕಿದ್ದೇವೆ. ಅದನ್ನು ಪುನರ್‌ವಿಮರ್ಶೆ ಮಾಡಬೇಕಾಗಿ ಬರುತ್ತದೆ. ಎಲ್ಲೆಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ನಡೆಸುತ್ತಿದ್ದಾರೆ, ಅವುಗಳನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನುವುದನ್ನು ತೀರ್ಮಾನ ಮಾಡಬೇಕಾಗುತ್ತದೆ. ಈಗ ಇನ್ನೊಂದು ವಾದ ಬಂದಿದೆ. ಈಗ ಎಲ್ಲಾ ಕಡೆಗೂ [illegible] ಮೇಲೆ ಸೀಟುಗಳನ್ನು ಕೊಡಲಾಗುತ್ತಿದೆ. ಕ್ಯಾಸ್ಕೋರ್, ಟೆಕ್ನಿಕಲ್ ಸ್ಕೂಲ್. ಎಸ್.ಎಸ್.ಎಲ್.ಸಿ., [illegible]. ಎಲ್ಲಾ ಕಡೆಗಳಿಂದ ಬಂದಿರತಕ್ಕವರನ್ನು ನೋಡಿದಾಗ ಇಂಗ್ಲೀಷ್ ಮೀಡಿಯಂ ಶಾಲೆಗಳಿಂದ ಬಂದವರು, ವಿದ್ಯಾರ್ಥಿಗಳು ಮೆರಿಟ್‌ನಲ್ಲಿ ಬಂದಿದ್ದಾರೆ. ಕನ್ನಡ ಶಾಲೆಗಳಲ್ಲಿ ಕಲಿತಂತಹ ಮಕ್ಕಳು ಯಾರಿದ್ದಾರೆ ಅವರು ಯಾರೂ ಮೆರಿಟ್‌ನಲ್ಲಿ ಬರುವುದಕ್ಕೆ ಆಗಿಲ್ಲ. ಅವರಿಗೆ ಅಲ್ಲಿ ಸರಿಯಾದ ಅವಕಾಶವಿಲ್ಲದೆ ಇರಬಹುದು. ಅವರಿಗೆ ಅಲ್ಲಿ ಪ್ರೋತ್ಸಾಹ ಇಲ್ಲದೇ ಇರಬಹುದು. ಒಳ್ಳೆಯ ಉಪಾಧ್ಯಾಯರು ಇಲ್ಲದೆ ಇರಬಹುದು. ಕನ್ನಡ ಶಾಲೆಯ ಮಕ್ಕಳು ಇಂಗ್ಲೀಷ್ ಶಾಲೆಯ ಮಕ್ಕಳ ಮಟ್ಟಕ್ಕೆ ಬರುವುದಕ್ಕೆ ಆಗಿಲ್ಲ. ಹಾಗೆಂದು ಎಲ್ಲಾ ಕಡೆ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಕೂಡ ಎಂದರೆ ಕೊಡುವುದಕ್ಕೆ ಆಗುವುದಿಲ್ಲ. ಎಲ್ಲಿ ಕೇಂದ್ರ

ಸರ್ಕಾರದ ನೌಕರರು ಜಾಸ್ತಿ ಇದ್ದಾರೆ ಅಲ್ಲಿ ಅವರು ಒತ್ತಾಯ ತಂದಿದ್ದಾರೆ. ನಾವು ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟು ರಾಜ್ಯಾಂಗದ ವಿಧಿಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಒಂದು ಶಾಲೆಯನ್ನು ಕೊಟ್ಟಾಗ ಅಲ್ಲಿಗೆ ನಮ್ಮ ಮಕ್ಕಳು ಹೋಗುತ್ತವೆ, ಆಗ ಇದು ದ್ವಿಮುಖ ನೀತಿಯಲ್ಲ.

ಇನ್ನು ವೃತ್ತಿಶಿಕ್ಷಣ, ಟೆಕ್ನಿಕಲ್ ಶಾಲೆಗಳನ್ನು ಹೆಚ್ಚಿಗೆ ಮಾಡಿಲ್ಲವೆಂದು ಹೇಳಿದ್ದಾರೆ. ಈ ವರ್ಷ ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ 36 ಜೂನಿಯರ್ ಕಾಲೇಜುಗಳನ್ನು ಹೊಸದಾಗಿ ತೆರೆದಿದ್ದೇವೆ. ಯಾವ್ಯಾವ ಭಾಗದಲ್ಲಿ ಯಾವ್ಯಾವ ಕೆಲಸ ಸಿಗುತ್ತದೆ, ಯಾವುದು ಅವಶ್ಯಕವಿದೆ ಅದನ್ನು ನಾವು ಗಮನದಲ್ಲಿಟ್ಟು ಕೊಡುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ವಿದ್ಯಾಭ್ಯಾಸ ಇಲಾಖೆಯಲ್ಲಿ ಇದುವರೆಗೆ ಜನರಲ್ ಆಗಿ ಕಾರ್ಯಕ್ರಮ ಹಾಕಿಕೊಂಡು ಶಿಕ್ಷಣ ಕೊಟ್ಟಿಲ್ಲ. ಆ ಒಂದು ಪಾಲಿಸಿಯನ್ನು ತಾವು ಹಾಕಿಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ಇವತ್ತು ಖಾಸಗಿಯವರು ಇಂಗ್ಲಿಸ್ ಮೀಡಿಯಂ ಶಾಲೆಗಳನ್ನು ಕೊಡಬೇಕೆಂದು ಕೇಳು ತ್ತಿದ್ದಾರೆ. ಸರ್ಕಾರದವರು ಇಂಗ್ಲೀಷ್ ಮೀಡಿಯಂ ಸ್ಕೂಲುಗಳನ್ನು ನಡೆಸುವುದು ಬಹಳ ಕಡಿಮೆ. ಮತ್ತು ಉಪಾಧ್ಯಾಯರೂ ಸಹ ಸಿಗುವುದಿಲ್ಲ. ವಿಜ್ಞಾನ ಮತ್ತು ಗಣಿತ ಪಾಠ ಮಾಡುವಂಥ ಉಪಾಧ್ಯಾಯರು ಸಿಗುವುದು ಕೂಡ ಬಹಳ ಕಷ್ಟ. ಈಗ ಎಲ್ಲರೂ ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗಳನ್ನು ಕೇಳುತ್ತಿದ್ದಾರೆ. ಆ ತರಗತಿಯನ್ನು ಪಾಸು ಮಾಡಿಕೊಂಡು ಸುಮಾರು 6 ತಿಂಗಳ ಕಾಲ ಟಿ.ಸಿ.ಹೆಚ್. ಟ್ರೈನಿಂಗ್ ಮಾಡಿದರೆ ಅದು ಎರಡು ವರ್ಷಗಳ ಟಿ.ಸಿ.ಹೆಚ್.ಗೆ ಸಮಾನವಾಗುವುದೆಂದು ಹೇಳಿ ಆ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ಕೇಳುತ್ತಾರೆ. ಆದರೆ ಸರ್ಕಾರದವರು ಅದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮತ್ತೆ ವೃತ್ತಿಶಿಕ್ಷಣಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 36 ಪಾಲಿ ಟೆಕ್ನಿಕ್ ಕಾಲೇಜುಗಳು ಹೆಚ್ಚಾಗಿವೆ. ಕಾರಣವೇನೆಂದರೆ ಇವತ್ತು ರಾಜ್ಯದ ನಾನಾ ತಾಲ್ಲೂಕುಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದ್ದಾರೆ ಆ ಕೊಳವೆ ಬಾವಿಗಳು ಕೆಟ್ಟುಹೋದರೆ ಅವುಗಳನ್ನು ರಿಪೇರಿ ಮಾಡುವುದಕ್ಕೆ ಟೆಕ್ನಿಕಲ್ ಹ್ಯಾಂಡ್ಸ್ ಇಲ್ಲ. ಆದ್ದರಿಂದ ಮೂರು ವರ್ಷಗಳ ಪಾಲಿಟೆಕ್ನಿಕ್ ಪಾಸ್ ಮಾಡಿಕೊಂಡರೆ ಅವರು ಈ ಕೊಳವೇಬಾವಿಗಳನ್ನು ರಿಪೇರಿ ಮಾಡಿಕೊಳ್ಳಬಹುದು. ಇದರಿಂದ ಆ ತಾಲ್ಲೂಕಿಗೆ ಸಂಬಂಧಪಟ್ಟಂತಹ ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಯೋಚನೆ ಮಾಡಿ ಸರ್ಕಾರ ದವರು ಈ ಪಾಲಿಟೆಕ್ನಿಕ್ ಕಾಲೇಜುಗಳನ್ನು ತೆರೆಯಲು ಆಲೋಚನೆ ಮಾಡಿದ್ದಾರೆ. ಸರ್ಕಾರದವರು ಒಂದು ಪಾಲಿಟೆಕ್ನಿಕ್ ಕಾಲೇಜು ತೆರೆಯಬೇಕಾದರೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನೂ ಸಹ ನಾವು ಯೋಚನೆ ಮಾಡಬೇಕಾಗುತ್ತದೆ. ಖಾಸಗಿಯವರು ಮುಂದೆ ಬಂದು ನಾವು ಪಾಲಿಟೆಕ್ನಿಕ್ ಕಾಲೇಜುಗಳನ್ನು ತೆರೆಯುತ್ತೇವೆಂದು ಹೇಳಿದರು. ಆದರೆ ಅವರಿಗೆ ನಾವು ಪಾಲಿಟೆಕ್ನಿಕ್ ಕಾಲೇಜುಗಳನ್ನು ಕೊಡಬೇಕಾದರೆ ಅವರಿಗೆ ಯಾವ್ಯಾವ ರಿಸೋರ್ಸ್ ಇದೆ ಎಂಬುದನ್ನೂ ಸಹ ನೋಡಿ ಕೊಡಬೇಕಾಗುತ್ತದೆ. ಆದ್ದರಿಂದ ನಾವು ಅವರಿಗೆ ಕೆಲವು ಷರತ್ತುಗಳನ್ನು ಹಾಕಿದ್ದೇವೆ. ಆ ಷರತ್ತುಗಳು ಏನೆಂದರೆ ಯಾರು ಇದನ್ನು ತೆರೆಯಬೇಕೆಂದಿದ್ದಾರೋ ಅವರು ಹತ್ತು ಲಕ್ಷ ರೂಪಾಯಿಗಳು ಡಿಪಾಜಿಟ್ ಹಣವನ್ನು ಇಡಬೇಕು. ಮತ್ತು ಕಾಲೇಜು ತೆರೆಯುವುದಕ್ಕೆ ಸುಮಾರು 15 ಎಕರೆ ಜಾಗ ಇರಬೇಕು. ಇಷ್ಟು ಇದ್ದರೆ ತಾವು ಪಾಲಿಟೆಕ್ನಿಕ್ ಕಾಲೇಜು ತೆರೆಯುವುದಕ್ಕೆ ಸರ್ಕಾರ ಮನ್ನಣೆ ಕೊಡುತ್ತದೆ ಎನ್ನುವ ಮಾತನ್ನು ಹೇಳಿದ್ದೇವೆ. ಆಗ ಕೆಲವರು ಇದಕ್ಕೆ ಒಪ್ಪಲಿಲ್ಲ. ಪಾಲಿಟೆಕ್ನಿಕ್ ಕಾಲೇಜು ಕೊಡಿ ಎಂದು ಸುಮಾರು 76 ಅರ್ಜಿಗಳು ಬಂದಿದ್ದವು. ಈ ಷರತ್ತು ಹಾಕಿದ ಮೇಲೆ ಯಾರೂ ಮುಂದೆ ಬರಲಿಲ್ಲ. ನಾವು ಈ ಷರತ್ತುಗಳನ್ನು ಹಾಕಬೇಕಾದರೆ ಕಾರಣ ಇದೆ. ಅದು ಏನೆಂದರೆ ಇವತ್ತು ಖಾಸಗಿ ಶಾಲೆಗಳವರು ಕ್ಯಾಪಿಟೇಷನ್ ಫೀಜು ತೆಗೆದುಕೊಳ್ಳುವ ಹಾಗೆ ಇಲ್ಲ. ಹಾಗಿದ್ದ ಪಕ್ಷದಲ್ಲಿ ಅವರು ಪಾಲಿಟೆಕ್ನಿಕ್ ಕಾಲೇಜುಗಳನ್ನು ಯಾವ ರೀತಿಯಲ್ಲಿ ನಡೆಸುತ್ತಾರೆ ಎಂಬುದನ್ನು ಕೂಡ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಕೆಲವೊಂದು ಅರ್ಜಿಗಳು ಹರಿಜನ ಮತ್ತು ಗಿರಿಜನರ ಹೆಸರಿನಲ್ಲಿ ಕೂಡ ಬಂದಿದ್ದವು. ಆದರೆ ಇವತ್ತು ಏನು ಮಾಡುತ್ತಿದ್ದಾರೆಂದು ನಾವು ನೋಡುವುದಾದರೆ ಹರಿಜನರ ಹೆಸರಿನಲ್ಲಿ ಶಾಲೆಗಳನ್ನು ಮಂಜೂರು ಮಾಡಿಸಿ ಕೊಂಡು ಅವರಿಂದ ಬೇರೆಯವರು ಎರವಲು ಪಡೆಯುತ್ತಿದ್ದಾರೆ. ಆಮೇಲೆ ಅವರು ಸುಮಾರು ಎರಡು ಮೂರು ವರ್ಷಗಳು ಕಾಲೇಜು ನಡೆಸಿ ನಂತರ ಸರ್ಕಾರದಿಂದ ಸಂಬಳ ಸಾರಿಗೆಗಳನ್ನು ಕೊಡಿ ಎಂದು ಹೇಳಿದರೆ ನಾವು ಆಗ ಎಲ್ಲಿಗೆ ಹೋಗಬೇಕು ? ಈ ದೃಷ್ಟಿಯಿಂದ ನಾವು ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ತೆರೆಯುವುದಕ್ಕೆ ಕೆಲವೊಂದು ಷರತ್ತುಗಳನ್ನು ಹಾಕಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಈ ಸರ್ಕಾರ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಟ್ಟಿಲ್ಲವೆಂದು ಹೇಳುವುದು ಸರಿಯಾದುದಲ್ಲ. ಈ ವರ್ಷ ನಮ್ಮ ಸರ್ಕಾರ ಹೆಚ್ಚಿನ ಶಾಲೆಗಳನ್ನು ತೆರೆದು ಪ್ರತಿಯೊಂದು ಗ್ರಾಮಕ್ಕೂ ಕೂಡ ಶಾಲೆಗಳನ್ನು ಒದಗಿಸಿಕೊಟ್ಟು ವಿದ್ಯಾರ್ಥಿ ಗಳು ವ್ಯಾಸಂಗ ಮಾಡುವುದಕ್ಕೆ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ಮತ್ತು ಹಳ್ಳಿಗಾಡು ಪ್ರದೇಶಗಳಲ್ಲಿ ವಾಸ ಮಾಡುವಂಥ ಮಕ್ಕಳಿಗೆ ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರ ಯೋಚನೆ ಕೂಡ ಮಾಡಿದೆ.

ಇನ್ನು ಪುಸ್ತಕ ಭಂಡಾರಗಳ ಬಗ್ಗೆ ಕೆಲವು ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇವತ್ತು ಅನೇಕ ಪುಸ್ತಕಗಳನ್ನು ಸರ್ಕಾರದವರು ಕನ್ನಡದಿಂದ ಇಂಗ್ಲಿಷ್‌ಗೆ ತರ್ಜುಮೆ ಮಾಡಿಸಿದ್ದಾರೆ. ಮತ್ತು ನಮಗೆ ಆಯಾಯಾ ಡಿಸ್ಟ್ರಿಕ್ಟ್‌ಗಳಿಂದ ಬರಬೇಕಾದಂಥ ಸೆಸ್ ಸರಿಯಾಗಿ ಬರುತ್ತಿಲ್ಲ. ನಾವು ಯಾವುದೇ ಪುಸ್ತಕಗಳನ್ನೂ ಸಹ ಕೊಂಡುಕೊಳ್ಳುವುದಕ್ಕೆ ಹಣ ಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ನಾವು ಹೊರಗಡೆಯಿಂದ ಕೂಡ ಪುಸ್ತಕಗಳನ್ನು ತರಿಸುತ್ತಿದ್ದೇವೆ. ಸರ್ಕಾರ ಯಾವುದೇ ಕೆಲಸವನ್ನು ಮಾಡಿದರೂ ಕೂಡ ಪ್ರಾಮಾಣಿಕವಾಗಿಯೇ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂಥ ಶ್ರೀ ವೀರಪ್ಪ ಮೊಯ್ಲಿಯವರು ಮತ್ತು ರಾಮ್‌ದೇವ್‌ರವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ರಾಮ್‌ದೇವ್‌ರವರು ಮಾತನಾಡುತ್ತಾ ಬೆಂಗಳೂರು ವಿಶ್ವವಿದ್ಯಾನಿಲಯ ಅಶಿಸ್ತಿನ ಆಗರ ಎಂದು ಕೂಡ ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಇವತ್ತು ಅನೇಕ ಶಾಲಾ ಕಾಲೇಜುಗಳನ್ನು ಕೊಟ್ಟಿದ್ದಾರೆ. ಕಾರಣವೇನೆಂದರೆ ಆ ಜಿಲ್ಲೆಗೆ ಸಂಬಂಧಪಟ್ಟಂತೆ ಅಥವಾ ಆಯಾ ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂದು ಕಾಲೇಜು ಇದ್ದರೆ ಆ ಭಾಗದ ಜನರು ಆ ಕಾಲೇಜಿಗೆ ಬಂದು ಸೇರಬಹುದು. ಇದರಿಂದ ಅವರು ದೊಡ್ಡ ದೊಡ್ಡ ಪಟ್ಟಣಗಳಿಗೆ ಬಂದು ವ್ಯಾಸಂಗ ಮಾಡುವುದು ತಪ್ಪುತ್ತದೆ. ಮತ್ತು ತಂದೆ ತಾಯಿಗಳಿಗೆ ಅಷ್ಟು ಕಷ್ಟವಾಗುವುದಿಲ್ಲ. ಹಿಂದೆ ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜುಗಳನ್ನು ಕೊಟ್ಟಾಗ ಸೆನೆಟ್ ಮತ್ತು ಸಿಂಡಿಕೇಟ್ ಒಪ್ಪಿಗೆಯನ್ನು ಪಡೆಯದೆ ಕೊಟ್ಟಿರತಕ್ಕಂಥ ನಿದರ್ಶನಗಳು ಕೂಡ ಇವೆ. ಮತ್ತೆ ಸರ್ಕಾರದವರು ರಚಿಸಿದ್ದ ಸಮಿತಿಯವರೂ ಅವರ ವರದಿಯನ್ನು ಸಲ್ಲಿಸಿದ್ದಾರೆ. ಅವರ ವರದಿಯ ಪ್ರಕಾರ ಉಪಕುಲಪತಿಗಳು ತೀರ್ಮಾನ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಉಪಕುಲಪತಿಗಳೂ ಕೂಡ ಸರ್ಕಾರಕ್ಕೆ ಇದನ್ನು ತಿಳಿಸಿದ್ದಾರೆ.ಆದರೆ ನಾವು ವಿಶ್ವವಿದ್ಯಾನಿಲಯಕ್ಕೆ ಇರುವಂಥ ಸ್ವಾಯತ್ತತೆಯನ್ನು ತಿದ್ದುಪಡಿ ಮಾಡುವುದಕ್ಕೆ ಸ್ವಲ್ಪ ತಡವಾಗುತ್ತದೆ. ರಾಜ್ ಕಮಿಟಿಯ ವರದಿಯಲ್ಲಿ ತಿಳಿಸಿರುವಂತೆ ನಾವು ವಿಶ್ವವಿದ್ಯಾನಿಲಯಕ್ಕೆ ಸ್ವಾಯತ್ತತೆಯನ್ನು ಕೊಡಬೇಕು. ಮತ್ತೆ ಯು.ಜಿ.ಸಿ.ಯವರ ಕೆಲವು ಸೂಚನೆಗಳನ್ನೂ ಕೂಡ ನಾವು ಗಮನಿಸಬೇಕಾಗುತ್ತದೆ. ಇವತ್ತು ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಿಗೆ ನಾವು ಸುಮಾರು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯು.ಜಿ.ಸಿ.ಯವರು ನಮಗೆ ಧನಸಹಾಯ ಮಾಡಬೇಕು. ನಾವು ಈ ವಿಷಯವನ್ನು ಯು.ಜಿ.ಸಿ.ಯವರ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ ಅವರು ಹೇಳಿದರು, ನಾವು ಒಂದು ಪರಿಶೀಲನಾ ಸಮಿತಿಯನ್ನು ಕಳುಹಿಸಿಕೊಡುತ್ತೇವೆಂದು. ಮತ್ತು ಅವರು ಕೆಲವು ಷರತ್ತುಗಳನ್ನು ಕೂಡ ಹಾಕಿದ್ದಾರೆ. ಮತ್ತೆ ಒಂದು ಪ್ಲಾನಿಂಗ್ ಬೋರ್ಡ್ ಮಾಡಿ ವಿಶ್ವವಿದ್ಯಾನಿಲಯದ ಸ್ವಾಯತ್ತತೆಯ ಬಗ್ಗೆ ಯೋಚನೆ ಮಾಡಬೇಕೆಂದು ಕೂಡ ತಿಳಿಸಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಇಲ್ಲಿ ನಾವು ಮೂಲಭೂತವಾದ ವಿಷಯವನ್ನು ಚರ್ಚೆ ಮಾಡಿ ಶೀಘ್ರಗತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದರೆ ಇವತ್ತು ಕಾಲೇಜುಗಳಲ್ಲಿ ಸರಿಯಾದ ವೇಳೆಗೆ ಪಾಠ ಪ್ರವಚನಗಳು ಆಗುತ್ತಿಲ್ಲ. ಮತ್ತು ಪರೀಕ್ಷೆ ಕಾಲಕ್ಕೆ ಸರಿಯಾಗಿ ನಡೆಯುತ್ತಿಲ್ಲ. ವಿದ್ಯಾರ್ಥಿಗಳಲ್ಲಿ ಒಳಜಗಳಗಳು ಇದ್ದೇ ಇದೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಇವತ್ತು ಇಂಜಿನಿಯರಿಂಗ್ ಕಾಲೇಜುಗಳು ಇವೆ. ಆದರೆ ಆ ಶಾಲೆಗಳಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಕೊಟ್ಟಿಲ್ಲವೆಂದು ಸರ್ಕಾರಕ್ಕೆ ವಿದ್ಯಾರ್ಥಿಗಳು ದೂರು ಕೊಟ್ಟಿದ್ದಾರೆ. ಅಲ್ಲಿರತಕ್ಕಂಥ ಪ್ರಿನ್ಸಿಪಾಲರನ್ನು ಕರೆಸಿ ಇದರ ಬಗ್ಗೆ ಮಾತನಾಡಿದ್ದೇನೆ. ಇದು ಸ್ವಲ್ಪ ಯೋಚನೆ ಮಾಡತಕ್ಕಂಥ ಕೆಲಸ. (ಕೇಂದ್ರ ಸರ್ಕಾರದವರು ಹೇಳಿದ್ದಾರೆ ಮುಂಚಿತವಾಗಿ ನಿವೃತ್ತಿ ಮಾಡುವುದಕ್ಕೆ ಸಾಧ್ಯವೇ ಎಂದು.) ಯಾರು ಯಾರು ತಮ್ಮ ಕರ್ತವ್ಯವನ್ನು ಮಾಡುವುದಿಲ್ಲವೋ, ಯಾರು ಯಾರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಯೋ ಅವರ ಮೇಲೆ ಸರ್ಕಾರ ಯೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ಸರ್ಕಾರವೇನೂ ಸುಮ್ಮನೆ ಕಣ್ಣು ಮುಚ್ಚಿ ಕುಳಿತಿಲ್ಲ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಇದ್ದಂಥ ಕಾಲೇಜಿನಲ್ಲಿ ಈ ಅಧ್ವಾನ ಪರಿಸ್ಥಿತಿ ಬಂದಿದೆಯೆಂದು ಹೇಳಿದರೆ. ನಾವು, ಅಂದರೆ ವಿಶ್ವವಿದ್ಯಾಲಯದವರೂ ಸರ್ಕಾರದವರೂ, ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಆದ್ದರಿಂದ ಅಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ನಾನು ಒಪ್ಪಿಕೊಂಡಿದ್ದೇನೆ. ಇದನ್ನು ಸುಧಾರಣೆ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಕೂಡ ಹಾಕಿಕೊಂಡಿದ್ದೇವೆ. ನಾವು ಈಗ ಇದರ ಬಗ್ಗೆ ಹೆಚ್ಚಿನ ಹೊಣೆಯನ್ನು ಹೊತ್ತು ಈ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಅದರ ಪ್ರಗತಿಯನ್ನು ಸುಧಾರಣೆ ಮಾಡುವುದಕ್ಕೂ ಪ್ರಯತ್ನ ಮಾಡುತ್ತಿದ್ದೇವೆ. ಹಾಗೆಯೇ ಉಪಕುಲಪತಿಗಳನ್ನು ನೇಮಕ ಮಾಡತಕ್ಕಂಥ ವಿಚಾರ. ಸರ್ಕಾರದವರ ಶಿಫಾರಸ್ಸಿನ ಮೇಲೆ ಕುಲಪತಿಗಳು ಇವರನ್ನು ನೇಮಿಸಿದ್ದಾರೆ. ಬಹುಶಃ ಕುಲಪತಿಗಳು ಏನು ತಿಳಿಸಿದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಆದರೂ ಕೂಡ ಬಹಳ ಜನ. ಈಗಿರತಕ್ಕಂಥವರು ಹೋದರೆ ಬಹಳ ಒಳ್ಳೆಯದೇನೋ ಎಂದು ತಿಳಿದುಕೊಂಡಿದ್ದಾರೆ. ಮತ್ತೊಬ್ಬರು ನನ್ನನ್ನು ಮಾಡಿದರೆ ಒಳ್ಳೆಯದೆಂದು ತಿಳಿದುಕೊಂಡಿದ್ದಾರೆ. ಆದರೆ ಇದಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಗೌರವ

ಮತ್ತು ಮಾನ್ಯತೆಯನ್ನು ಪಡೆದಿರತಕ್ಕಂಥವರು; ಅರ್ಹತೆಯನ್ನು ಪಡೆದಿರತಕ್ಕಂಥವರನ್ನು ಸರ್ಕಾರ ನೇಮಿಸಬೇಕೆಂದು ಯೋಚನೆ ಇಟ್ಟುಕೊಂಡಿದೆ. ಈಗಾಗಲೇ ಸರ್ಕಾರದ ಪ್ರತಿನಿಧಿಗಳನ್ನು ಯು.ಜಿ.ಸಿ.ಯವರಿಗೂ ಕಳುಹಿಸಿಕೊಟ್ಟಿದ್ದೇವೆ. ಅವರು ಯಾರನ್ನು ಚುನಾಯಿಸುತ್ತಾರೋ ಅವರನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದರಲ್ಲಿ ನಮ್ಮ ಕೈವಾಡವೇನೂ ಇರಬಾರದು. ಈ ಕ್ಷೇತ್ರದಲ್ಲಿ ವ್ಯಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಕೆಲಸ ಮಾಡುವುದರಿಂದಲೇ ಮೈಸೂರಿನಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಈ ರೀತಿಯ ವಾತಾವರಣ ಉಂಟಾಗುತ್ತದೆ. ಶಿಕ್ಷಣ ಕ್ಷೇತ್ರ ಬಹಳ ಪವಿತ್ರವಾದಂಥ ಕ್ಷೇತ್ರ. ಇದರಲ್ಲಿ ನನ್ನ ಜಾತಿ, ನಮ್ಮ ಜನ, ಇವರು ಹೊರಗಡೆಯವರು, ಇವರು ಒಳಗಡೆಯವರು ಎನ್ನುವ ತಾರತಮ್ಯ ಇರದಾರದು. ಸ್ವಾಮಿ, ನಾನು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ನಮ್ಮ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ವ್ಯತ್ಯಾಸವಿದೆ. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರೆ, ಇವೊತ್ತು ಪುನರ್‌ಮೌಲ್ಯ ಮಾಪನ ಮಾಡುವುದಕ್ಕೆ ಅಥವಾ ಅಂಕಗಳನ್ನು ಎಣಿಕೆ ಮಾಡುವುದಕ್ಕೆ ನಮ್ಮ ಹುಡುಗರು ಸ್ಟ್ರೈಕ್ ಮಾಡುತ್ತಿದ್ದಾರೆ.

ಶ್ರೀ ಪಿ. ರಾಮಚಂದ್ರರಾವ್.—ತೀರಾ ಅನ್ಯಾಯದಿಂದ ಮೌಲ್ಯಮಾಪನವನ್ನು ಮಾಡಿದರೆ ಏನು ಮಾಡುವುದು ?

ಶ್ರೀ ಬಿ. ರಾಚಯ್ಯ.—ತೀರಾ ಅನ್ಯಾಯವಾಗಿ ಮೌಲ್ಯಮಾಪನ ಮಾಡಿದ ಒಂದೆರಡು ಉದಾಹರಣೆಗಳು ನನ್ನ ಗಮನಕ್ಕೆ ಬಂದಿವೆ. ಅದಕ್ಕೋಸ್ಕರ ನಾವು ಹೊರಗಡೆಯಿಂದ ಇಬ್ಬರು ತಜ್ಞರನ್ನು ಕರೆಯಿಸಿ ಅವರ ಮೂಲಕ ಪುನರ್‌ಮೌಲ್ಯಮಾಪನ ಮಾಡಿಸುತ್ತೇವೆ. ಅಲ್ಲಿ ಮೌಲ್ಯಮಾಪನ ಮಾಡಿದವರು ತಪ್ಪಿತಸ್ಥರು ಎಂದು ಕಂಡುಬಂದರೆ ಅವರನ್ನು ಪರೀಕ್ಷೆಯಿಂದ ತೆಗೆಯುವುದಲ್ಲದೆ ಅವರ ಬಗ್ಗೆ ತೀವ್ರವಾದಂಥ ಕ್ರಮ ತೆಗೆದುಕೊಳ್ಳುತ್ತೇವೆ. ಈ ರೀತಿ ಈ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಪ್ರತಿಭೆಗೆ ಕುಂದುಂಟುಮಾಡುವಂಥವರು ಯಾರು ಇದ್ದಾರೆ, ಅವರಿಗೆ ಪೋಷಣೆ ಸಿಗುತ್ತದೆಂದು ಭಾವಿಸಬೇಡಿ. ಆದರೆ ಇದನ್ನು ತಿಳಿದುಕೊಂಡೂ ಗಲಾಟೆ ಮಾಡಿದರೆ ಹೇಗೆ ? ಮೊನ್ನೆ ಸೆಂಟ್ರಲ್ ಕಾಲೇಜಿನಲ್ಲಿ ಶಿಕ್ಷಣ ತಜ್ಞರು, ವಿಶ್ವವಿದ್ಯಾಲಯದ ಉಪಕುಲಪತಿಗಳು ಈ ವಿದ್ಯಾ ಮಸೂದೆಯ ಮೇಲೆ ಚರ್ಚೆ ಮಾಡತಕ್ಕ ಕಾಲದಲ್ಲಿ ಒಬ್ಬ ನನಗೆ 12 ಪರ್ಸೆಂಟ್ ಮಾರ್ಕ್ಸ್ ಬಂದಿದೆ. ಇದನ್ನು ತಕ್ಷಣವೇ ಮಾಡಿಸಿಕೊಡಬೇಕೆಂದು ಒಂದು ಗುಂಪು ಕಟ್ಟಿಕೊಂಡು ಬಂದು ಕೇಳುವುದು ಸರಿಯೇ? ಅದಕ್ಕೆ ಕಾಲಮಿತಿ ಇಟ್ಟು ಪರಿಶೀಲಿಸಬೇಕೇ ವಿನಹ ಈ ಹೀತಿ ಮಾಡುವುದು ಸರಿಯಲ್ಲ. ಇವೊತ್ತಿನ ದಿವಸ ನಮ್ಮ ಮನೆಯ ಹತ್ತಿರ ಬರುತ್ತಿದ್ದಾರೆ ಸ್ವಾಮಿ.

ಇನ್ನು ಶಿಕ್ಷಕರಿಗೆ ಸಂಬಂಧಿಸಿದ ವಿಚಾರ.—ಇವೊತ್ತು, ಶಿಕ್ಷಕರ ದಿನಾಚರಣೆ, ರಾಧಾಕೃಷ್ಣನ್‌ರವರ ಹುಟ್ಟು ಹಬ್ಬದ ದಿನಾಚರಣೆ ಮಾಡುತ್ತಿದ್ದೇವೆ. ಆದರೆ ಇವರ ಆದರ್ಶಗಳ ಬಗ್ಗೆ ನಾವು ಯಾವ ರೀತಿ ನಡೆದುಕೊಳ್ಳುತ್ತಿದ್ದೇವೆ ಎಂಬುದನ್ನು ಯಾರೂ ಅರಿತುಕೊಂಡಿಲ್ಲ. ನನ್ನ ಮನೆಯ ಹತ್ತಿರ, ಮುಖ್ಯಮಂತ್ರಿಯವರ ಮನೆಯ ಹತ್ತಿರ ಮುತ್ತಿಗೆ ಹಾಕುವುದು, ಅದರಲ್ಲಿಯೂ ಈ ಮುತ್ತಿಗೆ ನಾಗರೀಕರು, ವಿದ್ಯಾವಂತರು, ಶಿಕ್ಷಕರು ಎಲ್ಲಾ ತಮ್ಮ ಬೇಡಿಕೆಯನ್ನು ಮುಂದಿಟ್ಟು ಅದನ್ನು ತಕ್ಷಣ ಈಡೇರಿಸಬೇಕೆಂದು ಕೇಳುತ್ತಿದ್ದಾರೆ. ಇದು ಬಲವಂತದಿಂದ ಮಾಡತಕ್ಕ ತೀರ್ಮಾನವಲ್ಲ; ಎಲ್ಲಾ ವಿಚಾರಗಳನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ಪ್ರವೃತ್ತಿ ಕಡಿಮೆಯಾಗಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ವರ್ಗಾವಣೆ ವಿಚಾರ.—ಒಬ್ಬ ಉಪಾಧ್ಯಾಯರನ್ನು 83ರವರೆಗೂ ಒಂದು ಕಡೆಯೇ ಇರುವಂಥವರನ್ನು ಇನ್ನೊಂದು ಕಡೆಗೆ ವರ್ಗ ಮಾಡಿದರೆ ಅದಕ್ಕೂ ಸತ್ಯಾಗ್ರಹ ಮಾಡುತ್ತಾರೆ. 5 ವರ್ಷವಾದ ಮೇಲೆ ಅವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕೆಂದು ನಿಯಮವಿದೆ. ಒಂದು ಕಡೆ 10–15 ವರ್ಷದಿಂದ ಇದ್ದಂಥ ಉಪಾಧ್ಯಾಯರು ಏನೇನು ಮಾಡಿದ್ದಾರೆಂದು ಇಲ್ಲಿನ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವರು ಎಲ್ಲೇ ಇರಲಿ, ತಾಲ್ಲೂಕು ಆಫೀಸಿಗೆ ಹೋಗುತ್ತಾರೆ, ಸಬ್ ರಿಜಿಸ್ಟ್ರಾರ್ ಆಫೀಸಿಗೆ ಹೋಗುತ್ತಾರೆ, ಮತ್ತು ಶಾಲೆಯಲ್ಲಿ ಯಾರಾದರೂ ಒಬ್ಬರನ್ನು ಕೂರಿಸಿ ಎಲ್ಲಾದರೂ ಇತರ ಕೆಲಸಗಳಿಗೆ ಹೋಗುತ್ತಾರೆ; ಮತ್ತು ರಾಜಕಾರಣ ಮಾಡಿಸುತ್ತಾರೆಂದು ಹೇಳಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಒಬ್ಬ ಉಪಾಧ್ಯಾಯರನ್ನು ಒಂದು ಹೊಸ ಕಾಲೇಜಿಗೆ ಪ್ರಿನ್ಸಿಪಾಲರಾಗಿ ವರ್ಗ ಮಾಡಿದರೆ ಅದರ ಹಿಂದಿನ ಉದ್ದೇಶ ಆ ಹೊಸ ಕಾಲೇಜಿಗೆ ಹೊಸ ಚೈತನ್ಯ ಬರಲಿ ಎನ್ನುವ ದೃಷ್ಟಿ ಮಾತ್ರವೇ ಹೊರತು ಬೇರೆ ಏನೂ ಅಲ್ಲ. ಇನ್ನು ಅವರು ಕೊಟ್ಟಿರತಕ್ಕ ಅರ್ಜಿಗಳಿಗೂ ಅಥವಾ ಸಂಕಷ್ಟಗಳ ಬಗೆಗೂ ಹೇಳಿಕೊಳ್ಳತಕ್ಕದ್ದು ಅವರ ಕರ್ತವ್ಯ, ಕೇಳತಕ್ಕದ್ದು ನಮ್ಮ ಧರ್ಮ. ಈ ದೃಷ್ಟಿಯಿಂದಲೇ ನಾನು ಈ ಕೆಲಸವನ್ನು ಮಾಡಿಕೊಂಡು ಬಂದಿದ್ದೇನೆಯೇ ವಿನಹ ಬೇರೆ ರೀತಿಯಲ್ಲ. ಇವೊತ್ತು ಈ ಸ್ಟ್ರೈಕ್‌ಗಳನ್ನು ಮಾಡಿಸುವುದು ಪ್ರಾಧ್ಯಾಪಕರುಗಳು ಮಕ್ಕಳನ್ನು ಎತ್ತಿಕಟ್ಟಿ ಮಾಡುವಂತಹ ಕೆಲಸಗಳು ಏನಾಗಿದೆಯೆಂದರೆ ಚಿತ್ರ ತಯಾರಿಕೆಯಲ್ಲಿ ಒಂದು ರೀತಿಯ ಸ್ಟಂಟ್ ಮಾಡುವ ರೀತಿಯಲ್ಲಿ ಆಗಿದೆ. ಇಂತಹ ಹೊಡೆದಾಟ, ಇಂತಹ ವಾತಾವರಣ ಬೇಡಿ, ಇಂತಹ ವಾತಾವರಣ ತಿಳಿಮಾಡುವುದಕ್ಕೆ ಈ ಪಕ್ಷವಾಗಲೀ, ಆ ಪಕ್ಷವಾಗಲೀ ಸರ್ವ ಪ್ರಯತ್ನವನ್ನೂ ಮಾಡಬೇಕು. ವಿದ್ಯಾರ್ಥಿ ಚುನಾವಣೆಯಲ್ಲಿ ಆಗತಕ್ಕಂಥ ಘರ್ಷಣೆಗಳು, ಅಲ್ಲಿ ಪ್ರದರ್ಶನ ಮಾಡತಕ್ಕ ಚಾಕು, ಚೂರಿಗಳು ಇವನ್ನೆಲ್ಲಾ ಮಿಕ್ಕ ವಿದ್ಯಾರ್ಥಿಗಳು ನೋಡಿ ತಮ್ಮ ರೂಪು

ಗಳನ್ನು ಖಾಲಿ ಮಾಡಿಕೊಂಡು ಊರಿಗೆ ಹೋಗುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಾಗೂ ಇತರ ಅನೇಕ ಕಾಲೇಜುಗಳಲ್ಲಿ ನಡೆಯುತ್ತಿರತಕ್ಕಂಥ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆ. ಕೇವಲ ಒಬ್ಬ ಉಪಕುಲಪತಿಗಳನ್ನು ಬದಲಾವಣೆ ಮಾಡಿದರೆ ಇದು ಸರಿಹೋಗುವಂತಹ ವಿಚಾರವಲ್ಲ. ಅಲ್ಲಿರತಕ್ಕವರು ಯಾರನ್ನು ತಜ್ಞರು, ಮೇಧಾವಿಗಳು ಎಂದು, ಇಂಥವರನ್ನೇ ಮಾಡಬೇಕೆಂದು ಹೇಳುತ್ತಾರೆಯೋ ಅಂಥ ವರನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಇಂತಹ ಮೇಧಾವಿಗಳನ್ನು ಕೂರಿಸಿದಾಗ ಕೆಳಗಡೆ ಇರತಕ್ಕಂಥ ಉಪಾಧ್ಯಾಯರು ಮತ್ತು ಹುಡುಗರು ಗೌರವದಿಂದ ನಡೆದರೆ ಪಾಠ ಪ್ರವಚನಗಳು ಸರಿಯಾದ ರೀತಿಯಲ್ಲಿ ನಡೆಸತಕ್ಕ ವಾತಾವರಣ ಉಂಟಾಗುತ್ತದೆ. ಇಲ್ಲದೇ ಹೋದರೆ ಆ ಉಪಾಧ್ಯಾಯರು ಅದೇ ಮಕ್ಕಳ ಮೇಲೆ ತಿರುಗಿ ಬೀಳುವಂತಹ ಕಾಲ ಬರುತ್ತದೆ. ಮತ್ತು ಹರಿಜನ ಮಕ್ಕಳಲ್ಲಿ ಯಾರು ಪ್ರಥಮ, ದ್ವಿತೀಯ ರ್‍ಯಾಂಕ್ ಬಂದಿರುತ್ತಾರೋ ಅವರಿಗೆ ನೇರವಾಗಿ ಸರ್ಕಾರದ ಹುದ್ದೆ ಕೊಡುತ್ತೇವೆಂದು ಮುಖ್ಯಮಂತ್ರಿಯವರು ಹೇಳಿದರು. ಪಬ್ಲಿಕ್ ಸರ್ವಿಸ್ ಕಮೀಷನ್‌ನಿಂದ ಆಗಲಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದಾಗಲಿ, ಶಿಫಾರಸು ಇದಕ್ಕೆ ಬೇಕಾಗಿಲ್ಲ. ಅವರ ಪ್ರತಿಭೆ ಏನಿದೆ ಅದರ ಮೇಲೆ ನೇರವಾಗಿ ನೇಮಕ ಮಾಡುವುದು. ಇದು ಹೊಸದಾಗಿ ಅವರಿಗೆ ಹುಮ್ಮಸ್ಸನ್ನು ಮತ್ತು ಉತ್ತೇಜನವನ್ನು ಕೊಡುವುದಕ್ಕೆ ನಮ್ಮ ಸರ್ಕಾರ ಮಾಡಿದಂಥ ಒಂದು ಸ್ಕೀಮ್ (ಯೋಜನೆ), ಇದರಿಂದ ಅವರು ವಿದ್ಯಾವಂತರು, ಬುದ್ಧಿವಂತರುಗಳಾಗಿ ಅನೇಕ ಇಲಾಖೆಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಅಥವಾ ಅನುಕೂಲ ಕಲ್ಪಿಸಿದ ಹಾಗೆ ಆಗುತ್ತದೆ. ಅದರಿಂದ 81 ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದೇ ರೀತಿ ಬ್ಯಾಕ್‌ವರ್ಡ್ ಸೆಕ್ಷನ್‌ರವರಿಗೂ ಅವಕಾಶವಿದೆ. ಅವರನ್ನು ಬೇರೆ ಮಕ್ಕಳ ಜೊತೆಗೆ ಪ್ರತಿಭೆಯಲ್ಲಿ ಹೋಲಿಸಿದರೆ ಅವರು ಸರಿ ಬರಲಾರರು. ಆದ್ದರಿಂದ ಅವರಿಗೆ ಒಂದು ಪ್ರತ್ಯೇಕವಾದ ನೇಮಕಾತಿಯನ್ನು ಮಾಡಿದ್ದೇವೆ. ಇದನ್ನು ಮುಖ್ಯ ಮಂತ್ರಿಯವರು ಒಪ್ಪಿ ಕೊಂಡಿದ್ದಾರೆ. ಈ ದೃಷ್ಟಿಯಿಂದ ಹರಿಜನ ಗಿರಿಜನರಿಗೆ ಹಿಂದಿನ ವರ್ಷಕ್ಕಿಂತ ಈ ವರ್ಷ ಅನ್ಯಾಯವಾಗಿದೆ ಯೆಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಆದರಿಂದ ಎಲ್ಲರೂ ತೃಪ್ತಿ ಪಡೆಯುತ್ತಾರೆಂದು ನಾನು ಭಾವಿಸಿದ್ದೇನೆ. ಹಾಗೆಯೇ ವಿದ್ಯಾರ್ಥಿ ವೇತನದ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟ ಹಾಗೆ ಗ್ರಾಂಟ್ ಇನ್ ಏಡ್‌ನ್ನು 50 ರಿಂದ 75ಕ್ಕೆ, 75 ರಿಂದ 100ಕ್ಕೆ ಏರಿಸಿರುವುದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೀರಿ. ಆದುದರಿಂದ ಹರಿಜನ ಗಿರಿಜನರಿಗೆ ಎಲ್ಲಾ ಕಡೆಗಳಲ್ಲೂ ಪ್ರೋತ್ಸಾಹ ಸಿಗುತ್ತಿಲ್ಲವೆಂದು ಮಾನ್ಯ ಖಾರ್ಗೆಯವರು ಪ್ರಸ್ತಾಪ ಮಾಡಿ ಹೇಳಿದ ಮಾತಿಗೆ ಉತ್ತರದ ರೂಪವಾಗಿ ಇದನ್ನು ಹೇಳುತ್ತಿದ್ದೇನೆ.

ಇನ್ನು ನಮ್ಮ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಹಾಗೆ.—ಕಲ್ಬುರ್ಗಿ, ಮಂಗಳೂರು ವಿಶ್ವ ವಿದ್ಯಾನಿಲಯಗಳಿಗೆ ಇನ್ನೂ ಯು.ಜಿ.ಸಿ.ಯವರ ಅನುಮತಿ ಸಿಕ್ಕಿಲ್ಲ. ಬಹುಶಃ ಇಷ್ಟು ಹೊತ್ತಿಗೆ ಅವರ ಸರ್ಕಾರ ಇದ್ದಿದ್ದರೆ ಕೊಟ್ಟು ಬಿಡುತ್ತಿದ್ದರೋ ಏನೋ ಎಂದೆನಿಸಿಬಿಟ್ಟಿದೆ. ನ್ಯಾಯವಾಗಿ ನಾವು ಏನು ಖರ್ಚು ಮಾಡಬೇಕೋ ಅದನ್ನು ಮಾಡಿದ್ದೇವೆ. ಸಮಿತಿಯನ್ನು ಕಳಿಸಿಕೊಡುತ್ತೇವೆ ಎಂದು ಯು.ಜಿ.ಸಿ.ಯವರು ಹೇಳಿದ್ದಾರೆ. ಆದರೆ, ಅವರು ಇನ್ನೂ ಬಂದಿಲ್ಲ—

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೋದ ಸಲ ಎಷ್ಟು ಹಣ ಖರ್ಚಾಗಿತ್ತು. ಇವತ್ತು ಎಷ್ಟು ಹಣ ಕೊಟ್ಟಿದ್ದೀರಿ. ಅದನ್ನು ಮೊದಲು ತಾವು ಹೇಳಬೇಕು. ಗುಲ್ಬರ್ಗ ಯೂನಿವರ್ಸಿಟಿಗೆ ಎಷ್ಟು ಹಣ ಒದಗಿಸಿದ್ದೀರಿ ? ವೈಸ್ ಚಾನ್ಸಲರ್ ಎಷ್ಟು ಹಣ ಕೇಳಿದ್ದರು ? ನೀವು ಎಷ್ಟು ಕೊಟ್ಟಿದ್ದೀರಿ ? ಅದು ಬಿಟ್ಟು ಇದು ಮಾಡಿದ್ದೇವೆ, ಅದು ಮಾಡಿದ್ದೇವೆ ಎಂದುಬಿಟ್ಟರೆ ಹೇಗೆ ? ಫ್ಯಾಕ್ಟ್ ಅಂಡ್ ಫಿಗರ್ಸ್ ತಾವು ಕೊಡಬೇಕು.

ಶ್ರೀ ಬಿ. ರಾಚಯ್ಯ.—ಅವರು ಒಂದೇ ಸಲಕ್ಕೆ ಹಣ ಕೊಡಬೇಕೆಂದು ಕೇಳುತ್ತಿದ್ದಾರೆ. ನಾವು ಮೂರು ಸಾರಿ ಕೊಟ್ಟಿದ್ದೇವೆ. ಮೂರು ಮೂರು ತಿಂಗಳಿಗೊಮ್ಮೆ, ಬೇರೆ ಬೇರೆ ಇಲಾಖೆಗಳಿಗೆ ಹಣ ಹೇಗೆ ವಿಲೇವಾರಿ ಮಾಡುತ್ತಿದ್ದೇವೋ ಹಾಗೆ ಅವರಿಗೂ ಕೊಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಅವರ ಇಲಾಖೆಯ ಬೇಡಿಕೆ ಮೇಲೆ ಮಾನ್ಯ ಸಚಿವರು ಮಾತ ನಾಡುವಾಗ, ವಿಶ್ವವಿದ್ಯಾನಿಲಯದವರ ಬೇಡಿಕೆ ಏನಿದೆಯೆಂದು ಅವರು ಹೇಳಬೇಕು. ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹಣವನ್ನು ಇಟ್ಟಿರಬೇಕಲ್ಲವೇ ?

ಶ್ರೀ ಬಿ. ರಾಚಯ್ಯ.—ಇದನ್ನೆಲ್ಲಾ ಹೇಳುತ್ತಾ ಕೂತುಬಿಟ್ಟರೆ ಇನ್ನೂ ಒಂದು ಗಂಟೆ ಬೇಕಾಗುತ್ತದೆ.

ಡಾ|| ವಿ. ಎಸ್. ಆಚಾರ್ಯ.—ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವಾಗ, ಮಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಕೂಡ ಹೇಳಬೇಕು.

ಶ್ರೀ ಬಿ. ರಾಚಯ್ಯ.—ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಲ್ಬುರ್ಗಿ ಯೂನಿ ವರ್ಸಿಟಿ ಮತ್ತು ಮಂಗಳೂರು ಯೂನಿವರ್ಸಿಟಿಗಳನ್ನು ನಡೆಸಲು ಬಡ್ಜೆಟ್ಟಿನಲ್ಲಿ ಏನು ಒಪ್ಪಿಕೊಂಡಿದ್ದೇವೆ ಅದಕ್ಕಿಂತ ಕಡಿಮೆ ಇಲ್ಲದ ರೀತಿಯಲ್ಲಿ ಹೆಚ್ಚಿಗೆ ಕೊಡಲು ಏರ್ಪಾಡು ಮಾಡಿದ್ದೇವೆ. ಎಲ್ಲದಕ್ಕೂ ಅಂಕಿಅಂಶಗಳು ಬೇಕು ಎಂದರೆ ಸಮಯ ಸಾಕಾಗುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಲಕ್ಷ, ಸಾವಿರಗಳಲ್ಲಿ ನೀವು ಹೇಳುವುದು ಬೇಡ. ಕೋಟಿಗಳಲ್ಲಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಬಜೆಟ್ಟಿನಲ್ಲಿ ಯಾವಾಗಲೂ ಕಡಿಮೆ ಇರುತ್ತದೆ. ನಾನ್ ಪ್ಲಾನ್‌ನಲ್ಲಿ ಹೋದ ವರ್ಷ ಹೆಚ್ಚಿನ ಕೆಲಸಗಳು ಇದ್ದರೂ ಕೂಡ ಹೆಚ್ಚು ಕೊಡಲು ಪ್ರಯತ್ನ ಮಾಡಿದ್ದರು. ವೈಸ್–ಚಾನ್ಸಲರ್ ತಮ್ಮ ಹಿಂದೆ ಅಡ್ಡಾಡಿ ಕೇಳಿದ್ದಾರೆ. ಅವರು ಎಷ್ಟು ಕೇಳಿದ್ದರು ? ನೀವು ಎಷ್ಟು ಹಣ ಒದಗಿಸಿದ್ದೀರಿ ? ನೀವು ನಿರ್ದಿಷ್ಟವಾಗಿ ಹೇಳಿದರೆ ಖಂಡಿತವಾಗಿ ಹೋದ ಸಲದ ಸರ್ಕಾರಕ್ಕಿಂತಲೂ ಈ ಸರ್ಕಾರ ಹೆಚ್ಚು ಹಣ ಕೊಟ್ಟಿದೆ ಎಂದು ಒಪ್ಪಿಕೊಳ್ಳಬಹುದು. ಅದು ಬಿಟ್ಟು ಸರಾಸರಿಯಾಗಿ ಹೇಳಿಬಿಟ್ಟರೆ ಹೇಗೆ ?

ಶ್ರೀ ಬಿ. ರಾಚಯ್ಯ.—ಕಲ್ಬುರ್ಗಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಹುಡುಕುವುದಕ್ಕೆ ತೊಂದರೆಯಾಗುತ್ತದೆ. ಅವರಿಗೆ ಬೇಕಾಗಿರತಕ್ಕಂಥಾದ್ದು 150 ಲಕ್ಷ ರೂಪಾಯಿಗಳು. ನಾವು 65 ಲಕ್ಷ ಒದಗಿಸಿಕೊಟ್ಟಿದ್ದೇವೆ. ಇದನ್ನು ಕೊಟ್ಟಿರುವುದು ಮೂರು ಕಂತುಗಳಲ್ಲಿ. ವರ್ಷದಲ್ಲಿ ಆಗತಕ್ಕದ್ದನ್ನು ಈಗಲೇ ಕೇಳಬೇಡಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—65 ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದೀರಿ ಇವತ್ತಿನವರೆಗೂ ಕೊಟ್ಟಿಲ್ಲ ಏಕೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಂಕಿಅಂಶಗಳು ಸಿದ್ಧವಾಗಿವೆ. ಹೇಳಿದರೆ ನೀವು ಎಲ್ಲಿ ಹೆದರಿಬಿಡುತ್ತೀರೋ ಎಂದು ಹೇಳುತ್ತಿಲ್ಲ.

ಶ್ರೀ ಬಿ. ರಾಚಯ್ಯ.—65 ಲಕ್ಷ ರೂಪಾಯಿಗಳನ್ನು ಮೂರು ಕಂತುಗಳಲ್ಲಿ ಕೊಡುತ್ತಿದ್ದೇವೆ. ಇಷ್ಟು ಮಾತ್ರವಲ್ಲ, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕೂಡ ಮೂರು ಕಂತುಗಳಲ್ಲಿ ಹಣ ಒದಗಿಸಿದ್ದೇವೆ. ಬಹುಶಃ ಎಲ್ಲಾ ಇಲಾಖೆಗಳಲ್ಲಿ ಹಣದ ಕೊರತೆ ಇರುವಂತೆ ನಮ್ಮ ಇಲಾಖೆಯಲ್ಲೂ ಕೂಡ ಇದೆ. ನಾವು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಮತ್ತು ಹೈಸ್ಕೂಲುಗಳಿಗೆ ಹೆಚ್ಚು ಹಣ ಕೊಡಬೇಕು ಎನ್ನುವಾಗ ವಿಶ್ವವಿದ್ಯಾನಿಲಯದ ಕಡೆಗೆ ಸ್ವಲ್ಪ ಕೊರತೆ ಬರುತ್ತದೆ. ಇದನ್ನು ಕೇಂದ್ರ ಸರ್ಕಾರದವರು ಕೊಡಬೇಕಾಗಿರುವುದು ಅವರು ಕೊಟ್ಟರೆ ಉಳಿದ ಕೆಲಸ ಕಾರ್ಯಗಳಿಗೆ ಇಲ್ಲಿ ಅವಕಾಶ ಆಗುತ್ತದೆ. ಈಗಿರುವ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತಂದರೆ ಹಣ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಕಲ್ಬುರ್ಗಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ನಂದಿಹಳ್ಳಿಯಲ್ಲಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಏನು ಪೋಸ್ಟ್ ಗ್ರಾಜುಯೇಟ್ ಸೆಂಟರ್ ಇದೆ, ಅವುಗಳನ್ನು ನಡೆಸಲಿಕ್ಕೆ ಹಣವನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಇದೂ ಅಲ್ಲದೆ ಕೆಲವು ಪೀಠಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾಡಿದ್ದೇವೆ. ಇದಕ್ಕೆ ಬ್ಯಾಂಕುಗಳವರು ಮುಂದೆ ಬಂದಿದ್ದಾರೆ, ರೋಟರಿಯವರು ಮುಂದೆ ಬಂದಿದ್ದಾರೆ. ವಿಶ್ವವಿದ್ಯಾಲಯದ ಉಪಕುಲಪತಿಗಳು ಈ ದಿಸೆಯಲ್ಲಿ ಪ್ರಯತ್ನ ಮಾಡಿದ್ದಾರೆ. ಕಲ್ಬುರ್ಗಿ ಉಪಕುಲಪತಿಗಳೂ ಕೂಡ ಪ್ರಯತ್ನ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ನಿಧಾನವಾಗಿರುವುದರಿಂದ ಸ್ವಲ್ಪ ಹಣದ ಕೊರತೆ ಬಿದ್ದಿದೆ. ಮಾನ್ಯ ವಿರೋಧ ಪಕ್ಷದವರು ಕೂಡ ತಮ್ಮ ಪ್ರಭಾವ ಉಪಯೋಗಿಸಿ ಸಹಕಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಉಪಕುಲಪತಿಗಳು ಮತ್ತು ಸಿಂಡಿಕೇಟ್ ಸದಸ್ಯರು ಯು.ಜಿ.ಸಿ. ಯವರನ್ನು ಭೇಟಿಯಾಗಿ ಬಂದಿದ್ದಾರೆ. ಯೂನಿವರ್ಸಿಟಿ ಆ್ಯಕ್ಟ್‌ನಲ್ಲಿ ಬದಲಾವಣೆ ಮಾಡಿದರೆ ತಕ್ಷಣ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಈ ತಿದ್ದುಪಡಿಯನ್ನು ಯಾವಾಗ ತರುತ್ತೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ಥಳೀಯ ಶಾಲೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದರಲ್ಲಿ ಸರ್ಕಾರ ವಿಫಲವಾಗಿದೆ. ಖಾಸಗೀ ಶಾಲೆಗಳಲ್ಲಿ ಕೆಲಸಕ್ಕೆ ತೆಗೆದುಕೊಂಡವರನ್ನು ಕೆಲವು ದಿವಸಗಳ ಕಾಲ ಕೆಲಸ ಮಾಡಿದ ಹಾಗೆ ಮಾಡಿಸಿಕೊಂಡು ನಂತರ ಮನೆಗೆ ಕಳಿಸಿಬಿಡುತ್ತಾರೆ. ಚಕ್ಕುಗಳ ಮೇಲೆ ಬಲವಂತವಾಗಿ ಸಹಿ ಮಾಡಿಸಿಕೊಳ್ಳುತ್ತಾರೆ. ಅವರಿಗೆ ಬರುವುದು ಕೇವಲ 150–200 ರೂಪಾಯಿಗಳ ಪಗಾರ ಮಾತ್ರ. ಖಾಸಗೀ ಶಾಲೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಆಶ್ವಾಸನೆ ಕೊಡುತ್ತೀರಾ ? ಎರಡನೆಯದು ಸಂಸ್ಕೃತ ಪರೀಕ್ಷೆ ವರದಿ ಬಗ್ಗೆ, ಮಾರ್ಕ್ಸ್ ಕಾರ್ಡ್ ಬಗ್ಗೆ ತಾವು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಸಂಸ್ಕೃತ ಪರೀಕ್ಷೆಯ ಬಗ್ಗೆ ಅಂಕಿಅಂಶಗಳನ್ನು ಒದಗಿಸಿದ್ದೇನೆ. ಇದರ ಬಗ್ಗೆ ಶೀಘ್ರವಾಗಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು. ಇನ್ನು ಖಾಸಗೀ ಶಾಲೆಗಳನ್ನು ಹೆಚ್ಚು ಮಾಡಿದ್ದೀರಿ. ಅವುಗಳನ್ನು ನಿಯಂತ್ರಣಕ್ಕೆ ತರುವುದಕ್ಕೆ ಏನು ಮಾಡಿದ್ದೀರಿ ಎಂದು ಕೇಳಿದ್ದೀರಿ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದಿದೆ. ಯಾರು ಯಾರು ಖಾಸಗೀ ಶಾಲೆಗಳ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಉಪಾಧ್ಯಾಯರಿಗೆ ಸಂಬಳ ಕೊಟ್ಟು ಮೊದಲೇ ಚೆಕ್ಕನ್ನು ತೆಗೆದುಕೊಂಡುಬಿಟ್ಟಿರುತ್ತಾರೆ; ಇವುಗಳ ಬಗ್ಗೆ ಪ್ರತಿನಿತ್ಯವೂ ಶಿಕ್ಷಕರು ಬಂದು ಹೇಳುತ್ತಿದ್ದಾರೆ. ಇವುಗಳನ್ನು ಸರಿಪಡಿಸುವುದಕ್ಕೋಸ್ಕರ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ದೇವೇಗೌಡ ಕಮಿಟಿ ಶಿಫಾರಸ್ಸಿನ ಪ್ರಕಾರ ಖಾಸಗೀ ಶಾಲೆಗಳನ್ನು ನೀವೇ ತೆಗೆದುಕೊಳ್ಳಬೇಕೆಂದು ಇದೆ. ಇದನ್ನು ಮಾಡಲು ಏಕೆ ಹಿಂಜರಿಯುತ್ತಿದ್ದೀರಿ ?

ಶ್ರೀ ಬಿ. ರಾಚಯ್ಯ.— ನಾನು ಹಿಂಜರಿಯುತ್ತಿಲ್ಲ. ವಯಸ್ಸಾಗಿದೆ. ಅದಕ್ಕೆ ಸ್ವಲ್ಪ ನಿಧಾನ ಅಷ್ಟೆ. ನನಗೆ ಈಗ ಅರವತ್ತೊಂದು ವರ್ಷ. ನಾನು ಹುಟ್ಟಿದ್ದು 10–8–1922ನೇ ಇಸವಿಯಲ್ಲಿ. ಒಟ್ಟಿನಲ್ಲಿ ವಯಸ್ಸು ಮುಖ್ಯ ಅಲ್ಲ. ಮನಸ್ಸಿನಲ್ಲಿ ಇರತಕ್ಕ ಉತ್ಸಾಹ, ಕೆಲಸ ಕಾರ್ಯಗಳನ್ನು ಮಾಡಲು ಶ್ರದ್ಧೆ ಆಸಕ್ತಿ ಮುಖ್ಯ. ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ ಅನೇಕ ಖಾಸಗೀ ಶಾಲಾಕಾಲೇಜುಗಳಿವೆ. ಸರ್ಕಾರವೂ ಕೆಲವು ಶಾಲೆಗಳನ್ನು ನಡೆಸಿಕೊಂಡು ಬಂದಿದೆ. ಅದೇ ರೀತಿ ಕೆಲವು ಒಳ್ಳೆಯ ಶಾಲೆಗಳನ್ನು ಖಾಸಗಿಯವರೂ ನಡೆಸಿಕೊಂಡು ಬರುತ್ತಿದ್ದಾರೆ. ಇಂತಹವರಿಗೂ ಅಪಮಾನವಾಗುವ ರೀತಿಯಲ್ಲಿ ನಾವು ನಡೆದುಕೊಳ್ಳ ಬಾರದು, ಅವರೂ ನಡೆದುಕೊಳ್ಳಬಾರದು. ಮತ್ತೆ ಕೆಲವರು ಹಣಕ್ಕೋಸ್ಕರ ಶಾಲೆಗಳನ್ನು ನಡೆಸತಕ್ಕಂಥ ವರೂ ಇದ್ದಾರೆ. ಸರ್ಕಾರದ ಶಾಲೆಗಳಲ್ಲೂ ಸೊನ್ನೆಯಿಂದ 20 ಪರ್ಸೆಂಟ್‌ವರೆಗೆ ಪಾಸಾಗುವವರು ಇದ್ದಾರೆ. ಅದೇ ರೀತಿ ಖಾಸಗೀ ಶಾಲೆಗಳಲ್ಲೂ ಸೊನ್ನೆಯಿಂದ 20 ಪರ್ಸೆಂಟ್‌ವರೆಗೆ ಪಾಸ್ ಆಗುವವರೂ ಇದ್ದಾರೆ. ಇವರೆಡೂ ಸೇರಿವೆ. ಆದ್ದರಿಂದ ಇದನ್ನು ಇಂಪ್ರೂವ್ ಮಾಡುವುದಕ್ಕೋಸ್ಕರ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕು ಅಂದರೆ ಖಾಸಗೀ ಶಾಲೆಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶವಾಗುತ್ತದೆ. ಯಾವ ಯಾವ ಶಾಲಾ ಕಾಲೇಜುಗಳಲ್ಲಿ ಅಕ್ರಮ ನಡೆಯುತ್ತಿದ್ದರೆ ಅಂತಹವನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಈಗಿನ ಕಾನೂನಿನಲ್ಲಿ ರಕ್ಷಣೆ ಇಲ್ಲ. ನಾವು ಅದಕ್ಕೋಸ್ಕರವೇ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಅಂತಹ ಸಂದರ್ಭ ಬಂದಾಗ ಅದನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆ ಒಂದು ಸಮಗ್ರ ಶಿಕ್ಷಣ ಮಸೂದೆ ತಮ್ಮ ಮುಂದೆ ಬರುತ್ತದೆ, ಆಗ ತಮ್ಮ ಸಲಹೆಯನ್ನು ಕೊಡಿ. ಮತ್ತೆ ಒಂದೇ ಸಾರಿ ಎಲ್ಲವನ್ನೂ ತೆಗೆದು ಕೊಳ್ಳುತ್ತೇವೆಂದು ಹೇಳುವುದೂ ಕಷ್ಟವಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಮ್ಮ ಉಪಕುಲಪತಿಗಳು, ಅಧಿಕಾರಿಗಳು ಎಲ್ಲರೂ ದೆಹಲಿಗೆ ಹೋಗಿ ಮಾತನಾಡಿಕೊಂಡು ಬಂದಿದ್ದಾರೆ. ಯು.ಜಿ.ಸಿ.ಯವರು ಕೆಲವು ಗೈಡ್ ಲೈನ್ಸ್ ಹಾಕಿದ್ದಾರೆ. ಅವರು ನಿಮ್ಮ ಮೇಲೆ ಸ್ವಲ್ಪ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕಾಗಿ ಹಾಕಿದ್ದಾರೆ.

ಶ್ರೀ ಬಿ. ರಾಚಯ್ಯ.—ಪ್ಲಾನಿಂಗ್ ಬೋರ್ಡ್ ರೀತಿ ಮಾಡಬೇಕೆಂದು ಹೇಳಿದ್ದಾರೆ. ವಿಶ್ವವಿದ್ಯಾ ನಿಲಯವನ್ನು ಪಡೆಯಬೇಕೆಂಬ ಉದ್ದೇಶದಿಂದ ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದರಲ್ಲಿ ಅವರ ದುಡ್ಡೂ ಸೇರಿದೆ. ನಮ್ಮ ದುಡ್ಡೂ ಸೇರಿದೆ. ಎಲ್ಲರ ದುಡ್ಡೂ ಸೇರಿ ಈ ಕೆಲಸ ಆಗಬೇಕಾಗಿರುವುದರಿಂದ ಇದನ್ನು ನಿಮ್ಮ ಮುಂದೆ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಅನೇಕ ಕಡೆ ವಿಶ್ವವಿದ್ಯಾನಿಲಯ ಸ್ವಾಯತ್ತ ಸಂಸ್ಥೆಯಾಗಿರ ಬೇಕೆಂದು ಕೇಳುತ್ತಾರೆ. ಅವರಿಗೆ ಸ್ವಾಯತ್ತತೆ ಇರಬೇಕು. ಅದನ್ನು ಸರ್ಕಾರ ಕಿತ್ತುಕೊಳ್ಳುವುದು ಬೇಡ. ಆದರೆ ಸರ್ಕಾರದ ಹಿಡಿತ ಇಲ್ಲದಿದ್ದರೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರದ ಆದೇಶವನ್ನೇ ಅವರು ಪಾಲಿಸು ವುದಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ಅನೇಕ ಕಡೆ ಈ ರೀತಿ ತೊಂದರೆ ಕೊಡುತ್ತಿದ್ದಾರೆ. ಆಮೇಲೆ ನಮ್ಮ ಕೈಗೆ ಸಿಕ್ಕುವುದಿಲ್ಲ. ನಿಮ್ಮ ಉತ್ತರದಲ್ಲಿ ನಾವು ಹಿಡಿತವನ್ನು ಇಟ್ಟುಕೊಂಡಿದ್ದೇವೆ, ಸಂಪೂರ್ಣ ವಾಗಿ ರೂಲ್ಸ್‌ನ್ನು ರೆಗ್ಯುಲರೈಸ್ ಮಾಡುತ್ತಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದೀರಿ. ಒಂದು ವೇಳೆ ಸರ್ಕಾರದ ಹತೋಟಿ ಅವರ ಮೇಲೆ ಇಲ್ಲದಿದ್ದರೆ ನಾಳೆ ಅವರು ನಿಮ್ಮ ಮಾತುಗಳನ್ನು ಕೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಚಾಪೆಯೊಳಗೆ ತೂರುವುದಕ್ಕೆ ತಯಾರು ಮಾಡಿದರೆ, ಅವರು ರಂಗೋಲೆ ಕೆಳಗೆ ತೂರುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಿಮ್ಮ ಆಟ ಅವರ ಹತ್ತಿರ ಏನೂ ನಡೆಯು ವುದಿಲ್ಲ.

ಶ್ರೀ ಬಿ. ರಾಚಯ್ಯ.—ಸೂರತ್ಕಲ್‌ನಲ್ಲಿರತಕ್ಕಂತಹ ಇಂಜಿನಿಯರಿಂಗ್ ಕಾಲೇಜಿನ ವಿಚಾರದಲ್ಲಿ ಹೇಳುವುದಾದರೆ. ಅವರ ಪ್ರತಿನಿಧಿಗಳೂ ಇದ್ದಾರೆ. ನಮ್ಮ ಪ್ರತಿನಿಧಿಗಳೂ ಇದ್ದಾರೆ. ಅದು ಬಹಳ ಮಟ್ಟಿಗೆ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಅದನ್ನೇ ಆಧಾರವಾಗಿಟ್ಟುಕೊಂಡು ಪ್ಲಾನಿಂಗ್ ಬೋರ್ಡ್ ಎಂದು ಮಾಡಿದರೆ ಅವರ ಪ್ರತಿನಿಧಿಗಳೂ ಇರುತ್ತಾರೆ. ನಮ್ಮ ಪ್ರತಿನಿಧಿಗಳೂ ಅದರಲ್ಲಿ ಇರುತ್ತಾರೆ. ಒಂದೊಂದು ವಿಭಾಗಕ್ಕೊಂದು ವಿಶ್ವವಿದ್ಯಾನಿಲಯ ಆಗಬೇಕಾದರೂ ಅದು ಕೆಲವೇ ಜನರ ಸ್ವತ್ತು ಆಗಬಾರದು ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಎಲ್ಲಾ ವಿಭಾಗದ ಪ್ರತಿನಿಧಿಗಳನ್ನೂ ಸೆನೆಟ್ ಹಾಗೂ ಸಿಂಡಿಕೇಟ್‌ಗೆ ಕಳುಹಿಸ ತಕ್ಕಂತಹ ಕಾಲದಲ್ಲಿ ಯೋಚನೆ ಮಾಡಿ ಕಳುಹಿಸಿಕೊಡಿ. ಆಗ ಎಲ್ಲರಿಗೂ ಪ್ರಾತಿನಿಧ್ಯ ದೊರೆಯುತ್ತದೆ. ಅದನ್ನು ಮಾಡದೆ ಒಂದೇ ಗುಂಪಿನವರಿಗೆ ಮಾಡುವುದಾದರೆ ಮಾನ್ಯ ಸದಸ್ಯರು ಹೇಳುವಂತಹ ಪರಿಸ್ಥಿತಿ ಬರಬಹುದು.

ಇನ್ನೂ ಅನೇಕ ವಿಷಯಗಳಿಗೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗದೇ ಇರಬಹುದು. ಲೋಕ ಸಭೆಯಲ್ಲಿ ಏನು ಮಾಡುತ್ತಿದ್ದಾರೆಂದರೆ, ಮಂತ್ರಿಯಾಗಿರುವರು ಎಲ್ಲದಕ್ಕೂ ಉತ್ತರವನ್ನು ಕೊಡುವುದ ಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರುಗಳು ಏನು ಪ್ರಸ್ತಾಪ ಮಾಡಿದ್ದಾರೆ, ಅವರ ಪೂರ್ಣ ಭಾಷಣದ ನಕಲನ್ನು ಶಾಸಕಾಂಗ ಇಲಾಖೆಯಿಂದ ತರಿಸಿಕೊಂಡು, ಅದಕ್ಕೆ ಸಮಂಜಸವಾದ ರೀತಿಯಲ್ಲಿ ಕಾರ್ಯಕ್ರಮ ಗಳನ್ನು ತೆಗೆದುಕೊಂಡು, ಇಂತಿಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಪ್ರತಿಯೊಬ್ಬ ಮಾನ್ಯ

ಸದಸ್ಯರಿಗೆ ತಿಳಿಸತಕ್ಕಂತಹ ಪದ್ಧತಿ ಇದೆ. ಆ ಒಂದು ಪದ್ಧತಿಯನ್ನು ಇಲ್ಲೂ ಜಾರಿಗೆ ತಂದು ಎಲ್ಲಾ ಮಾನ್ಯ ಸದಸ್ಯರಿಗೆ ವಿಷಯವನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲಾ ಶಾಸಕರಿಗೂ ಕೂಡ ತೃಪ್ತಿಕರವಾದ ಉತ್ತರವನ್ನು ನಾನು ಕೊಡುವುದಕ್ಕೆ ಆಗದೇ ಇರಬಹುದು. ಆದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂತಹ ವಿಷಯಗಳ ಬಗ್ಗೆ ಗಮನ ಹರಿಸಿ, ಆ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಗ್ರಾಮಾಂತರ ಪ್ರದೇಶದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಮಂಜೂರು ಮಾಡಬೇಕಾದರೆ ಕನಿಷ್ಠ 300 ಜನಸಂಖ್ಯೆ ಇರಬೇಕೆಂದು ತಾವು ನಿಗದಿ ಮಾಡಿದ್ದೀರಿ. ಅನೇಕ ಹಳ್ಳಿಗಳಲ್ಲಿ 300 ಜನಸಂಖ್ಯೆಗಿಂತ ಕಡಿಮೆ ಇದ್ದರೂ 30 ಮಕ್ಕಳಿಗಿಂತ ಜಾಸ್ತಿ ಇರತಕ್ಕಂತಹ ಅನೇಕ ಹಳ್ಳಿಗಳಿವೆ. ಅಂತಹ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

(ಉಪಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಶ್ರೀ ಬಿ. ರಾಚಯ್ಯ.—ಅದರ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಸುಮಾರು 300 ಜನ ಸಂಖ್ಯೆ ಇರಬೇಕೆಂದು ಇರತಕ್ಕಂತಹ ನಿಯಮವನ್ನು ಸಡಿಲಗೊಳಿಸಿ 20 ರಿಂದ 30 ವಿದ್ಯಾರ್ಥಿಗಳು ಇರುವ ಕಡೆಯೂ ಪ್ರಾಥಮಿಕ ಶಾಲೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಹೊಸದಾಗಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸಲಹೆಯನ್ನು ತೆಗೆದುಕೊಂಡು, ಅಂದರೆ. ಅವರು ತಯಾರು ಮಾಡಿದಂತಹ ಮಾಡಲ್‌ನ್ನು ತೆಗೆದುಕೊಂಡು, ಆ ಮಾದರಿಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. 5 ಸಾವಿರಕ್ಕಿಂತ ಕಡಿಮೆ ವೆಚ್ಚದಲ್ಲಿ ಅಲ್ಲಿರತಕ್ಕಂತಹ ಕಚ್ಚಾ ಪದಾರ್ಥಗಳನ್ನೇ ಉಪಯೋಗಿಸಿಕೊಂಡು ಶಾಲಾ ಕಟ್ಟಡಗಳನ್ನು ಕಟ್ಟಬೇಕೆಂಬ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಆ ದೃಷ್ಟಿಯಿಂದ ಸ್ವಲ್ಪ ಮಟ್ಟಿಗೆ ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಕೇವಲ ಸಿಮೆಂಟನ್ನು ಉಪಯೋಗಿಸಿ, ಕಲ್ಲುಗಳನ್ನು ಉಪಯೋಗಿಸಿ ಕಟ್ಟತಕ್ಕಂತಹ ಕಟ್ಟಡಗಳು ಏನು ಇವೆ. ಅದರಿಂದ ಸರ್ಕಾರಕ್ಕೆ ಹೆಚ್ಚು ಹೊರೆಯಾಗುತ್ತದೆ. ಅದನ್ನು ಸರ್ಕಾರ ಹೊರುವುದಕ್ಕೆ ಸಧ್ಯದಲ್ಲಿ ಸಾಧ್ಯವಿಲ್ಲದಂತಾಗಿದೆ. ಆದ್ದರಿಂದ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಡಿಮೆ ವೆಚ್ಚದಿಂದ ಕಟ್ಟಿಸಿ ಮತ್ತು ಎಲ್ಲಾ ಕಡೆ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಈಗ ಶಾಲೆಗಳು ಹೆಚ್ಚು ಇವೆ. ಕಾಲೇಜುಗಳು ಹೆಚ್ಚು ಇವೆ. ಆದರೆ ಇನ್ಸ್‌ಪೆಕ್ಷನ್ ಕಡಿಮೆಯಾಗಿದೆ. ಅವರಿಗೆ ಕೊಡತಕ್ಕಂತಹ ಭತ್ಯದ ಕಡೆ ಗಮನ ಕೊಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದೊಂದನ್ನೂ ಹೆಚ್ಚಿಸಿಕೊಂಡು ಹೋದಾಗ ಅದೇ ಪ್ರಮಾಣದಲ್ಲಿ ನಾವು ಸ್ವಲ್ಪ ಹಣ ಕೊಡುವುದನ್ನು ಹೆಚ್ಚು ಮಾಡಬೇಕಾಗಿದೆ. ಆ ಕಡೆಯೂ ನಾವು ಗಮನಕೊಟ್ಟು ಪ್ರಯಾಣ ಭತ್ಯವನ್ನು ಏರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತೆ ಜಿಲ್ಲೆಗಳಲ್ಲಿರುವ ಅಧಿಕಾರಿಗಳಿಗೆ ಎಲ್ಲಿ ವಾಹನ ಸೌಕರ್ಯ ಇಲ್ಲ, ಅಲ್ಲಿ ವಾಹನ ಸೌಕರ್ಯವನ್ನು ಒದಗಿಸಿಕೊಡುವ ಕಡೆ ತಕ್ಷಣ ಗಮನ ಕೊಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಮೆಡಿಕಲ್ ಕಾಲೇಜಿನಲ್ಲಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೀಸಲಾತಿಯನ್ನು ಇಡಬೇಕೆಂದು ನಾನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬ ಬಗ್ಗೆ ತಮ್ಮ ಆಶ್ವಾಸನೆ ಏನು ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಸರ್ಕಾರದ ಸಹಾಯಧನವನ್ನು ಪಡೆದುಕೊಂಡು ಇರತಕ್ಕಂತಹ ಶಾಲೆಗಳು ಏನು ಇವೆ. ಅಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಕೊಡಬೇಕೆಂಬ ನಿಯಮ ಇದೆ. ಮಾನ್ಯ ಸದಸ್ಯರಾದ ಲಮಾಣಿಯವರು ಮಾತನಾಡುತ್ತಾ, ಬೆಳಗಾಂನಲ್ಲಿರುವ ಕೆ.ಎಲ್.ಇ. ಸೊಸೈಟಿಯಲ್ಲಿ ಇತರೇ ಕಾಲೇಜುಗಳಲ್ಲಿ ಮೀಸಲಾತಿಯನ್ನು ಕೊಟ್ಟಿಲ್ಲ ಎಂಬುದಾಗಿ ಹೇಳಿದರು. 1977ನೇ ಇಸವಿಯ ಸರ್ಕಾರಿ ಆಜ್ಞೆಯ ಪ್ರಕಾರ ಅಲ್ಲಿಂದ ಈಚೆಗೆ ಮೀಸಲಾತಿಯನ್ನು ಕೊಟ್ಟಿದ್ದಾರೆಂಬ ಭಗ್ಗೆ ಅವರಿಂದ ವರದಿ ಬಂದಿದೆ. ಒಂದು ವೇಳೆ ಅವರು ಮೀಸಲಾತಿಯನ್ನು ಕೊಡದಿದ್ದರೆ ಹಿಂದಿನದನ್ನೂ ಸೇರಿಸಿ ಮುಂದೆ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಹಿಂದಿನ ಕಾಲದಲ್ಲಿ ಅದಂತಹ ಶಾಲೆಗಳಲ್ಲಿ ಇರುವ ಖಾಲಿ ಜಾಗಗಳನ್ನು ಕ್ಯಾರಿ ಫಾರ್‌ವರ್ಡ್ ಮಾಡಿಕೊಂಡು ಸರ್ಕಾರದ ಆದೇಶದ ಪ್ರಕಾರ ಮೀಸಲಾತಿಯನ್ನು ಇಟ್ಟುಕೊಂಡು ಮುಂದೆ ಖಾಲಿಬಿದ್ದಂತಹ ಜಾಗಗಳನ್ನು ಭರ್ತಿಮಾಡುವಾಗ ಇವರಿಗೆ ಮೀಸಲಾತಿಯನ್ನು ಇಟ್ಟುಕೊಂಡು ಮಾಡಬೇಕೆಂದು ಆದೇಶವನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.—ನಾನು ಹೇಳತಕ್ಕಂತಹದ್ದು ಅಡ್ಮಿಷನ್‌ನಲ್ಲಿ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರೆಲ್ಲರೂ ವಿವರಣೆಯನ್ನು ಕೇಳಿದ್ದಾರೆ. ನನಗೂ ಒಂದು ಅವಕಾಶ ಬೇಕು. ನಾವು ಎಲ್ಲಾ ಅನುಕೂಲವನ್ನೂ ಉಪಾಧ್ಯಾಯರಿಗೆ ಕೊಡಬೇಕು. ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂತಹವರ ಬಗೆ ಎಲ್ಲಾ ಕೇಳಿ ಆಯಿತು. ಎಷ್ಟೋ ಜನ ಉಪಾಧ್ಯಾಯರುಗಳು ತಮ್ಮ ತಮ್ಮ

ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಲಕ್ಕೆ ಇಲಾಖೆಗೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಅಂತಹವರು 8–10 ವರ್ಷಗಳಾದರೂ ಅವರಿಗೆ ಒಂದು ಕಾಸೂ ಸಾಲ ಕೊಟ್ಟಿಲ್ಲ. ನೀವು ಆ ಕಡೆ. ಈ ಕಡೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಶ್ರೀ ಜೆ. ಹೆಚ್. ಪಟೇಲ್‌ರವರು ಹೇಳಬಹುದು. ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹೇಳಬಹುದು. ಆದರೆ ತಾವು ಆ ರೀತಿ ಹೇಳುವುದಕ್ಕಾಗುವುದಿಲ್ಲ. ನಿನ್ನೆ ಮೊನ್ನೆಯವರೆವಿಗೂ ನಾವೂ ನೀವೂ ಒಟ್ಟಿಗೆ ಇದ್ದವರು. ಆ ಕಡೆಯಿಂದ ಎಂದು ಹೇಳಬೇಡಿ. 7–8 ವರ್ಷಗಳಿಂದ ಅವರಿಗೆ ಒಂದು ಕಾಸೂ ಕೊಟ್ಟಿಲ್ಲ. ಅವರ ಬಗ್ಗೆ ತಾವು ಮುಂದೆ ಏನು ಮಾಡುವವರು ಇದ್ದೀರಿ ದಯಮಾಡಿ ಹೇಳಿ.

ಶ್ರೀ ಬಿ. ರಾಚಯ್ಯ.—ಆಕಡೆ ಈಕಡೆ ಎಂದು ನಾನು ಹೇಳಿಲ್ಲ. ಪ್ರತಿಯೊಬ್ಬ ಸರ್ಕಾರಿ ನೌಕರನೂ ತಾನು ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ ಕಡಿಮೆ ಬಡ್ಡಿಯಲ್ಲಿ ಸಾಲವನ್ನು ಕೊಡತಕ್ಕಂತಹ ಒಂದು ನೀತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಪ್ರತಿವರ್ಷ ಇದಕ್ಕಾಗಿ ಇಷ್ಟಿಷ್ಟು ಹಣ ಎಂದು ಗೊತ್ತು ಮಾಡಿರುತ್ತಾರೆ. ಆದರೆ ಅರ್ಜಿಯನ್ನು ಯಾರು ಮೊದಲು ಕೊಟ್ಟಿರುತ್ತಾರೋ ಅಂತಹವರಿಗೆ ಮೊದಲು ಸಾಲ ಸಿಕ್ಕುತ್ತದೆ. ಈ ರೀತಿಯ ಸಾಲವನ್ನು ಪ್ರಯಾರಿಟಿಯ ಮೇಲೆ ಬಂದಂತಹ ಅರ್ಜಿಗಳಿಗೆ ಮೊದಲು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕಂತಹ ಸರ್ಕಾರಿ ಇಲಾಖೆಯ ಉಪಾಧ್ಯಾಯರಿಗೆ ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇಗ ಹಣವನ್ನು ಮಂಜೂರು ಮಾಡಬೇಕೆಂದು ಮಾಡುತ್ತಿದ್ದೇವೆ. ಎರಡನೆಯದಾಗಿ, ಉಪಾಧ್ಯಾಯರುಗಳು ಪಟ್ಟಣಗಳಲ್ಲೇ ಬಂದು ಸೇರಿಕೊಳ್ಳುತ್ತಾರೆ. ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕಂತಹವರಿಗೆ ಇನ್‌ಸೆಂಟಿವ್ ಕೊಡಬೇಕೆಂದು ಅಂದರೆ ಮನೆ ಬಾಡಿಗೆ ವಿಷಯದಲ್ಲಿ, ಮನೆ ಕಟ್ಟಿಕೊಳ್ಳುವ ವಿಚಾರದಲ್ಲಿ ಆದ್ಯತೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಸ್ವಾಮಿ, ನಾನು ಮೊದಲೇ ಹೇಳಿದ ಹಾಗೆ ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಷಯಗಳನ್ನೂ ಕೂಡ ಗಮನ ಇಟ್ಟು ಕೇಳಿದ್ದೇನೆ. ನಮ್ಮ ಅಧಿಕಾರಿಗಳೂ ಕೂಡ ನೋಟ್ ತೆಗೆದುಕೊಂಡಿದ್ದಾರೆ. ನಾನು ಉತ್ತರ ಕೊಡುವಾಗ ಯಾವ ಯಾವ ವಿಷಯಗಳನ್ನು ಬಿಟ್ಟಿದ್ದೇನೋ ಆ ವಿಷಯಗಳಿಗೆಲ್ಲಾ ಗಮನಹರಿಸಿ ಅದರ ಮೇಲೆ ನಾವೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೂ. ವಿಶ್ವವಿದ್ಯಾನಿಲಯಗಳನ್ನೊಳಗೊಂಡಂತೆ ಆಗಬೇಕಾದ ಕೆಲಸಕಾರ್ಯಗಳ ಬಗ್ಗೆ ಅಲ್ಲಿಯ ನೌಕರರಿಗೆ ಅನುಕೂಲಗಳು ಸ್ವಲ್ಪಮಟ್ಟಿಗೆ ತಡವಾಗಿರತಕ್ಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದರಿಂದ ಈಗ ಒಂದೇ ಸಾರಿ ಅದನ್ನು ಸರಿಮಾಡಲು ಕಷ್ಟವಾಗಬಹುದು. ಈ ಇಲಾಖೆಯ ನೌಕರ ವರ್ಗದವರಿಗೆ ನ್ಯಾಯ ದೊರಕಬೇಕು ಎನ್ನುವ ದೃಷ್ಟಿಯಿಂದ ಅವರು ನ್ಯಾಯಾಲಯಕ್ಕೆ ಹತ್ತಿದ್ದಾರೆ. ಈ ಬಗ್ಗೆ ಅನೇಕ ವಿಷಯಗಳು ನಮಗೆ ಎದ್ದು ಕಾಣುತ್ತಾ ಇವೆ. ಟೆಕ್ನಿಕಲ್ ಕಾಲೇಜುಗಳಲ್ಲಿ ಇದ್ದಂಥಾ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯನ್ನು ನಾವು ಬಗೆಹರಿಸಿ ಅವರಿಗೆಲ್ಲಾ ಕೊಡಬೇಕಾದ ಬಡ್ತಿ ಕೊಟ್ಟಿದ್ದಾಗಿದೆ. ಮತ್ತು ವಿದ್ಯಾ ಇಲಾಖೆಯಲ್ಲಿ ಡಿ.ಪಿ.ಐ., ಡಿ.ಡಿ.ಪಿ.ಐ. ಅವರಿಗೆ ಕೊಡಬೇಕಾದ ಪ್ರಮೋಷನ್‌ಅನ್ನು ಕೊಟ್ಟಿದ್ದೇವೆ. ಇನ್ನು ಅವರ ಕೆಳಗೆ ಇರತಕ್ಕಂಥ ಎ.ಇ.ಓ. ಮತ್ತು ಇ.ಓ. ಅವರ ಸೀನಿಯಾರಿಟಿ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಬಿ. ಬಿ. ಶೆಟ್ಟಿರವರು ಅಥವಾ ಯಾರೋ ಹೇಳಿದರು 5 ಸಾವಿರ ರೂಪಾಯಿಗಳನ್ನು ಕೊಟ್ಟರೆ ಆರ್ಡರ್ ಕೊಡುತ್ತೇನೆಂದು. ಅವರು ಯಾರು ಎಂದು ನಾನು ಮಾನ್ಯ ಸದಸ್ಯರನ್ನು ಪ್ರತ್ಯೇಕವಾಗಿ ಕೇಳಿದ್ದಕ್ಕೆ ಅವರ ಹೆಸರು ಹೇಳಲಿಲ್ಲ. ಯಾರೇ ಆಗಲಿ ಹಣವನ್ನು ವಸೂಲ್ಮಾಡಿ ಆಮೇಲೆ ಸರ್ಕಾರೀ ಆರ್ಡರ್ ಕೊಟ್ಟಿರುವುದಾದರೆ ಅಂಥಾ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೆ ನಿಜವಾಗಿಯೂ ಅದರ ಬಗ್ಗೆ ಎನ್‌ಕ್ವೈರಿ ಮಾಡುವುದಲ್ಲದೆ ಅವರ ಮೇಲೆ ತೀವ್ರತರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್.—ಧಾರವಾಡದಲ್ಲಿ ಒಬ್ಬ ಎ.ಇ.ಓ. ಈ ರೀತಿ ಹಣ ವಸೂಲ್ಮಾಡಿದ್ದಕ್ಕೆ ಆ ಅಧಿಕಾರಿಯ ವಿರುದ್ಧ ಸರದಿ ಉಪವಾಸ ಸತ್ಯಾಗ್ರಹ ನಡೆಸಿದರು.

ಶ್ರೀ ಬಿ. ರಾಚಯ್ಯ.—ಅವರು ಯಾವುದಕ್ಕೆ ಸತ್ಯಾಗ್ರಹ ಹೂಡಿದರು ಎನ್ನುವುದನ್ನು ಸರಿಯಾಗಿ ತಿಳಿಯಬೇಕು. ಹಣ ಕೊಟ್ಟಿದ್ದಕ್ಕೋ ಅಥವಾ ಇನ್ನಾವ ಕಾರಣಕ್ಕೋ ಅದು ಸರಿಯಾಗಿ ನಮಗೆ ಗೊತ್ತಿಲ್ಲ. ಅದನ್ನು ಸರಿಯಾಗಿ ವಿಚಾರ ಮಾಡಿ ಹೇಳಿದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಏನೂ ತಿಳಿಯದೇ 'ಎತ್ತು ಈದಿದೆ ಎಂದರೆ ಕೊಟ್ಟಿಗೆಗೆ ಕಟ್ಟು' ಎಂಬ ಒಂದು ಗಾದೆ ಇದೆ, ಆ ರೀತಿಯಾಗಿ ಹೇಳಿದರೆ ಏನು ಮಾಡುವುದಕ್ಕಾಗುತ್ತದೆ. ಯಾರು ಈ ವರ್ಗದ ಜನರಿಗೆ ತೊಂದರೆ ಕೊಡುತ್ತಾರೋ, ನಿಜವಾಗಿಯೂ ಅವರು ಲಂಚಕೋರರು ಆಗಿದ್ದರೆ. ನಿಜವಾಗಿಯೂ ಅವರು ಅಕ್ರಮ ಸಂಭಾವನೆಯನ್ನು ತೆಗೆದುಕೊಳ್ಳುವುದರಲ್ಲಿ ತೊಡಗಿದ್ದರೆ ಅವರನ್ನು ವರ್ಗಮಾಡುವುದೇಕೆ ಅವರನ್ನು ಮನೆಗೆ ಕಳುಹಿಸುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸಂಪೂರ್ಣ ಉತ್ತರ ಕೊಡಲಿಕ್ಕೆ ಆಗದಿದ್ದರೂ ಕೂಡ ಸ್ವಲ್ಪಮಟ್ಟಿಗೆ ಹೇಳುತ್ತೇನೆ. ಈಗ ವಿಶ್ವವಿದ್ಯಾನಿಲಯಗಳಿಗೆ ಏನು ಸ್ವಾಯತ್ತತೆ ಇದೆ ಅದು ಈಗಲೂ ಇದೆ. ಆದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಖರ್ಚು ಮಾಡಬೇಕಾಗಿದೆ. ಅದರ ವಿವೇಚನೆ ಇಲ್ಲದೆ ಹೆಚ್ಚು ಹೆಚ್ಚು ಅಧಿಕಾರಿಗಳನ್ನು ಸೃಷ್ಟಿ ಮಾಡುವುದಕ್ಕೆ, ನೇಮಕ ಮಾಡಿಕೊಳ್ಳುವುದಕ್ಕೆ ಹೊರಟರೆ ಅದಕ್ಕೆ ಸರ್ಕಾರ ಸ್ವಲ್ಪ ಕಡಿವಾಣ ಹಾಕಬೇಕಾಗುತ್ತದೆ. ಯಾವುದೇ ವಿದ್ಯೆ ಆಗಲಿ, ಪರೀಕ್ಷೆ ಆಗಲೀ ಇದಕ್ಕೆ ಸಂಬಂಧಪಟ್ಟಂತೆ ಇದ್ದರೆ ಅದಕ್ಕೆ ಪೂರ್ಣ ಸ್ವಾಯತ್ತತೆಯನ್ನು ಕೊಟ್ಟಿದೆ. ಅದರ ಬಗ್ಗೆ ನಾವು ಯಾವುದಕ್ಕೂ ಕೂಡ ಮಧ್ಯೆ ಪ್ರವೇಶ ಮಾಡಿಲ್ಲ. ಯಾವುದೇ ಒಂದು ಕಾಲೇಜಿಗೆ ಅನುಮತಿ ಕೊಡಬೇಕಾದರೂ ಸಹ ಅವರ ಒಂದು ಪರವಾನಗಿ ಇಲ್ಲದೆ ನಾವು ಮುಂದೆ ಹೋಗಿ ಕೊಟ್ಟಿಲ್ಲ. ಒಂದು ಜೂನಿಯರ್ ಕಾಲೇಜ್ ಆಗಲಿ, ಒಂದು ಪ್ರಥಮ ದರ್ಜೆ ಕಾಲೇಜ್ ಆಗಲಿ, ಅಥವಾ ಒಂದು ಟೆಕ್ನಿಕಲ್ ಕಾಲೇಜ್ ಆಗಲಿ, ಇದು ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರೂ ಸಹ ವಿಶ್ವವಿದ್ಯಾನಿಲಯದ ಪರವಾನಗಿ ಇಲ್ಲದೆ, ಅವರ ಒಂದು ಶಿಫಾರಸ್ಸು ಇಲ್ಲದೆ ಕೊಟ್ಟಿಲ್ಲ. ಮತ್ತು ಅವರು ಹೇಳಿದ್ದ ಯಾವುದನ್ನೂ ಸಹ ನಾವು ಉಲ್ಲಂಘನೆ ಮಾಡಿಲ್ಲ. ನಮ್ಮ ಸರ್ಕಾರದ ಒಂದು ನೀತಿಯೂ ಸಹ ಈ ರೀತಿ ಇವೆ. ಈ ವಿಶ್ವವಿದ್ಯಾನಿಲಯಕ್ಕೆ ಯಾವ ರೀತಿಯಾಗಿ ಸ್ವಾಯತ್ತತೆ ಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ರಾಜ್ ಕಮಿಟಿಯವರು ಇದರ ಬಗ್ಗೆ ಏನು ಒಂದು ವರದಿ ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡಿ ಅವರಲ್ಲಿ ಯಾವುದನ್ನು ವಾಪಸ್ಸು ಮಾಡಬೇಕು. ಯಾವುದನ್ನು ಸರ್ಕಾರ ಉಳಿಸಿಕೊಳ್ಳಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ. ಆದರೆ ವಿಶ್ವವಿದ್ಯಾನಿಲಯಕ್ಕೆ ಪೂರ್ಣ ಸ್ವಾಯತ್ತತೆ ಕೊಡುವುದನ್ನು ನಾವೂ ಸಹ ಒಪ್ಪುತ್ತೇವೆ. ಈ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಬಗ್ಗೆ ಈಗ ಏನು ಒಂದು ಅಧಿಕಾರ ಕೊಟ್ಟಿದ್ದೇವೋ ಅದನ್ನು ಹಾಗೆಯೇ ಉಳಿಸಿಕೊಂಡು ಬರುತ್ತೇವೆ. ನಾವು ಮಧ್ಯೆ ಕೈಹಾಕುವುದಕ್ಕೆ ಹೋಗುವುದಿಲ್ಲ. ಆರ್ಟಿಕಲ್ ೪ ರ ಪ್ರಕಾರ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಕೆಲಸಕಾರ್ಯಗಳು ಏನು ಇವೆ ಅದರ ಬಗ್ಗೆ ನಾವು ಕೈಹಾಕುವುದಿಲ್ಲ. ಯಾರ್ಯಾರಿಗೆ ಪ್ರಮೋಷನ್ ಕೊಡಬೇಕು, ಯಾರಾದರೂ ತಪ್ಪು ಮಾಡಿದರೆ ಅವರನ್ನು ಎನ್‌ಕ್ವೈರಿ ಮಾಡಿ ನಿಜಾಂಶವನ್ನು ಪತ್ತೆ ಹಚ್ಚುವುದಕ್ಕೆ ಈಗ ಅವರಿಗೆ ಏನು ಒಂದು ಅಧಿಕಾರ ಇದೆಯೋ ಅದು ಇದ್ದೇ ಇದೆ. ಈಗಾಗಲೇ ಮೈಸೂರು ಉಪಕುಲಪತಿಗಳು ಬರೆದಿರತಕ್ಕಂಥಾ ಕೆಲವು ವಿಷಯಗಳ ಮೇಲೆ ನನ್ನನ್ನು ಶಿಫಾರಸು ಮಾಡಬೇಕು ಎಂದು ಕೇಳಿದ್ದಾರೆ. ಹಿಂದೆ ಒಂದು ಸಾರಿ ವಿಶ್ವವಿದ್ಯಾನಿಲಯದಲ್ಲಿ ಇಂತಹ ಅಕ್ರಮಗಳು ನಡೆದಿವೆ ಎಂದು ಬಂದಾಗ ಶ್ರೀ ಗೋಪೀವಲ್ಲಭ ಐಯ್ಯಂಗಾರ್ ಅವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದ್ದರು. ಹಾಗೆಯೇ ಒಂದುವೇಳೆ ಅದರಲ್ಲಿ ತಪ್ಪು ಏನಾದರೂ ನಡೆದಿದ್ದರೆ ನಿಜವಾಗಿಯೂ ಅವರು ತಪ್ಪಿತಸ್ಥರೇ ಇಲ್ಲವೇ ಎನ್ನುವುದರ ಬಗ್ಗೆ ಪರಿಶೀಲನೆ ಮಾಡುವುದಕ್ಕೋಸ್ಕರ ಈ ಸದನದ ಒಂದು ಕಮಿಟಿಯನ್ನು ಮಾಡುವುದರ ಬಗ್ಗೆ ಪರಿಶೀಲನೆ ಮಾಡಿ ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಈ ವಿಶ್ವವಿದ್ಯಾನಿಲಯಗಳಿಗೆ ನಾವು ಏನು ಸ್ವಾಯತ್ತತೆ ಸ್ಥಾನಮಾನಗಳನ್ನು ಈಗ ಕೊಟ್ಟಿದ್ದೇವೋ ಅವು ಇದ್ದೇ ಇರುತ್ತವೆ. ಆದರೆ ಅವರು ಸರ್ಕಾರದ ನೀತಿ ನಿಯಮಾವಳಿಗನುಸಾರವಾಗಿ ನಾನು ಹಿಂದೆ ಹೇಳಿದ ಹಾಗೆ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ಹೇಳಿದ ಹಾಗೆ ನಡೆದುಕೊಂಡು ಹೋಗಬೇಕು. ತಮಗೆ ಉದಾಹರಣೆ ಹೇಳಬೇಕಾದರೆ ನಾನು ಬೆಂಗಳೂರಿನಲ್ಲಿರ ತಕ್ಕಂಥಾ ಒಂದು ಹಾಸ್ಟೆಲ್‌ಗೆ ಹೋಗಿದ್ದಾಗ ಅಲ್ಲಿಯ ಮಕ್ಕಳ ಪರಿಸ್ಥಿತಿ ನೋಡಿ ತಕ್ಷಣ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗೆ ಕೊಟ್ಟಾಗ ಆ ಅಧಿಕಾರಿಗಳು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು. ನಾನು ಆ ಬಗ್ಗೆ ಹೇಳಿಬಂದರೂ ಕೂಡ ಆ ಮಕ್ಕಳಿಗೆ ಯಾವ ವಿಧವಾದಂಥ ಸೌಕರ್ಯವನ್ನೂ ಸಹ ಒದಗಿಸಿ ಕೊಡಲಿಲ್ಲ. ಅಲ್ಲಿ ರೂಮ್‌ಗಳಲ್ಲಿ ಟ್ಯೂಬ್ಸ್ ಇಲ್ಲದೆ ಲೈಟ್ ಇಲ್ಲದೆ ಮಕ್ಕಳು ಬಹಳ ತೊಂದರೆಗೊಳಗಾದರು. ಹಾಗೆ ಮಾಡದೇ ಹೋದರೆ, ಅಲ್ಲಿ ಏತಕ್ಕೆ ಹೀಗಾಯಿತು ಎನ್ನುವುದನ್ನು ನಾವು ಕೇಳಬೇಕೇ ಬೇಡವೇ ? ನಾವು ಮುಂದಿನ ವರ್ಷ ಇನ್ನೂ ಹೆಚ್ಚು ಹೆಚ್ಚಾಗಿ ವಿಶ್ವವಿದ್ಯಾನಿಲಯದ ಹಾಸ್ಟೆಲುಗಳನ್ನು ತೆರೆಯಬೇಕೆಂದು ಇದ್ದೇವೆ, ಮತ್ತು ಈಗ ವಿಶ್ವವಿದ್ಯಾನಿಲಯದಲ್ಲಿ ಅರ್ಧಂಬರ್ಧ ಕೆಲಸಗಳು ಏನು ಆಗಿವೆಯೋ ಅದಕ್ಕೆ ಸಾಕಷ್ಟು ಹಣ ಕೊಟ್ಟು, ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಗ ಹುಡುಗರಿಗೆ ಹೆಚ್ಚು ಹೆಚ್ಚು ಸೌಕರ್ಯಗಳು ಸಿಕ್ಕಿ ಏನು ಗೊಂದಲ ಇದೆಯೋ ಅದು ಕಡಿಮೆಯಾಗುತ್ತದೆ. ಇನ್ನು ಇಲ್ಲಿ ಹಂಗಾಮಿ ನೌಕರರು ಏನು ಕೆಲಸ ಮಾಡುತ್ತಿದ್ದಾರೋ ಅವರನ್ನು ಖಾಯಂ ಮಾಡಬೇಕಾಗುತ್ತದೆ, ಅವರಿಗೆ ಬಿ.ಎ. ವಗೈರೆ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಯಾವ ರೀತಿಯ ರೂಲು ನಿಯಮಾವಳಿಗಳು ಬೇರೆಯವರಿಗೆ ಅನ್ವಯಿಸುತ್ತವೆಯೋ ಇವರಿಗೂ ಹಾಗೇ ಅನ್ವಯಿಸುತ್ತವೆ. ಇದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ಇನ್ನು ಇವರಿಗೆ ಯು.ಜಿ.ಸಿ. ಸ್ಕೇಲ್ ಏನು ಇದೆಯೋ ಅದನ್ನು ಈಗಾಗಲೇ ಜಾರಿಗೆ ಕೊಟ್ಟಿದ್ದೇವೆ. 1973 ರಿಂದ ಯು.ಜಿ.ಸಿ. ಸ್ಕೇಲ್ ಕೊಡಬೇಕಾಗಿತ್ತು. ಅದನ್ನು ಒಪ್ಪಿಕೊಂಡು ಇಲ್ಲಿಯವರೆಗೂ ಜಾರಿಗೆ ಕೊಟ್ಟಿದ್ದೇವೆ. ಆದರೆ ಇದರ ಬಗ್ಗೆ ಸ್ವಲ್ಪ ತಡವಾದುದರಿಂದ ಉಪಾಧ್ಯಾಯರು ಸತ್ಯಾಗ್ರಹ ಹೂಡಿದ್ದರು. ಈ ದೃಷ್ಟಿಯಿಂದ ನಾನು ಕೇಳುತ್ತೇನೆ. ನಾವು ಏನೇನು ಮಾಡಿದ್ದೇವೆ ಅದನ್ನಾದರೂ

ಹೇಳಬೇಡವೇ ? ಇನ್ನು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು ಸೀಟುಗಳನ್ನು ಮೆರಿಟ್ ಪ್ರಕಾರ ಏನು ಕೊಟ್ಟಿದ್ದೇವೆ ಅದರ ಬಗ್ಗೆ ಮಾನ್ಯ ಸದಸ್ಯರಿಂದ ಶ್ಲಾಘನೀಯವಾದ ಒಂದು ಮಾತೂ ಬೇಡವೇ ? ಅದರ ಬಗ್ಗೆ ಒಂದು ಮಾತೂ ಹೇಳಿಲ್ಲ. ಯಾವಾಗಲೂ ಒಳ್ಳೆಯ ಕೆಲಸ ಮಾಡಿದರೆ ಅದನ್ನೂ ಸಹ ತಾವು ಹೇಳಬೇಕು. ದೇವರನ್ನು ಹೊಗಳಿ ಹೊಗಳಿ ಸ್ತೋತ್ರ ಮಾಡಿದರೆ ಹೇಗೆ ಭಕ್ತಿ ಉಕ್ಕುತ್ತದೋ ಹಾಗೆ ನಾವು ಮಾಡಿರುವ ಒಳ್ಳೆಯ ಕೆಲಸವನ್ನು ಹೊಗಳಿದರೆ ಇನ್ನೂ ಚೆನ್ನಾಗಿ ಕೆಲಸ ಮಾಡಬಹುದು. ಈ ಬಗ್ಗೆ ಮಾನ್ಯ ಒಡೆಯರಾಜ್‌ರವರು ಒಂದು ಮಾತನ್ನಾದರೂ ಹೇಳಿದ್ದಾರೆಯೇ ? ಯಾರು ತಪ್ಪು ಮಾಡುತ್ತಾರೋ ಅವರ ಮೇಲೆ ಕಠಿಣವಾದ ಕಾರ್ಯಕ್ರಮ ತೆಗೆದುಕೊಳ್ಳೋಣ.

ಶ್ರೀ ಗೋವಿಂದ್ ಪಿ. ಒಡೆಯರಾಜ್.—ನೀವು ಮಾಡಿದ ಕೆಲಸದ ಬಗ್ಗೆ ಹೊಗಳುತ್ತೇವೆ. ಆದರೆ ಈ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಸೀಟುಗಳನ್ನು 20 ಪರ್ಸೆಂಟ್ ಮೆರಿಟ್ ಪ್ರಕಾರ ಏನು ಕೊಟ್ಟಿದ್ದೀರಿ ಅದರ ಬಗ್ಗೆ ರಿಸರ್ವೇಷನ್ ಏತಕ್ಕೆ ಮಾಡಬಾರದಾಗಿತ್ತು ? ಕ್ಯಾಪಿಟೇಷನ್ ಬಿಲ್ ನೋಡಿ. ಅಲ್ಲಿ ಸರ್ಕಾರದವರು ರಿಸರ್ವೇಷನ್ ಮಾಡಿಸಿಲ್ಲ. ನೀವು ಅದನ್ನು ಮಾಡಿಸಿ, ಹೊಗಳುತ್ತೇವೆ. ಮೆರಿಟ್ ಸೀಟುಗಳ ಬಗ್ಗೆ ಹೇಳುವಾಗ, ಸರ್ಕಾರದಲ್ಲಿ 20 ಪರ್ಸೆಂಟ್ ಸೀಟುಗಳು ಏನು ಇದ್ದವು ಅವುಗಳ ಬಗ್ಗೆ ನಾವು ಒಂದು ನೀತಿಯನ್ನು ಹಾಕಿಕೊಂಡಿದ್ದೇವೆ. ಬ್ಯಾಕ್‌ವರ್ಡ್ಸ್, ಮೈನಾರಿಟೀಸ್‌ಗೆ 67 ಪರ್ಸೆಂಟ್ ಸೀಟುಗಳನ್ನು ಇಟ್ಟಿದ್ದೇವೆ. ಈ 20 ಪರ್ಸೆಂಟ್‌ನಲ್ಲಿಯೂ ಇವರಿಗೆ ರಿಸರ್ವೇಷನ್ ಅನ್ವಯವಾಗಬೇಕು ಎಂದು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ಆ 20 ಪರ್ಸೆಂಟ್‌ನಲ್ಲಿಯೂ ರಿಸರ್ವೇಷನ್ ಅನ್ವಯಿಸಬೇಕು ಎಂದು ನಿಮ್ಮ ಅಧಿಕಾರಿಗಳು ಕಣ್ಣು ತೆರೆದ್ದಾರೆ.

ಶ್ರೀ ಗೋವಿಂದ್ ಪಿ. ಒಡೆಯರಾಜ್.—50 ಪರ್ಸೆಂಟ್ ಮೆರಿಟ್‌ನಲ್ಲಿ ಸೀಟುಗಳನ್ನು ಕೊಡುವಾಗ ಇಂಜಿನಿಯರಿಂಗ್ ಕಾಲೇಜಿನಲ್ಲಾಗಲೀ, ಮೆಡಿಕಲ್ ಕಾಲೇಜಿನಲ್ಲಾಗಲೀ ರಿಸರ್ವೇಷನ್ ಮಾಡಿಲ್ಲ. ಕಡ್ಡಾಯವಾಗಿ ತಾವು ಇದನ್ನು ಪಾಲಿಸಬೇಕು, ಕಡ್ಡಾಯವಾಗಿ ಇದನ್ನು ಅಡಾಪ್ಟ್ ಮಾಡಲು ತಮ್ಮನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—50 ಸಾವಿರ ರೂಪಾಯಿಗಳ ಡಿಪಾಸಿಟ್ ಕೊಡತಕ್ಕದ್ದರಲ್ಲಿ ಮೆರಿಟ್ಟನ್ನು ನೋಡತಕ್ಕದ್ದು ಇಲ್ಲ. ಸರ್ಕಾರದ ಹತ್ತು ಸೀಟುಗಳು ಏನು ಇವೆ, ಅವುಗಳಿಗೂ ಕೂಡ ಮೆರಿಟ್‌ನಲ್ಲಿ ಕೊಡಬೇಕು ಎಂದು ಹೇಳಿದ್ದೇವೆ. ಇಲ್ಲಿ ನಾವು ಮಿನಿಮಮ್ ಮಾರ್ಕ್ಸ್ 50 ಪರ್ಸೆಂಟ್ ಎಂದು ಮಾಡಿರುವುದರಿಂದ ಅದಕ್ಕೂ ಕಡಿಮೆ ಅಂಕಗಳು ಬಂದ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡತಕ್ಕ ಪ್ರಶ್ನೆ ಬರುವುದಿಲ್ಲ. ಈ ಕೆಟಗರಿಯಲ್ಲಿಯೂ ಸಹ ಕನ್ನಡದವರಿಗೆ ಸುಮಾರು 30 ಪರ್ಸೆಂಟ್ ಸೀಟುಗಳನ್ನು ಕೊಡಬೇಕು ಎಂದು ಹೇಳಿದ್ದೇವೆ. ಈ 30 ಪರ್ಸೆಂಟ್ ಮತ್ತು ಸರ್ಕಾರದಲ್ಲಿದ್ದ 20 ಪರ್ಸೆಂಟ್ ಸೀಟುಗಳೂ ಸಹ ಕನ್ನಡದವರಿಗೆ ಸಿಕ್ಕುವ ಹಾಗೆ ಮಾಡಿದ್ದೇವೆ. ಹಿಂದೆ ಇದು ಇರಲಿಲ್ಲ. ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ಹೋದ ವರ್ಷ ಯಾರು 60 ಪರ್ಸೆಂಟ್ ಮಿನಿಮಮ್ ಮಾರ್ಕ್ಸ್ ತೆಗೆದಿದ್ದಾರೋ ಅವರಿಗೆ ಈ ಪ್ರೊಫೆಷನಲ್ ಕಾಲೇಜಿನಲ್ಲಿ ಸೀಟು ದೊರೆಯುತ್ತಿತ್ತು. ಈ ವರ್ಷ 50 ಪರ್ಸೆಂಟ್ ಮಾರ್ಕ್ಸ್ ತೆಗೆದಿದ್ದವರಿಗೂ ಸಹ ಸೀಟು ದೊರೆಯುವ ಅವಕಾಶವಾಗಿದೆ. ಇದರ ಪ್ರಕಾರ ಸುಮಾರು 150 ಹರಿಜನ ಗಿರಿಜನರಿಗೆ ಸೀಟುಗಳು ಎಕ್ಸ್‌ಟ್ರಾ ಸಿಕ್ಕಿವೆ. ಸರ್ಕಾರದ ಹೊಸ ನೀತಿಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದವರಿಗೆ, ಹರಿಜನರಿಗೆ ಗಿರಿಜನರಿಗೆ, ಹೆಚ್ಚಿನ ಅವಕಾಶವಾಗಿದೆ. ತಾವು ಇದರ ಬಗ್ಗೆ ಅಂಕಿಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ. ನಿಜವಾಗಿಯೂ ಮಾನ್ಯ ಸದಸ್ಯರುಗಳು ಈ ಕೆಲಸವನ್ನು ಮಾಡಿದ್ದಕ್ಕೆ ತಮ್ಮ ಮೆಚ್ಚಿಗೆಯನ್ನು ಇಲ್ಲಿ ವ್ಯಕ್ತಪಡಿಸಬೇಕಾಗಿತ್ತು. ಮತ್ತೆ ಈ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಕೆಲವರು ಹೇಳಿದ್ದಾರೆ. ಸದ್ಯಕ್ಕೆ ನಾವು ಕ್ಯಾಪಿಟೇಷನ್ ಬಿಲ್ಲನ್ನು ತಂದಿದ್ದೇವೆ. ಅದನ್ನು ತಾವು ಒಪ್ಪಿಕೊಳ್ಳಬೇಕು. ನಂತರ ಕಾಂಪ್ರಹೆನ್ಸಿವ್ ಬಿಲ್ ಸದನದ ಮುಂದೆ ಬರುವುದಿದೆ. ಅದನ್ನೂ ಸಹ ತಾವು ಹಾಕಿಕೊಟ್ಟು, ಕಾನೂನಿನ ಚೌಕಟ್ಟಿನಲ್ಲಿ ತಂದಿದ್ದೇವೆ.

ಉಪಸಭಾಧ್ಯಕ್ಷರು.—ಮಾನ್ಯ ಮಂತ್ರಿಯವರ ಉತ್ತರ ಮುಗಿಯಿತೇ ?

ಶ್ರೀ ಬಿ. ರಾಚಯ್ಯ.—ಶಿಕ್ಷಣದ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಪ್ರಸ್ತಾಪಮಾಡಿರತಕ್ಕ ವಿಚಾರಗಳ ಮೇಲೆ ಮತ್ತು ಅವರು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲವಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಕೆಲವು ವಿಚಾರಗಳಿಗೆ ನಾನು ಉತ್ತರ ಕೊಡಲಿಕ್ಕಾಗಲಿಲ್ಲ. ಬಹು ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಬಹುತೇಕ ಜನ ಸದಸ್ಯರು ಮಾತನಾಡದಿರುವುದರಿಂದ ನಾನು ಆ ವಿಷಯವಾಗಿ ಪ್ರಸ್ತಾಪ ಮಾಡಿದ್ದೇನೆ ಮತ್ತು ಭಾಷಾ ವಿಷಯದಲ್ಲಿಯೂ ಹೇಳಿದ್ದೇನೆ. ಶಾಲಾ ಕಟ್ಟಡಗಳ ವಿಷಯದಲ್ಲಿಯೂ ಹೇಳಿದ್ದೇನೆ. ಉಪಾಧ್ಯಾಯರ ವಿಷಯದಲ್ಲಿಯೂ ಸಹ ನಾನು ಸ್ವಲ್ಪಮಟ್ಟಿಗೆ ಉತ್ತರವನ್ನು ಕೊಟ್ಟಿದ್ದೇನೆ. ಬಾಕಿ ವಿಷಯಗಳ ಬಗ್ಗೆ ಅಂಕಿ-ಅಂಶಗಳನ್ನು ಹೇಳುತ್ತಾ ಹೋದರೆ ಸಭೆಯ ಸಮಯವನ್ನು ಹೆಚ್ಚಾಗಿ ತೆಗೆದುಕೊಂಡಂತಾಗುತ್ತದೆ. ಮತ್ತು ನಾವು ಕೊಟ್ಟಿರುವ ವರದಿಯಲ್ಲಿ ಮಾನ್ಯ ಸದಸ್ಯರು

ಪ್ರಸ್ತಾಪ ಮಾಡಿರುವ ಅನೇಕ ವಿಷಯಗಳಿಗೆ ಉತ್ತರವಿದೆ. ನಾನು ಅದನ್ನೇ ಹೇಳುತ್ತಾ ಹೋದರೆ ವಿವರವನ್ನು ಪುನರಾವೃತ್ತಿ ಮಾಡಿದ ಹಾಗಾಗುತ್ತದೆ. ಆದ್ದರಿಂದಲೇ ನಾನು ನೀತಿ ನಿಯಮಕ್ಕೆ ಸಂಬಂಧಪಟ್ಟ ಹಾಗೆ ಹೇಳಿದ್ದೇನೆ. ಕ್ಯಾಪಿಟೇಷನ್ ವಿಷಯದಲ್ಲಿ ಖಾಸಗಿ ಕಾಲೇಜುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದಕ್ಕೆ ಒಂದು ಮಸೂದೆಯನ್ನೂ ಕೂಡ ತಂದಿದ್ದೇವೆ. ಮತ್ತು ಪ್ರೀಪ್ರೈಮರಿ ಶಾಲೆಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಅದರ ಬಗ್ಗೆಯೂ ಹೇಳಿದ್ದೇನೆ. ಇನ್ನು ನಾನು ಬಿಟ್ಟುಹೋಗಿರತಕ್ಕ ವಿಷಯಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ. ಮತ್ತೆ ಮಾನ್ಯ ಸದಸ್ಯರು ಅತಿ ಜರೂರಾದ ವಿಷಯಗಳ ಬಗ್ಗೆ ಏನು ಹೇಳಿದ್ದಾರೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿ ಮಾನ್ಯ ಸದಸ್ಯರು ಈ ಬೇಡಿಕೆಗಳಿಗೆ ಅವಿರೋಧವಾಗಿ ಒಪ್ಪಿಕೊಂಡು ಪಾಸ್ ಮಾಡಿಕೊಡಬೇಕೆಂದು ಹೇಳಿ ತಮ್ಮನ್ನು ವಂದಿಸಿ, ಶಿಕ್ಷಣದ ವಿಷಯ ನಮ್ಮೆಲ್ಲರಿಗೂ ಸಂಬಂಧಪಟ್ಟಿದ್ದು. ಮುಂದಿನ ಭಾವೀ ಪ್ರಜೆಗಳನ್ನು ತಯಾರು ಮಾಡತಕ್ಕ ಕೆಲಸ ಇದು ಎಂದು ಹೇಳಿ, ಇದಕ್ಕೆ ತಮ್ಮೆಲ್ಲರ ಸಹಕಾರ ಸಹಾನುಭೂತಿಯನ್ನು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಪ್ರೈಮರಿ ಶಾಲೆಗಳಲ್ಲಿ ಇದ್ದಂಥ ಚಪ್ರಾಸಿಗಳನ್ನು ಹಿಂದಿನ ಸರ್ಕಾರದವರು ತೆಗೆದುಹಾಕಿದರು. ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆನು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲಿಲ್ಲ. ಅದಲ್ಲದೆ ಗುಲ್ಬರ್ಗದಲ್ಲಿರುವ ಬ್ರಹ್ಮಪುರ ಸ್ಕೂಲಿನಲ್ಲಿ 900 ಹುಡುಗರು ಇದ್ದಾರೆ. ಅಲ್ಲಿ ಕೇವಲ ನಾಲ್ಕು ರೂಮುಗಳು ಇವೆ. ಅವುಗಳಲ್ಲಿ ಎರಡು ರೂಮುಗಳು ಬಿದ್ದುಹೋಗಿವೆ. ಅದಕ್ಕೇನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿದ್ದೇನೆ. ಇದಕ್ಕೆ ಇಟ್ಟಿರತಕ್ಕ 90 ಲಕ್ಷ ರೂಪಾಯಿಗಳು ಏನೇನೂ ಸಾಲದು. ಇದರ ಬಗ್ಗೆ ಮಾನ್ಯಮಂತ್ರಿಗಳು ವಿವರಣೆಯನ್ನು ಹೇಳಬೇಕು.

ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಏನು ಇದ್ದಾರೆ ಅವರು ಎಂ.ಬಿ.ಬಿ.ಎಸ್. ಪ್ರಥಮ ಪರೀಕ್ಷೆಯ ಬಗ್ಗೆ ಮಾಡಿದ ವಿಚಾರವನ್ನು ಇಲ್ಲಿ ನಾನು ಹೇಳಿದ್ದೇನೆ. ಮತ್ತು 11-1-1983 ರಂದು ನಡೆದ ಮಾರ್ಕ್ಸ್ ಕಾರ್ಡ್ ಸ್ಕ್ಯಾಂಡಲ್ ಬಗ್ಗೆಯೂ ಸಹ ನಾನು ಪ್ರಸ್ತಾಪ ಮಾಡಿದ್ದೇನೆ. ತಾವು ಇವೆಲ್ಲದರ ಬಗ್ಗೆ ಉತ್ತರವನ್ನು ಹೇಳಲಿಲ್ಲ. ಸೂಕ್ತ ಉತ್ತರ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ. ಬಿ. ರಾಚಯ್ಯ.—ಸ್ವಾಮಿ, ನಾನು ಶಾಲಾ ಕಾಲೇಜುಗಳ ಕಟ್ಟಡಗಳ ವಿಷಯದಲ್ಲಿ ನಮ್ಮ ಸರ್ಕಾರದ ನೀತಿ ಏನು ಇದೆ ಅದನ್ನು ಆಗಲೇ ಹೇಳಿದ್ದೇನೆ. ಎಲ್ಲೆಲ್ಲಿ ಮುನಿಸಿಪಾಲಿಟಿಗಳು ಇವೆಯೋ, ಕಾರ್ಪೊರೇಷನ್‌ಗಳು ಇವೆಯೋ, ಅಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಬೇಕಾದ್ದು ಅವರ ಕರ್ತವ್ಯವೂ ಆಗಿರುತ್ತದೆ. ಬೆಂಗಳೂರು ಕಾರ್ಪೊರೇಷನ್‌ನವರು ಸ್ವಲ್ಪಮಟ್ಟಿಗೆ ಈ ಕೆಲಸವನ್ನು ಮಾಡಿದ್ದಾರೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಈ ಭಾರವನ್ನು ಹೊರತಕ್ಕ ಶಕ್ತಿ ಇಲ್ಲದೆ ಮೂರನೆಯ ಒಂದು ಭಾಗದಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಒಂದು ನೀತಿಯನ್ನು ಸರ್ಕಾರ ಹಾಕಿಕೊಂಡಿದೆ ಮತ್ತು ಅದನ್ನು ಪಾಲಿಸಿಕೊಂಡು ಹೋಗುತ್ತೇವೆ. ತುರ್ತು ಪರಿಸ್ಥಿತಿಯಲ್ಲಿ ಎಲ್ಲೆಲ್ಲಿ ಶಾಲಾ ಕಟ್ಟಡಗಳು ಬಿದ್ದುಹೋಗಿವೆ, ಅವುಗಳ ಬಗ್ಗೆ ಎಸ್ಟಿಮೇಟನ್ನು ಕಳುಹಿಸಲು ಸಂಬಂಧಪಟ್ಟವರನ್ನು ಕೇಳಿದ್ದೇವೆ. ಮತ್ತು ಈ ವರ್ಷ ಇದಕ್ಕೆ ಹಣವನ್ನು ಒದಗಿಸಿಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ಸ್ ಏನು ಅವ್ಯವಹಾರ ಮಾಡಿದ್ದಾರೆ ಅದನ್ನು ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಿಂದೆ ನಡೆದಂಥ ಮಾರ್ಕ್ಸ್ ಕಾರ್ಡ್ ಸ್ಕ್ಯಾಂಡಲ್ ವಿಷಯದಲ್ಲಿ ಒಂದು ಮಾತನ್ನು ಹೇಳುವುದು ನನ್ನ ಕರ್ತವ್ಯ. 1980 ನೆಯ ಇಸವಿಯಲ್ಲಿ ಮಾರ್ಕ್ಸ್ ಕಾರ್ಡ್ ಸ್ಕ್ಯಾಂಡಲ್‌ನಲ್ಲಿ ಸಿ.ಓ.ಡಿ. ಯವರು ಯಾರ ಯಾರ ಮೇಲೆ ವರದಿಯನ್ನು ಕೊಟ್ಟಿದ್ದಾರೋ ಅದಕ್ಕೆ ವಿಜಿಲೆನ್ಸ್‌ನವರು ಪೂರ್ಣ ಎನ್‌ಕ್ವೈಯರಿ ಮಾಡುವುದಕ್ಕೋಸ್ಕರ ರಾಜ್ಯಪಾಲರು ಆಜ್ಞೆ ಮಾಡಿದ್ದಾರೆ. ಇದರ ಪ್ರಕಾರ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇತ್ತೀಚೆಗೆ ನಡೆದಂಥ ಘಟನೆ ಅಂದರೆ ಆನ್ಸರ್ ಬುಕ್ಕುಗಳನ್ನು ಕದ್ದು ಹಾಕಲಾಯಿತು ಎನ್ನುವುದು. ಇದು ನಮ್ಮ ಸರ್ಕಾರದ ಗಮನಕ್ಕೆ ಬಂದ ತಕ್ಷಣ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ಕ್ರಮ ತೆಗೆದುಕೊಂಡು ಅದನ್ನು ಪೋಲೀಸರಿಗೆ ಕೊಟ್ಟು ಇನ್‌ವೆಸ್ಟಿಗೇಷನ್ ಆಗುತ್ತಾ ಇದೆ. ಆದುವರಿಂದ ಕ್ರಮ ತೆಗೆದುಕೊಳ್ಳುವುದರಲ್ಲಿ ನಿಧಾನವಾಗಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಆ ಕಡೆ ಗಮನ ಕೊಡುತ್ತಾ ಇದ್ದೇವೆ. ಹಿಂದೆ ಪಿ.ಯು.ಸಿ. ಬೋರ್ಡಿನಲ್ಲಿ ಮಾರ್ಕ್ಸ್ ಸ್ಕ್ಯಾಂಡಲ್ ಮಾಡಿರತಕ್ಕವರನ್ನು ಮತ್ತೆ 6 ತಿಂಗಳು ಸಸ್ಪೆಂಡ್‌ಮಾಡಿ ವಿಜಿಲೆನ್ಸ್‌ನವರ ಕೈಯಲ್ಲಿ ಎನ್‌ಕ್ವೈರಿ ಮಾಡಿಸುತ್ತಾ ಇದ್ದೇವೆ. ಈಗ ಸ್ವಲ್ಪ ಚಳಿ ಶುರುವಾಗಿದೆ. ನಮ್ಮಲ್ಲಿ ಮೌಲ್ಯಮಾಪನ ಮಾಡತಕ್ಕವರಲ್ಲಿ ಮತ್ತು ಅಂಕಿ ಅಂಶಗಳನ್ನು ಬರೆದುಕೊಳ್ಳತಕ್ಕವರಲ್ಲಿ ಕೆಲವು ಬದಲಾವಣೆಗಳು ಆಗಿವೆ. ಇವರಲ್ಲಿಯೂ ಇಂಪ್ರೂವ್ ಆಗುತ್ತದೆ ಎನ್ನತಕ್ಕ ನಂಬಿಕೆ ಇದೆ.

ಶ್ರೀ ಚಿಗರಿಗೌಡ.—ನಾನು ತಿಳಿದುಕೊಂಡಂತೆ ಕರ್ನಾಟಕ ರಾಜ್ಯದಲ್ಲಿ ಉಪಾಧ್ಯಾಯರ ಕೊರತೆ ಬಹಳ ಇದೆ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಮಿಡ್ಲ್ ಸ್ಕೂಲ್‌ನಲ್ಲಿ ನಾಲ್ಕೈದು ಜನ ಮೇಸ್ಟ್ರುಗಳು

ಪಾಠ ಮಾಡುವ ಜಾಗದಲ್ಲಿ ಕೇವಲ ಒಬ್ಬರು ಮೇಸ್ಟ್ರರು ಪಾಠ ಮಾಡುತ್ತಾ ಇದ್ದಾರೆ. ಅನೇಕ ಕಡೆ ಪ್ರೈಮರಿ ಸ್ಕೂಲುಗಳು ಬಾಗಿಲು ಮುಚ್ಚಿವೆ. ಯಾವಾಗ ಇದನ್ನೆಲ್ಲಾ ಭರ್ತಿಮಾಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇವರಿಗಿಂತ ನಮ್ಮ ಕೊಪ್ಪ ಶೃಂಗೇರಿ ಎಂ.ಎಲ್.ಎ. ಏಕಪಾತ್ರಾಭಿನಯ ಮಾಡುತ್ತಾ ಇದ್ದಾರೆ ಎಂದು ಹೇಳಿದರು. ಅದೆಲ್ಲಾ ಗಮನದಲ್ಲಿದೆ ಸ್ವಾಮಿ. ಅದಕ್ಕೋಸ್ಕರ ಕಾನೂನು ಗಳನ್ನು ಬದಲಾವಣೆ ಮಾಡಿ, ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯವೋ ಅಷ್ಟು ಬೇಗ ನೇಮಕ ಮಾಡುತ್ತಾ ಇದ್ದೇವೆ.

ಶ್ರೀ ಹನುಮಂತರಾವ್ ದೇಸಾಯಿ.—ಹಳೇ ಮೈಸೂರಿನಲ್ಲಿ ಖಾಸಗೀ ವಿದ್ಯಾಸಂಸ್ಥೆಗಳು ನಡೆಸುತ್ತಾ ಇರುವ ಶಿಶುವಿಹಾರಗಳಿಗೆ ಧನಸಹಾಯ ಕೊಡುತ್ತೀರಿ. ಇದೇ ಒಂದು ಸಹಾಯವನ್ನು ಹೈದರಾಬಾದ್ ಕರ್ನಾಟಕದ ಜನರಿಗೆ ಕೊಡುವುದಿಲ್ಲ ಮತ್ತು ಮುಂಬೈ ಕರ್ನಾಟಕದ ಜನರಿಗೂ ಕೊಡುವುದಿಲ್ಲ. ಈ ತಾರತಮ್ಯ ಏಕೆ? ಇದೇ ನನ್ನ ಪ್ರಶ್ನೆ. ಎರಡನೇ ಪ್ರಶ್ನೆ ಏನೆಂದರೆ, ನಮ್ಮಲ್ಲಿ ಒಂದು ನಾಣ್ನುಡಿ ಇದೆ. ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಶಾಲೆ ಮಾಸ್ತರಿಗೆ ಬುದ್ಧಿಯಿಲ್ಲ, ಸ್ಟೇಷನ್ ಮಾಸ್ತರಿಗೆ ನಿದ್ದೆಯಿಲ್ಲ ಎಂದು. ಇದರ ಬಗ್ಗೆ ತಮಗೆ ಅರಿವು ಇದ್ದರೆ ಹೇಳಿ.

ಶ್ರೀ ಬಿ. ರಾಚಯ್ಯ.—ಅದನ್ನು ಅನುಸರಿಸಿದರೆ ನನಗೂ ನಿದ್ದೆ ಇಲ್ಲದಂತಾಗುತ್ತದೆ. ಮಾನ್ಯ ದೇಸಾಯಿ ಯವರು ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದಲ್ಲಿರತಕ್ಕಂಥ ಪೂರ್ವಪ್ರಾಥಮಿಕ ಶಾಲೆಗಳು, ಶಿಶುವಿಹಾರಗಳಿಗೆ ಸೌಲತ್ತನ್ನು ಕೊಡುತ್ತಾ ಇಲ್ಲ. ಹಳೇ ಕರ್ನಾಟಕದಲ್ಲಿ ಕೊಡುತ್ತಿದ್ದೀರಿ ಎಂದು ಹೇಳಿದರು. ಸರ್ಕಾರ ಹಳೇ ಕರ್ನಾಟಕದಲ್ಲಿ ಹಿಂದೆ ಇದನ್ನು ಸ್ಟಾರ್ಟ್ ಮಾಡಿದ್ದು. ಏಕರೀತಿಯ ನ್ಯಾಯ ದೊರಕಿಸತಕ್ಕದ್ದು ಧರ್ಮ. ಅದನ್ನು ಹೈದರಾಬಾದ್ ಕರ್ನಾಟಕದ ಮಂತ್ರಿಗಳು ಇದ್ದಾಗ ಮಾಡಲಿಲ್ಲ. ಅದನ್ನು ನಾವು ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಅನೇಕ ವರ್ಷಗಳಿಂದ ಹೈಸ್ಕೂಲುಗಳನ್ನು ಖಾಸಗಿಯಾಗಿ ಪ್ರಾರಂಭ ಮಾಡಿದ್ದಾರೆ. ಜೂನಿಯರ್ ಕಾಲೇಜುಗಳಿಗೆ, ಹೈಸ್ಕೂಲುಗಳಿಗೆ ಪ್ರತಿವರ್ಷ 50 ಸಾವಿರ ರೂಪಾಯಿ ಡಿಪಾಸಿಟ್ ಕೊಡಬೇಕು ಎಂದು ಇದೆ; ಮತ್ತೆ ಕಟ್ಟಡ ಆಗಬೇಕು ಎಂದು ಇದೆ. ಆ ಪಾಠಶಾಲೆಗೆ 5 ವರ್ಷ ಗ್ರ್ಯಾಂಟ್ ಇಲ್ಲ. 50 ಸಾವಿರ ರೂಪಾಯಿ ಡಿಪಾಜಿಟ್ ಮಾಡಬೇಕು, ಮತ್ತೆ ಕಟ್ಟಡ ಕಟ್ಟಬೇಕು ಎಂದು ಕಂಡೀಷನ್ ಇದೆ. ಹಳ್ಳಿಗಾಡಿನಲ್ಲಿ ಅನೇಕ ಕಡೆ ಪ್ರೈವೇಟ್ ಹೈಸ್ಕೂಲುಗಳು ಮತ್ತು ಜೂನಿಯರ್ ಕಾಲೇಜುಗಳು ಚೆನ್ನಾಗಿ ನಡೆಯುತ್ತಾ ಇವೆ. ಆ ಒಂದು ದೃಷ್ಟಿಯನ್ನಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ಮಕ್ಕಳ ಹಿತದೃಷ್ಟಿಯಿಂದ ಈ ಮೂರು ಕಂಡೀಷನ್‌ಗಳನ್ನು ಏನು ಸರ್ಕಾರ ಹಾಕಿದೆ ಅದನ್ನು ವಜಾ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಮತ್ತೆ ಪ್ರಾಥಮಿಕ ಶಾಲೆಗಳ, ಹೈಸ್ಕೂಲು, ಜೂನಿಯರ್ ಕಾಲೇಜುಗಳ ಸರ್ಕಾರಿ ಕಟ್ಟಡಗಳ ಬಗ್ಗೆ ಹೇಳಬೇಕಾಗಿದೆ. ಸುಮಾರು 10–15 ವರ್ಷಗಳಿಂದ ಕಟ್ಟಡಗಳೇ ಇಲ್ಲದೆ ಶಾಲೆಗಳನ್ನು ನಡೆಸುತ್ತಾ ಇದ್ದಾರೆ, ಈ ಒಂದು ಅವ್ಯವಸ್ಥೆ ಇದೆ. ಆದುದರಿಂದ ಒಂದು ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ತಾವು ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ? ಇನ್ನೊಂದು ವಿಚಾರವೇನೆಂದರೆ, ಪೂರ್ವಪ್ರಾಥಮಿಕ ಪಾಠಶಾಲೆ ಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ನಾನು ತಿಳಿದುಕೊಂಡ ಹಾಗೆ ಪೂರ್ಣ ಸಂಬಳ ಕೊಡುತ್ತೀರಿ. ಆದರೆ ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆವರೆಗೆ ಕೆಲಸಮಾಡತಕ್ಕ ಆಯಾಗಳಿಗೆ 50 ರೂಪಾಯಿ ಮಾತ್ರ ಕೊಡುತ್ತಿದ್ದೀರಿ. ಆದುದರಿಂದ ಸರ್ಕಾರದ ಕಾನೂನಿನ ಪ್ರಕಾರ ಇವರಿಗೆ ವ್ಯವಸ್ಥಿತವಾದ ಸಂಬಳ ಕೊಡುತ್ತೀರಾ? ಮತ್ತೆ 8ನೇ ತರಗತಿಯಲ್ಲಿ ಕಳೆದ ವರ್ಷ ವಿಜ್ಞಾನ ಮತ್ತು ಸಮಾಜದ ಪುಸ್ತಕಗಳು ಎಲ್ಲಾ ಕಡೆ ಸಿಕ್ಕಲೇ ಇಲ್ಲ. ಇದರಿಂದ ತೊಂದರೆಯಾಯಿತು. ಈ ಸಾರಿಯೂ ಎಲ್ಲಾ ಕಡೆ ಪುಸ್ತಕಗಳು ಬಂದಿಲ್ಲ ಎನ್ನತಕ್ಕ ದೂರು ಬರುತ್ತಾ ಇದೆ. ಇದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ರಾಚಯ್ಯ.—ಪಠ್ಯಪುಸ್ತಕಗಳ ವಿಷಯದಲ್ಲಿ ಈ ವರ್ಷ ತೊಂದರೆಯಾದದ್ದು ನಿಜ. ಅದಕ್ಕೆ ವಿದ್ಯುಚ್ಛಕ್ತಿ ಕಾರಣ. ಮತ್ತು ನಮ್ಮ ಮುದ್ರಣಾಲಯದಲ್ಲಿರತಕ್ಕ ಮ್ಯಾನೇಜ್‌ಮೆಂಟ್ ಮತ್ತು ನೌಕರವರ್ಗದಲ್ಲಿ ಒಂದು ರೀತಿಯ ಹೊಂದಾಣಿಕೆ ಇಲ್ಲದಿರುವುದು ನಮ್ಮ ಗಮನಕ್ಕೆ ಬಂತು. ಆದರೂ ಕೂಡ ಎಷ್ಟು ಲಕ್ಷ ಪುಸ್ತಕಗಳನ್ನು ಒದಗಿಸಿಕೊಡಬೇಕೋ ಅವನ್ನು ಬೇರೆ ಮುದ್ರಣಾಲಯದಿಂದ ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅಲ್ಲದೆ 9ನೇ ತರಗತಿ ಮತ್ತು 5ನೇ ತರಗತಿಗೆ ಕೆಲವು ಪುಸ್ತಕಗಳ ಕೊರತೆ ಇತ್ತು. ಕೆಲವು ಖಾಸಗೀ ಪುಸ್ತಕ ಭಂಡಾರಿಗಳು ಇಲ್ಲಿ ತೆಗೆದುಕೊಂಡು ಬೇರೆ ಕಡೆ ಮಾರಾಟಮಾಡಿ.. ತಾತ್ಕಾಲಿಕವಾದಂಥ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಕ್ರಿಯೇಟ್ ಮಾಡಿರುವುದೂ ಕೂಡ ನಮ್ಮ ಗಮನಕ್ಕೆ ಬಂದಿದೆ. ಇಷ್ಟು ಮಾತ್ರ ಹೇಳುತ್ತೇನೆ. ಈ ವರ್ಷ ಆದಂಥ ತೊಂದರೆಯನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದರಲ್ಲೂ ಉರ್ದು ಮತ್ತು ಬೇರೆ ಭಾಷೆಗಳ ಪುಸ್ತಕಗಳನ್ನು ಒದಗಿಸಿಕೊಡುವುದರಲ್ಲಿ ತೊಂದರೆಯಾಯಿತು. ಆದುದರಿಂದ ಖಾಸಗೀ ಮುದ್ರಣಾಲಯದಲ್ಲಿ ಮುದ್ರಿಸಬೇಕಾಗಿ ಬಂತು. ನಮ್ಮಲ್ಲಿ ಪಠ್ಯಪುಸ್ತಕಗಳನ್ನು ಮುದ್ರಣ ಮಾಡುವುದಕ್ಕೆ ವ್ಯವಸ್ಥೆ ಮೈಸೂರಿನಲ್ಲಿತ್ತು. ಆ ಒಂದು ಕೇಂದ್ರ ಮುದ್ರಣಾಲಯ ಪಠ್ಯಪುಸ್ತಕಗಳಿಗೋಸ್ಕರ

ಇತ್ತು. ಈಗ ಆರೀತಿ ಒಬ್ಬ ಅಧಿಕಾರಿಯನ್ನು ನೇಮಿಸಿ ಅವರ ಸುಪರ್ದಿನಲ್ಲಿ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಬೇರೆಕಡೆ ಹೋಗದಹಾಗೆ ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ನಮ್ಮಲ್ಲಿರತಕ್ಕ ಸೌಲತ್ತನ್ನು ಉಪಯೋಗಿಸಿ. ನಮ್ಮವರಿಗೆ ಕೆಲಸಗಳನ್ನು ಕೊಡಬೇಕು ಎಂದು ಇದ್ದೇವೆ. ಗುಲ್ಬರ್ಗಾದಲ್ಲಿ ಹೊಸದಾಗಿ ಸ್ಥಾಪನೆಯಾಗಿರತಕ್ಕ ಸಂಸ್ಥೆ ಇದೆ.

ಸೆಟಲೈಟ್ ಟೌನ್‌ನಲ್ಲಿರತಕ್ಕದ್ದನ್ನು ಉಪಯೋಗಿಸಿಕೊಂಡು ಅಲ್ಲಿ ಇನ್ನುಮುಂದೆ ಪಠ್ಯಪುಸ್ತಕಗಳ ಮುದ್ರಣದ ಕೆಲಸವನ್ನು ಮಾಡಬೇಕು ಎನ್ನತಕ್ಕ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಬಹುಶಃ ಈ ದಿಶೆಯಲ್ಲಿ ಕೆಲಸಕಾರ್ಯಗಳು ಆಗುತ್ತವೆ ಎನ್ನತಕ್ಕದ್ದನ್ನು ನಾನು ಹೇಳಬಯಸುತ್ತೇನೆ. ಇನ್ನು, ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಆಯಾಗಳು ಏನಿದ್ದಾರೆ, ಅವರಿಗೆ 50 ರೂಪಾಯಿಗಳನ್ನು ಕೊಡುತ್ತಿದ್ದಾರೆ, ಇದು ಕಡಿಮೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಎಷ್ಟೋ ಜನ ಈ ಕೆಲಸವನ್ನಾದರೂ ಕೊಡಿಸಿ ಎಂದು ಕೇಳಿ ಕೊಂಡು ಬರುತ್ತಿರುತ್ತಾರೆ. ಅದನ್ನು ಹೆಚ್ಚಿಗೆ ಮಾಡುವ ನೀತಿ ನಮ್ಮ ಕೈಯಲ್ಲಿ ಇಲ್ಲ. ಕೇಂದ್ರ ಸರ್ಕಾರದ ಆಶ್ರಯದಲ್ಲಿ ನಡೆಯುತಕ್ಕ ಶಾಲೆಗಳಲ್ಲೂ ಕೂಡ ಅಷ್ಟೇ ಹಣವನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಅವರಿಗೆ ಬೇರೆಯವರ ತರಹ ಏತಕ್ಕೆ ಸಂಬಳ ರೀತಿಯಾಗಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕೇಳಿದರು. ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇನ್ನು ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳ ಬಗ್ಗೆ ಆಗಲೇ ಹೇಳಿದ್ದೇನೆ. ಕಡಿಮೆ ಖರ್ಚಿನಲ್ಲಿ ಅಂದಾಜುಗಳನ್ನು ತಯಾರು ಮಾಡಿಸಿ ಎಲ್ಲಾ ಹಳ್ಳಿಗಳಲ್ಲೂ ಪ್ರಾಥಮಿಕ ಶಾಲೆಗಳನ್ನು ನಡೆಸುವುದಕ್ಕೆ, ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತೆ ಖಾಸಗೀ ಶಾಲೆಗಳವರು 50 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಲೇಬೇಕು. ಮತ್ತೆ ಸರ್ಕಾರೀ ಗ್ರಾಂಟ್‌ನ್ನು ಕೊಡತಕ್ಕದ್ದರ ಬಗ್ಗೆ 5 ವರ್ಷಕ್ಕೆ ಏರಿಸಿದ್ದೇವೆಂದು ಕೆಲವರು ಹೇಳಿದರು. ಆದರೆ ಅದನ್ನು ನಾವು 5 ವರ್ಷಕ್ಕೆ ಹೆಚ್ಚಿಸಿಲ್ಲ. ನಾವು ಇರುವುದನ್ನೇ ಮುಂದುವರಿಸಿದ್ದೇವೆ. ಅದನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. 1981ನೇ ಇಸವಿಯಲ್ಲಿ ಅದು 3 ವರ್ಷಕ್ಕೆ ಇತ್ತು. ಅನಂತರ ಒಂದು ಸರ್ಕಾರಿ ಆಜ್ಞೆ ಹೊರಡಿಸಿ ಅದನ್ನು 5 ವರ್ಷಕ್ಕೆ ಎಕ್ಸ್‌ಟೆಂಡ್ ಮಾಡಿದ್ದಾರೆ. ಅದಾದ ಮೇಲೆ 5 ವರ್ಷ ಆಗಿರತಕ್ಕವರಿಗೆ ಎಂಥವರಿಗೆ ಗ್ರಾಂಟ್‌ನ್ನು ಕೊಡಬೇಕೋ ಅವರಿಗೆ ಕೊಡುತ್ತಿದ್ದೇವೆ. ಸಂಬಳ ಸಾರಿಗೆಯನ್ನು ಮತ್ತಿತರ ಎಲ್ಲಾ ಸೌಲಭ್ಯಗಳನ್ನು ಶಾಲೆಗಳವರಿಗೆ ಕೊಟ್ಟು ಅದರ ಪೂರ್ಣ ಮೇಲ್ವಿಚಾರಣೆಯನ್ನೇ ಆ ಖಾಸಗೀ ಶಾಲೆಯವರೇ ವಹಿಸಿಕೊಳ್ಳುತ್ತೇವೆಂದರೆ ಅದರ ಪೂರ್ಣವಾದ ಹಿಡಿತವನ್ನು ಅವರಿಗೇ ನಾವು ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ. ಇವತ್ತು ಶಿಕ್ಷಕರ ದಿನಾಚರಣೆ. ಮಾನ್ಯ ಸಚಿವರ ಬೇಡಿಕೆ ಕೂಡ ಇವತ್ತೇ ಬಂದಿದೆ. ಹೊಸ ಸರ್ಕಾರ ಬಂದ ಮೇಲೆ ಸರ್ಕಾರದವರು ಏನಾದರೂ ಶಿಕ್ಷಕರಿಗೆ ಕೊಡುಗೆ ಕೊಡುತ್ತಾರೆಯೋ ? ಮತ್ತೆ ಕೇಂದ್ರ ಸರ್ಕಾರದವರು ವಯೋಮಿತಿಯನ್ನು 60ಕ್ಕೆ ಏರಿಸಿದ್ದಾರೆ. ಅದೇ ರೀತಿಯಾಗಿ ಇಲ್ಲಿಯೂ ಮಾಡುತ್ತೀರಾ ? ಮತ್ತೆ ಅವರಿಗೆ 15 ಸಾವಿರ ರೂಪಾಯಿಗಳವರೆಗೆ ಮೆಡಿಕಲ್ ಅಲೋಯನ್ಸ್ ಕೊಡುತ್ತಿದ್ದಾರೆ. ಅದೇ ರೀತಿಯಾಗಿ ತಾವೂ ಕೊಡುತ್ತೀರಾ ? ಮತ್ತು ಸರ್ವಿಸ್ ಆಗಿ, ಸ್ಟಾಗ್ನೇಟ್ ಆಗಿರತಕ್ಕವರಿಗೆ ಒಂದೊಂದು ಇನ್‌ಕ್ರಿಮೆಂಟ್ ಕೊಡತಕ್ಕದ್ದರ ಬಗ್ಗೆ ಯೋಚನೆ ಮಾಡುತ್ತೀರಾ? ಕೊನೆಯದಾಗಿ, ಹಂಗಾಮಿಯಾಗಿ ಟೀಚರ್ಸ್‌ನ್ನು ತೆಗೆದುಕೊಂಡಿದ್ದೀರಿ. ಅವರನ್ನು ಕಳೆದ ವರ್ಷ ಮುಂದುವರಿಸಿದ್ದೀರಿ. ಅವರನ್ನೇ ಪುನಃ ತೆಗೆದುಕೊಳ್ಳುವಾಗ, ಇಂಟರ್‌ವ್ಯೂ ಮಾಡುವಾಗ ಮಾರ್ಕೆಟ್ ವ್ಯಾಪಾರ ಆಗದಂತೆ ನೋಡಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎಂ. ಎಸ್. ಕೃಷ್ಣನ್.—ಹಂಗಾಮಿ ಉಪಾಧ್ಯಾಯರನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. 7,600 ಜನ ಅವರು ಇದ್ದಾರೆ. ಅವರನ್ನು ಮುಂದುವರೆಸುತ್ತೇವೆ. ಅವರ ಬಗ್ಗೆ ಕಾಳಜಿ ಇದೆ. ಕಳಕಳಿ ಇದೆ ಎಂದು ಹೇಳುತ್ತಿದ್ದೀರಿ ಇವರಿಗೆ ಮಾತ್ರ 50 ಪರ್ಸೆಂಟ್ ರಿಜರ್ವ್ ಇಟ್ಟಿದ್ದೀರಾ ? ಅಥವಾ ಸ್ಟೈಪೆಂಡರಿ ಯವರನ್ನೂ ಸಹ ಸೇರಿಸಿ ಇಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇಬ್ಬರನ್ನೂ ಸೇರಿಸಿ 50 ಪರ್ಸೆಂಟ್ ಇಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಹಂಗಾಮಿ ಉಪಾಧ್ಯಾಯರುಗಳಿಗೆ ಕೇವಲ 25 ಪರ್ಸೆಂಟ್ ಸಿಗುತ್ತದೆ, ಸ್ಟೈಪೆಂಡರಿಯವರಿಗೆ 25 ಪರ್ಸೆಂಟ್ ಸಿಗುತ್ತದೆ. ಅಲ್ಲಿಗೆ ಹಂಗಾಮಿಯಲ್ಲಿರತಕ್ಕ 7,600 ಜನರಲ್ಲಿ 2,400 ಜನರಿಗೆ ಮಾತ್ರ ಕೆಲಸ ಸಿಕ್ಕಹಾಗಾಗುತ್ತದೆ. ಮಿಕ್ಕವರನ್ನು ಹೊರಗಡೆ ಹಾಗೆಯೇ ಬಿಟ್ಟು ಬಿಟ್ಟರೆ ತಾವು ಕೊಟ್ಟ ಭರವಸೆ ಏನಾಗುತ್ತದೆ ? ಇದು ಬಹಳ ಮುಖ್ಯವಾದ ಪ್ರಶ್ನೆ ಇದೆ. ತಾವು ಎಲ್ಲರನ್ನೂ ಖಾಯಂ ಮಾಡುತ್ತೇವೆಂದು ಹೇಳಿರುವಾಗ ಈ ರೀತಿಯಾದ ನಿರ್ಣಯವನ್ನು ತೆಗೆದುಕೊಂಡರೆ ಬಹಳ ಅನ್ಯಾಯವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಸ್ಟೈಪೆಂಡರಿ ಗ್ರಾಜ್ಯುಯೇಟ್ಸ್ ಹೈಕೋರ್ಟಿಗೆ ಹೋಗಿದ್ದರು. ಅಲ್ಲಿಯ ಆದೇಶದ ಮೇರೆಗೆ ನಾವು ಮಾಡಿದ್ದೇವೆ. ಅದರಲ್ಲಿ ಏನೂ ಬದಲಾವಣೆ ಮಾಡಿಲ್ಲ. 50 ಪರ್ಸೆಂಟ್‌ನಲ್ಲಿ ಹಂಗಾಮಿಯವರು ಮತ್ತು ಸ್ಟೈಪೆಂಡರಿಯವರೂ ಸಹ ಬರುತ್ತಾರೆ. ಅವರಲ್ಲಿ ಟಿ. ಸಿ. ಹೆಚ್. ಕ್ವಾಲಿಫಿಕೇಷನ್, ಬಿ. ಎಡ್. ಮಾಡಿರತಕ್ಕವರೂ ಬರುತ್ತಾರೆ, ಇದನ್ನೆಲ್ಲಾ ನೋಡಿಯೇ ಹಂಗಾಮಿ ಟೀಚರ್ಸ್ ಅನ್ನಾಗಿ ನೇಮಿಸಿ

ಕೊಂಡಿದ್ದಾರೆ. ಇದರಿಂದ ಬಹುಶಃ ಹೆಚ್ಚು ಕಡಿಮೆ ಟೀಚಿಂಗ್ ಕೆಲಸವನ್ನೇ ಅವರು ಮಾಡುತ್ತಿರುವುದರಿಂದ, ಅವರಿಗೆ ಇನ್ನು ಮುಂದೆಯೂ ಸಹ ಕೆಲಸ ಸಿಗಬಹುದು. ಇದನ್ನು ಆ ಸಮಿತಿಯವರು ಗಮನದಲ್ಲಿಟ್ಟು ಕೊಂಡು ಅವರನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಜೆ. ಡಿ. ಸೋಮಪ್ಪ.—ಡಿ.ಎಲ್.ಆರ್.ಸಿ.ಯಲ್ಲಿ ದುಡ್ಡು ತೆಗೆದುಕೊಳ್ಳದ ಹಾಗೆ ನೋಡಿ ಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಂಥಾದ್ದು ನನ್ನ ಗಮನಕ್ಕೆ ಬಂದರೆ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಸುಮ್ಮನೇ ಆರೋಪಣೆ ಮಾಡುವುದು ಬೇಡ. ಈ ರೀತಿಯಾಗಿ ಬರೀ ಆರೋಪಣೆ ಮಾಡುವುದರಲ್ಲಿ ತೃಪ್ತಿಪಟ್ಟುಕೊಳ್ಳದೆ ನಿರ್ದಿಷ್ಟವಾಗಿ ಇಂಥಿಂಥವರು ದುಡ್ಡು ತೆಗೆದು ಕೊಂಡಿದ್ದಾರೆಂದು ಹೇಳಲಿ. ಸ್ಪೆಷಲ್ ವಿಜಿಲೆನ್ಸ್ ಕೊಟ್ಟು ಅಂಥವರನ್ನು ಹಿಡಿಸುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಶಿಕ್ಷಕರ ದಿನಾಚರಣೆಯ ದಿವಸ ಸರ್ಕಾರದವರ ಕೊಡುಗೆ ಏನು ಎಂಬುದನ್ನು ಮಾನ್ಯ ಸಚಿವರು ಹೇಳಲಿಲ್ಲ. ಇನ್ನು ಹೈಸ್ಕೂಲ್ ಟೀಚರ್ಸ್ ಅನ್ನು ಪಿ. ಎಸ್. ಸಿ. ಮುಖಾಂತರ ನೇಮಕ ಮಾಡುವವರೆಗೆ ಟೆಂಪರರಿಯಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಅಷ್ಟನ್ನಾದರೂ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ನೇಮಕಾತಿ ಮಾಡುವ ಬಗ್ಗೆ ನಾವು 4 ಡಿವಿಜನ್‌ಗಳಲ್ಲಿ 4 ಸಮಿತಿಗಳನ್ನು ಮಾಡಬೇಕೆಂದು ಇದ್ದೇವೆ. ಅದೂ ಕೂಡ ನಮ್ಮ ಸಭೆಯ ಮುಂದಿರುತ್ತದೆ. ಇನ್ನು ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಅಡಚಣೆಗಳೇನಿವೆ ಎಂಬುದನ್ನು ವಿವರಿಸಿದ್ದೇನೆ. ಪ್ರೌಢಶಾಲೆಗಳಲ್ಲಿ ಮತ್ತು ಜೂನಿಯರ್, ಹಿರಿಯ ಕಾಲೇಜ್‌ಗಳಲ್ಲಿ ಹಂಗಾಮಿಯಾಗಿ ಕೆಲಸ ಮಾಡತಕ್ಕವರು ಯಾರಿದ್ದಾರೆ, ಅವರನ್ನು ತೆಗೆಯಬಾರದು ಎನ್ನುವ ಉದ್ದೇಶದಿಂದಲೇ ಮುಂದುವರಿಸಿದ್ದೇವೆ. ಈಗ ಯಾರು ಯಾರು ಅರ್ಜಿ ಹಾಕಿಕೊಂಡಿದ್ದಾರೆ ಅವರ ಕೇಸ್‌ಗಳನ್ನೆಲ್ಲಾ ಸಮಿತಿಯವರು ಪರಿಶೀಲಿಸುತ್ತಾರೆ. ಇವರ ಸೇವೆ ನಮಗೆ ಅವಶ್ಯಕವಾಗಿರುವುದರಿಂದ ಅದನ್ನೂ ಸಹ ಅವರು ಗಮನದಲ್ಲಿಟ್ಟುಕೊಳ್ಳುತ್ತಾರೆ. ಇನ್ನು ಖಾಸಗೀ ಶಾಲೆಗಳಲ್ಲಿ ಕೆಲಸ ಮಾಡತಕ್ಕವರನ್ನೂ ಕೂಡ ಟರ್ಮಿನೇಟ್ ಮಾಡದೇ ಉಪಾಧ್ಯಾಯರ ಮೇಲೆ ಕರುಣೆ ಇಡಲಿ ಎಂದು ಹೇಳಬಯಸುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಚಯ್ಯನವರ ಮೇಲೆ ನನಗೆ ಸಾಕಷ್ಟು ನಂಬಿಕೆ ಇದೆ. ಅವರು ಒಬ್ಬ ಹಿರಿಯ ರಾಜಕಾರಣಿಯಾಗಿದ್ದಾರೆ. ಅವರ ಮೇಲೆ ಸಾಕಷ್ಟು ಗುರುತರವಾದ ಜವಾಬ್ದಾರಿ ಇದೆ, ಅದನ್ನು ಅವರು ಸರಿಯಾಗಿ ನಿರ್ವಹಿಸಿಕೊಂಡು ಹೋಗುತ್ತಾರೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಇವತ್ತು ಇಲ್ಲಿ ಅವರ ಉತ್ತರವನ್ನು ನೋಡಿದರೆ ನನಗೆ ಸ್ವಲ್ಪ ಅನುಮಾನ ಬರುತ್ತಿದೆ. ಬಹುಶಃ ಅವರ ಮಂತ್ರಿಮಂಡಲದಲ್ಲಿ ಏನೋ ಸ್ವಲ್ಪ ತೊಂದರೆಯಾಗಿದೆ ಎಂದು ಕಾಣಿಸುತ್ತಿದೆ. ಏನೇ ಆದರೂ ಇವರು ನಮ್ಮ ಬೀದರ್ ಜಿಲ್ಲೆಗೆ ಅನೇಕ ಹೊಸ ಶಾಲೆಗಳನ್ನು ಮಂಜೂರು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಆದರೆ ಇವತ್ತು ನಮ್ಮಲ್ಲಿರತಕ್ಕ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇಲ್ಲ. ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್‌ಗಳಲ್ಲಿ ಕೆಲವು ಸಿಂಗಲ್ ಟೀಚರ್ಸ್ ಸ್ಕೂಲ್ ಆಗಿವೆ. ಇನ್ನು ಕೆಲವು ಹಳ್ಳಿಗಳಲ್ಲಿಯ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಿದೆ ಎಂದರೆ ಅಕಸ್ಮಾತ್ ಯಾವುದೇ ಒಬ್ಬ ಟೀಚರ್ ಅನ್ನು ಡೆಪ್ಯುಟೇಷನ್ ಮೇಲೆ ಹಾಕಿದರೆ ಆತನು ಶಾಲೆಗೆ ಬೀಗವನ್ನು ಹಾಕಿಬಿಟ್ಟು ಕೀಯನ್ನು ಕೊಟ್ಟು ಹೋಗಿಬಿಡುತ್ತಾನೆ. ಇಂಥ ಪರಿಸ್ಥಿತಿ ನಮ್ಮ ಕಡೆಯಲ್ಲಿದೆ.

ನನಗೆ ಬಂದಿರುವ ವರದಿಯ ಪ್ರಕಾರ 412 ಮಂದಿ ಶಿಕ್ಷಕರನ್ನು ನೇಮಕ ಮಾಡಿದರೆ 1972ರಲ್ಲಿ ಮಂಜೂರಾದ ಹುದ್ದೆಗಳೇನಿದ್ದವು ಅವೆಲ್ಲಾ ಭರ್ತಿಯಾಗುತ್ತವೆ. ಅಲ್ಲಿಂದ ಈಚೆಗೆ ಎಷ್ಟು ಆಗಿವೆ ಎಂಬುದನ್ನು ಅಂದಾಜು ಮಾಡಬೇಕು; ಮತ್ತು ಅವುಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ನಾವು ಕೊಡತಕ್ಕ ವಿದ್ಯಾಭ್ಯಾಸ ಮೊದಲೇ ಕಡಿಮೆ. ಅದರಲ್ಲೂ ಶಿಕ್ಷಕರಿಲ್ಲವೆಂದರೆ ಕೇಳುವುದೇ ಬೇಡ. ಆದ್ದರಿಂದ, ಇದಕ್ಕೆ ಏನಾದರೂ ಒಂದು ವಿಶೇಷ ಕಾರ್ಯಕ್ರಮ ಮಾಡಿ ಎಲ್ಲಾ ಶಾಲೆಗಳಿಗೂ ಶಿಕ್ಷಕರನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ ? ಇವತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ಹೆಣ್ಣುಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿಲ್ಲ; ಅಂಥ ಕಡೆ ಹೆಣ್ಣುಮಕ್ಕಳ ಪ್ರೌಢಶಾಲೆಗಳನ್ನು ಕೊಡಬೇಕೆಂದು ಕಳೆದ ಸಾರಿಯೇ ಮಂತ್ರಿಗಳನ್ನು ಕೇಳಿಕೊಂಡಿದ್ದೆ. ಆದರೆ ಇನ್ನೂ ಕೊಟ್ಟಿಲ್ಲ. ಅನೇಕ ಕಡೆಗಳಲ್ಲಿ ಹೆಣ್ಣುಮಕ್ಕಳ ಪ್ರೌಢಶಾಲೆಗಳಿರುವ ಕಡೆ ಇರತಕ್ಕ ಶಿಕ್ಷಕರೆಲ್ಲಾ ಗಂಡಸರೇ ಆಗಿರುತ್ತಾರೆ. ಹೆಸರಿಗೆ ಮಾತ್ರ ಹೆಣ್ಣುಮಕ್ಕಳ ಶಾಲೆಯಾಗಿರುತ್ತದೆ. ನನ್ನ ಊರಿನಲ್ಲಿ ಸಹ ಒಬ್ಬರನ್ನು ಬಿಟ್ಟರೆ ಉಳಿದ 5 ಜನ ಶಿಕ್ಷಕರು ಗಂಡಸರೇ ಇದ್ದಾರೆ. ಅಂದಾಗ ಹೆಣ್ಣುಮಕ್ಕಳ ಶಾಲೆಯನ್ನು ಮಂಜೂರ್ಮಾಡಿ ಏನು ಪ್ರಯೋಜನವಾಯಿತು ? ಆದ್ದರಿಂದ, ಆ ಕಡೆ ಹೆಚ್ಚಿನ ಗಮನ ಕೊಟ್ಟು ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ರಾಜ್ಯದಲ್ಲಿ 13 ಸಾವಿರ ಮಂದಿ ಶಿಕ್ಷಕರ ಕೊರತೆ ಇದೆ ಎಂದು ತಿಳಿದುಬಂದಿದೆ. ಆ ಜಾಗದಲ್ಲಿ 7 ಸಾವಿರ ಜನ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ, ಇನ್ನು 6 ಸಾವಿರ ಜನರನ್ನು ತುಂಬ ಬೇಕಾಗಿದೆ. 13 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಕರೆದಾಗ ಹಂಗಾಮಿಯಾಗಿ ಕೆಲಸ ಮಾಡ ತಕ್ಕವರನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—7641 ಜನರ ಪೈಕಿ 6 ಸಾವಿರ ಜನರಿಗೆ ಖಾಯಂ ಉದ್ಯೋಗ ಕೊಟ್ಟರೆ ಇನ್ನು ಒಂದು ಸಾವಿರ ಚಿಲ್ಲರೆ ಜನರನ್ನು ಏನು ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—13 ಸಾವಿರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೇನೆ. ಅವುಗಳನ್ನು ಭರ್ತಿ ಮಾಡುವಾಗ ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. ಶಾಲೆಗಳನ್ನು ಹೆಚ್ಚಿಗೆ ಮಾಡಿದ ಹಾಗೆ ಉಪಾಧ್ಯಾಯರು ಹೆಚ್ಚು ಸಂಖ್ಯೆಯಲ್ಲಿ ಬೇಕಾಗುತ್ತಾರೆ. ವರ್ಷಂಪ್ರತಿ 4–5 ಸಾವಿರ ಹುದ್ದೆಗಳು ಬೇಕಾಗುತ್ತವೆ. ಆದ್ದರಿಂದ ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ವರ್ಷ 5 ಸಾವಿರ ಹುದ್ದೆಗಳಿಗೆ ಅನುಮತಿ ಕೊಡುತ್ತೇವೆಂದು ಹೇಳಿದ್ದೇವೆ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ 18 ಸಾವಿರ ಜನ ಆಗುತ್ತಾರೆ. ಇಷ್ಟು ಜನರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಹಿಂದೆ ನವಾಬರ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವುದಕ್ಕೆ ಹೆದರುತ್ತಿದ್ದರು. ಆದರೆ ಈಗ ಅಂಥ ಪರಿಸ್ಥಿತಿ ಏನೂ ಇಲ್ಲ. ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಆಯಾಯ ಭಾಗದಲ್ಲಿರುವವರನ್ನು ನೇಮಿಸಿಕೊಂಡರೆ ವರ್ಗಾವರ್ಗಿ ತೊಂದರೆ ಬರುವುದಿಲ್ಲವೆಂದು ಸಾಧ್ಯವಾದಷ್ಟುಮಟ್ಟಿಗೆ ಸ್ಥಳೀಯರನ್ನು ಹೆಚ್ಚು ಸಂಖ್ಯೆಯಲ್ಲಿ ನೇಮಿಸಿಕೊಳ್ಳುವ ಕಡೆ ಸರ್ಕಾರ ಗಮನ ಕೊಡುತ್ತದೆಂದು ಹೇಳುತ್ತೇನೆ.

ಶ್ರೀ ವಿ. ಧನಂಜಯ ಕುಮಾರ್.—ಹೊಸ ಸರ್ಕಾರ ಬಂದಮೇಲೆ ವಿದ್ಯಾರ್ಥಿ ಮತ್ತು ಅಧ್ಯಾಪಕರ ಬಗ್ಗೆ ಇರತಕ್ಕ ಸರ್ಕಾರದ ನಿಷ್ಪತ್ತಿ ನೀತಿ ಏನು ? ನಿಮ್ಮ ನಿಷ್ಪತ್ತಿ ನೀತಿ ಏನೇ ಇರಲಿ, ಪ್ರಾಥಮಿಕ ಶಾಲೆಯಲ್ಲಿ ಒಂದೊಂದು ತರಗತಿಗೆ ಒಬ್ಬೊಬ್ಬರು ಉಪಾಧ್ಯಾಯರು, ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಒಂದೊಂದು ವಿಷಯಕ್ಕೆ ಒಬ್ಬೊಬ್ಬರು ಅಧ್ಯಾಪಕರು ಇರುವಂತೆ ವ್ಯವಸ್ಥೆ ಮಾಡಿದ್ದೀರಾ ? ಹಿಂದೆ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಆಡಳಿತದಲ್ಲಿ ಇದ್ದಂತಹ ಶಾಲೆಗಳು ಇವತ್ತು ಸರ್ಕಾರದ ಆಡಳಿತಕ್ಕೆ ಒಳಪಟ್ಟಿವೆ. ಅವುಗಳ ದುಸ್ಥಿತಿಯನ್ನು ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಉಲ್ಲೇಖಿಸಿದ್ದೇನೆ. ಇವತ್ತು ಆ ಶಾಲೆಗಳು ಅನಾಥ ಶಾಲೆಗಳಾಗಿವೆ. ಆ ಕಡೆ ಮುನಿಸಿಪಾಲಿಟಿಗಳೂ ನೋಡುತ್ತಿಲ್ಲ, ಸರ್ಕಾರವೂ ನೋಡುತ್ತಿಲ್ಲ: ಇದರ ಬಗ್ಗೆ ಏನು ಹೇಳುತ್ತೀರಿ ? ಇವತ್ತು ಶಾಲಾ ಕಾಲೇಜುಗಳು ಪ್ರಾರಂಭವಾಗಿ 3–4 ತಿಂಗಳು ಕಳೆದರೂ, ಪಠ್ಯಪುಸ್ತಕಗಳನ್ನು ಇದುವರೆಗೆ ಒದಗಿಸಿಲ್ಲ. ಇದಕ್ಕೆ ಆಗಿರುವ ತೊಂದರೆ ಏನೆಂದರೆ ಸೆಂಟ್ರಲ್ ಮ್ಯಾನೇಜ್‌ಮೆಂಟ್ ಸಿಸ್ಟಂ ಅನ್ನು ಮಾಡಿರುವುದು. ಒಂದೇ ಕಡೆ ಪಠ್ಯಪುಸ್ತಕಗಳನ್ನು ಮುದ್ರಿಸಿ ಒದಗಿಸುವ ವ್ಯವಸ್ಥೆ ಮಾಡಿದ್ದಾರೆ. ಇದನ್ನು ಕೈಬಿಟ್ಟು ಕನಿಷ್ಟ ಪಕ್ಷ ಅಲ್ಲಲ್ಲಿ ಒಂದೊಂದು ವಿಭಾಗ ಮಾಡಿ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸಿಕೊಡುವ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದನ್ನು ಪರ್ಯಾಲೋಚನೆ ಮಾಡುತ್ತೇನೆ. ಎರಡನೆಯದಾಗಿ, ಮುನಿಸಿಪಾಲಿಟಿಯವರ ಮತ್ತು ಕಾರ್ಪೊರೇಷನ್‌ನವರ ಶಾಲೆಗಳನ್ನು ಅವರೂ ಕೇಳುತ್ತಿಲ್ಲ, ನಾವೂ ಕೇಳುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ಕಟ್ಟಡಗಳನ್ನು ಕಟ್ಟಿಸತಕ್ಕದ್ದು ಮತ್ತು ದುರಸ್ತಿ ಮಾಡಿಸತಕ್ಕದ್ದನ್ನು ಚುನಾಯಿತರಾಗಿ ಬಂದಿರತಕ್ಕ ಪ್ರತಿನಿಧಿಗಳು ಗಮನ ಹರಿಸಿ ನಗರಸಭೆ ಮತ್ತು ಪುರಸಭೆ ವತಿಯಿಂದ ಮಾಡಿಬೇಕು. ಅವರಿಗೆ ಮಾಡಲಿಕ್ಕೆ ಆಗದಿದ್ದರೆ ಅದಕ್ಕೆ ಮೂರನೇ ಒಂದು ಭಾಗ ಹಣವನ್ನು ಸರ್ಕಾರ ಒದಗಿಸಿಕೊಡುತ್ತದೆಂದು ಹೇಳುತ್ತೇನೆ. ಅದು ಸರ್ಕಾರದ ನೀತಿ. ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ರೇಷಿಯೋ ನೀತಿ ಬಗ್ಗೆ ಕೇಳಿದ್ದಾರೆ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 50 ಮಕ್ಕಳು ಇದ್ದರೆ ಒಬ್ಬರು ಉಪಾಧ್ಯಾಯರನ್ನು ಕೊಡಬೇಕೆಂದು ಮಾಡಿದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಇದಕ್ಕಿಂತ ಹೆಚ್ಚಿಗೆ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರತಿಯೊಂದು ತರಗತಿಗೂ ಒಬ್ಬೊಬ್ಬ ಉಪಾಧ್ಯಾಯರನ್ನು ಕೊಡಬೇಕೆಂದರೆ ಒಂದು ಶಾಲೆಯಲ್ಲಿ 40 ಮಕ್ಕಳಿದ್ದು ಒಂದೊಂದು ತರಗತಿಯಲ್ಲಿ ಹತ್ತತ್ತು ಮಂದಿ ಮಕ್ಕಳಿದ್ದರೆ ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ನೇಮಿಸುವುದಕ್ಕಾಗುವುದಿಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಅನೇಕ ಕಡೆಗಳಲ್ಲಿ ಐದೈದು ತರಗತಿಗಳನ್ನು ಒಟ್ಟಾಗಿ ಮಾಡಿ ಪಾಠ ಮಾಡುತ್ತಿದ್ದಾರೆ. ಒಂದೊಂದು ತರಗತಿಗೆ ಬೇರೆ ಬೇರೆ ಪಾಠ ಹೇಳತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅಂಥ ಶಾಲೆಗಳನ್ನು ಮುಚ್ಚಿ.

ಶ್ರೀ ಬಿ. ರಾಚಯ್ಯ.—ಅವರ ಕ್ಷೇತ್ರಕ್ಕೆ ಶಾಲೆ ಬೇಕಾಗುತ್ತದೆ. ಆದ್ದರಿಂದ ಮುಚ್ಚಿ ಎಂದು ಹೇಳುವುದು ಸರಿಯಲ್ಲ. ಮಂಗಳೂರು ಜಿಲ್ಲೆಯವರು ವಿದ್ಯೆಯಲ್ಲಿ ಬಹಳ ಮುಂದುವರಿದಿದ್ದಾರೆಂದು ತಿಳಿದುಕೊಂಡಿದ್ದೇನೆ. ಆದರೆ ಹಳ್ಳಿಗಳ ಕಡೆ ನೋಡಿದಾಗ ಅಂಥ ಶಾಲೆಗಳ ಅವಶ್ಯಕತೆ ಬಹಳ ಇದೆ. ಆದ್ದರಿಂದ, ಕೊಟ್ಟ ಶಾಲೆಯನ್ನು ಮುಚ್ಚಿ ಎನ್ನುವುದಕ್ಕೆ ಬದಲಾಗಿ ಒಬ್ಬರ ಜೊತೆಗೆ ಇನ್ನೊಬ್ಬರು ಶಿಕ್ಷಕರನ್ನು ಕೊಡಿ ಎನ್ನಬಹುದು ಚಿಕ್ಕ ಪುಟ್ಟ ಶಾಲೆಗಳಿಗೆ ಇಬ್ಬರು ಶಿಕ್ಷಕರನ್ನು ಕೊಡಿ ಎಂದು ಹೇಳಿದ್ದೇವೆ. ನಿಮ್ಮ ಕ್ಷೇತ್ರದ ಒಂದು ಭಾಗದಲ್ಲಿ 15 ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇದ್ದಾರೆ. ಅದು ಟ್ರೈಬಲ್ ಏರಿಯವಾದದ್ದರಿಂದ ಅಂಥ ಕಡೆ ಇರತಕ್ಕ ಶಾಲೆಗಳನ್ನು ಮುಚ್ಚುವುದಕ್ಕಾಗುವುದಿಲ್ಲ. ಅಂಥದಕ್ಕೆ ರಿಯಾಯಿತಿ ಕೊಡಬೇಕಾಗುತ್ತದೆ. ಇನ್ನೊಂದು ಕಡೆ 80 ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇದ್ದಾರೆ. ಬೆಂಗಳೂರು ಮತ್ತಿತರ ಕಡೆಗಳಲ್ಲೂ ಅಂಥ ಪರಿಸ್ಥಿತಿ ಇದೆ. ಇದನ್ನು ಸರಿದೂಗಿಸುವುದಕ್ಕೆ ನ್ಯಾಯಾಲಯದವರು ಹಂಗಾಮಿಯಾಗಿ

ನೇಮಿಸುವುದು ಬೇಡವೆಂದರೂ ತಾವು ಮಧ್ಯವರ್ತಿ ಮಾಡಿ ಒಂದು ಒಪ್ಪಂದ ಮಾಡಿಕೊಂಡು ನೇಮಕ ಮಾಡುತ್ತಿದ್ದೇವೆ. ಹಿಂದಿನಿಂದ ಮಾಡುತ್ತಿದ್ದರೆ ಈ ರೀತಿ ಆಗುತ್ತಿರಲಿಲ್ಲ.

(ಗೊಂದಲ)

ಇವತ್ತಿನ ದಿವಸ ನಾವು ಈ ರೀತಿ ಮಾಡಿ ಶಿಕ್ಷಣ ಕೊಡುತ್ತಿದ್ದೇವೆ. 1:50ರ ಪ್ರಮಾಣದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇರಬೇಕೆಂದು ಮಾಡಿ ಅದನ್ನು ಕಾರ್ಯಗತ ಮಾಡುತ್ತಿದ್ದೇವೆ.

SRI MANIKRAO PATIL ,—Sir, the B.J.P. Members are the participants of the Government and they are responsible people. They should not consume more time.

ಶ್ರೀ ಎನ್. ಚಿಕ್ಕೇಗೌಡ.—ಈಗಾಗಲೇ ಅನೇಕ ಸದಸ್ಯರು ತಮ್ಮ ಮೂಲಕ ಮಂತ್ರಿಗಳನ್ನು ಕೇಳಿದ್ದಾರೆ. ಈಗ ಶಾಲೆಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ, ಈಗಾಗಲೇ ಸೆಪ್ಟೆಂಬರ್ ತಿಂಗಳಾಗಿದೆ. ಅನೇಕ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಗೂ ಜೂನಿಯಲ್ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯೊಂದಿಗೇ ಶಾಲೆಗಳು ನಡೆಯುತ್ತಿವೆ ಮತ್ತು ಇನ್ನು ಕೆಲವೇ ತಿಂಗಳುಗಳಲ್ಲಿ ಪರೀಕ್ಷೆಗಳು ಸಮೀಪಿಸುತ್ತಿವೆ. ನನ್ನ ತಾಲ್ಲೂಕಿನಲ್ಲಿ ನಾಲ್ಕು ಸರ್ಕಾರಿ ಹೈಸ್ಕೂಲುಗಳಿವೆ. ಅಲ್ಲಿ ಒಂದು ವರ್ಷದಿಂದ ಶಿಕ್ಷಕರ ಕೊರತೆ ಇದೆ. ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಒಂದು ಹೈಸ್ಕೂಲಿನಲ್ಲಿ 12 ಜನ ಉಪಾಧ್ಯಾಯರಿರುವ ಕಡೆ ಕೇವಲ 3 ಜನ ಇದ್ದಾರೆ. ಒಬ್ಬ ಉಪಾಧ್ಯಾಯರಂತೂ ಬೆಳಗ್ಗೆಯೇ ಪಾನಮತ್ತರಾಗಿ ಬರುತ್ತಾರೆ. ಬೆಳಗ್ಗೆ ಎದ್ದ ತಕ್ಷಣ ಬೆಡ್‌ಕಾಫಿ ಕುಡಿದುಕೊಂಡು ಬಂದುಬಿಡುತ್ತಾರೆ. ಮತ್ತೆ ಅಲ್ಲೇ ತರಿಸಿಕೊಂಡು ಕುಡಿಯುವಂಥ ಮುಖ್ಯೋಪಾಧ್ಯಾಯರೂ ಇದ್ದಾರೆ. ನಾನು ಇದನ್ನು ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಯಾರಾದರೂ ಒಬ್ಬ ಡಾಕ್ಟರನ್ನು ಕರೆದುಕೊಂಡು ಹೋಗಿ ಚೆಕ್ ಮಾಡಿಸಿದರೆ ಗೊತ್ತಾಗುತ್ತದೆ. ಸ್ವಾಮಿ, ಬೆಳಗ್ಗೆಯೇ ಕುಡಿದುಕೊಂಡು ಬರುತ್ತಾರೆ, ಇಲ್ಲದಿದ್ದರೆ ತರಿಸಿಕೊಂಡು ಕುಡಿಯುತ್ತಾರೆ ಎಂದು ಅನೇಕ ವಿದ್ಯಾರ್ಥಿಗಳು ನನಗೆ ಹೇಳಿದ್ದಾರೆ. ಈ ಉಪಾಧ್ಯಾಯರ ಕೊರತೆ ಇರುವುದನ್ನು ತಪ್ಪಿಸಲು ಕೂಡಲೇ ರೆಕ್ರೂಟ್‌ಮೆಂಟ್ ಮಾಡುತ್ತೀರಾ ?

ಉಪಾಧ್ಯಕ್ಷರು.—ಜಾಗ್ರತೆ ಮಾಡಿ ಎಂದು ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ನಾನೂ ಸರ್ಕಾರದಲ್ಲಿ ಇದ್ದವನು. ನನಗೆ ಗೊತ್ತಿದೆ, ಇಲಾಖಾ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆಂದು. ಮಾನ್ಯ ರಾಚಯ್ಯನವರು ನಾನು ಎಲ್ಲಾ ಸರಿಪಡಿಸುತ್ತೇನೆ ಎಂದು ಹೇಳಬಹುದು. ಆದರೆ ಅಧಿಕಾರಿಗಳನ್ನು ನಂಬಿಕೊಂಡು ಕುಳಿತರೆ ಆಗುವುದಿಲ್ಲ. ಒಂದೆರಡು ತಿಂಗಳಲ್ಲಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ? ಎರಡನೆಯದಾಗಿ, ಇವರ ವಯೋಮಿತಿಯನ್ನು ಕೇಂದ್ರ ಸರ್ಕಾರದವರು 60 ವರ್ಷಗಳಿಗೆ ಏರಿಸಿದ್ದಾರೆ. ಅದೇ ರೀತಿ ನೀವೂ ಏರಿಸುತ್ತೀರಾ ? ಮತ್ತೆ ಅವರಿಗೆ ಮೆಡಿಕಲ್ ಅಲೋಯನ್ಸ್ 15 ರೂಪಾಯಿಗಳನು ಕೊಡುತ್ತೀರಿ. ಅದು ಸಾಕಾಗುವುದಿಲ್ಲ. ಅದನ್ನು ಜಾಸ್ತಿ ಮಾಡಬೇಕು. ಹಂಗಾಮಿ ನೌಕರರ ಬಗ್ಗೆ ಮಾನ್ಯ ಕೃಷ್ಣನ್ ಅವರು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಭರವಸೆ ಕೊಟ್ಟಂತೆ ನಡೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಚಿಕ್ಕೇಗೌಡರು ನಾನು ಉತ್ತರ ಕೊಡುವಾಗ ಇರಲಿಲ್ಲ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳುವುದಕ್ಕೆ ನಿಯಮಾವಳಿಗಳನ್ನು ತಯಾರು ಮಾಡಿ ಇಟ್ಟಿದ್ದೇವೆ. ನಮ್ಮ ರಾಜ್ಯಕ್ಕೆ ರಾಷ್ಟ್ರಪತಿಗಳು ಬಂದಿದ್ದರಿಂದ ರಾಜ್ಯಪಾಲರು ಅವರ ಜೊತೆ ಹೋಗಿದ್ದಾರೆ. ಸ್ವಲ್ಪ ದಿವಸದಲ್ಲೇ ಅವರು ಅದಕ್ಕೆ ಒಪ್ಪಿಗೆ ಕೊಡುತ್ತಾರೆ. ಹಂಗಾಮಿಯಾಗಿ ಉಪಾಧ್ಯಾಯರನ್ನು ನೇಮಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಶಿಕ್ಷಕರ ವಯೋಮಿತಿಯನ್ನು ಏತಕ್ಕೆ ಏರಿಸುವುದಿಲ್ಲ ಎಂದು ಕೇಳಿದ್ದಾರೆ. ಇದು ಸಾರ್ವಜನಿಕವಾಗಿ ಎಲ್ಲ ಇಲಾಖೆಗಳಲ್ಲೂ ಇರುವ ಪ್ರಶ್ನೆ. ಆದರೆ ಈಗ ಶಿಕ್ಷಕರಿಗೆ ಅಭಾವವಿರುವುದರಿಂದ ಈ ವರ್ಷದ ಮಧ್ಯದಲ್ಲಿ 55 ವರ್ಷವಾಗಿ ನಿವೃತ್ತರಾಗುವ ಉಪಾಧ್ಯಾಯರನ್ನು ವರ್ಷದ ಕೊನೆಯವರೆಗೂ ಮುಂದುವರೆಸುತ್ತೇವೆ. ಪಾನಮತ್ತರಾಗಿ ಬರುವ ಉಪಾಧ್ಯಾಯರ ಬಗ್ಗೆ ಹೇಳಿದ್ದಾರೆ. ಪಾನನಿರೋಧದಲ್ಲಿ ನನಗೆ ಹಿಂದೆ ಏನು ಕಳಕಳಿ ಇತ್ತು, ಈಗ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತು. ಅಂಥ ಉಪಾಧ್ಯಾಯರಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಪರಿಸರವೇ ಹಾಗಿರುವಾಗ ಅವರನ್ನು ಅಲ್ಲಿಂದ ತೆಗೆದು ಇನ್ನೊಂದು ಶಾಲೆಗೆ ಹಾಕಿದರೆ ಅಲ್ಲೂ ಕೂಡ ಅವರು ಅದೇ ಕೆಲಸ ಮಾಡುತ್ತಾರೆ. ನಮ್ಮ ನಿಯಮಾವಳಿ ಪ್ರಕಾರ ಪಾಠಶಾಲೆಯಲ್ಲಿರುವಾಗ ಕುಡಿಯಬಾರದು. ಒಂದು ವೇಳೆ ಆ ರೀತಿ ಅವರು ಕುಡಿದು ಬರುತ್ತಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ. ಶಿಕ್ಷಕರ ಕೊರತೆ ಎಲ್ಲಾ ಹಂತಗಳಲ್ಲಿದೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ರಮ ತೆಗೆದುಕೊಳ್ಳುವುದು ತಡವಾಗಿದೆ. ಆದರೂ ಮಕ್ಕಳಿಗೆ ತೊಂದರೆಯಾಗದಂತೆ ಪಾಠ ಪ್ರವಚನ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಮಂತ್ರಿಗಳು ಬಹಳ ದಕ್ಷರು ಮತ್ತು ಪ್ರಾಮಾಣಿಕರು. ವಿಶ್ವ ವಿದ್ಯಾನಿಲಯದ ಬಗ್ಗೆ ಹೇಳುವಾಗ ಮಾತೆತ್ತಿದರೆ ಅದು ಸ್ವಾಯತ್ತ ಸಂಸ್ಥೆ ಎಂದು ಹೇಳುತ್ತಾರೆ. ಆದರೆ

ಅಲ್ಲಿ ಶೇಕಡ 18 ರಷ್ಟು ಮೀಸಲಾತಿ ಪ್ರಕಾರ ನೇಮಕಾತಿಗಳು ಆಗಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ರೋಸ್ಟರ್ ಸಿಸ್ಟಮ್ ಜಾರಿಗೆ ತಂದಿಲ್ಲ. ಅನೇಕ ಇಲಾಖೆಗಳಲ್ಲಿ ಮೀಸಲಾತಿ ಪ್ರಕಾರ ನೇಮಕ ಮಾಡಿಕೊಂಡಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ? ಹರಿಜನ ಗಿರಿಜನರಿಗೆ ಹಣ ಕೊಡುತ್ತಿದ್ದರೂ ಬೇರೆಯವರು ಅವರ ಹೆಸರು ಹೇಳಿಕೊಂಡು ಹಣ ದುರುಪಯೋಗ ಮಾಡುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಹೇಳಬೇಕು. ಹಳ್ಳಿ ಶಾಲೆಗಳಲ್ಲಿ ಶಾಲೆಗಳಿದ್ದರೂ ಉಪಾಧ್ಯಾಯರು ಇರುವುದಿಲ್ಲ. ಕೆಲವು ಉಪಾಧ್ಯಾಯರು ತಿಂಗಳಿಗೊಂದು ಸಲ ಬಂದು ಸೈನ್ ಹಾಕಿ ಹೋಗುತ್ತಾರೆ. ಸಾರಾಯಿ, ಸೇಂದಿ ಕುಡಿದು ಉಪಾಧ್ಯಾಯರು ಬರುವುದು ನನ್ನ ಕ್ಷೇತ್ರದಲ್ಲಿಯೂ ನಡೆದಿದೆ. ಉಪಾಧ್ಯಾಯರನ್ನು ಶಿಸ್ತಿನ ಸಿಪಾಯಿಗಳಾ ಮಾಡಬೇಕು. ಅವರು ಆ ರೀತಿ ಆದರೆ ಮಕ್ಕಳು ಒಳ್ಳೆಯ ಬುದ್ಧಿ ಕಲಿತುಕೊಳ್ಳುತ್ತಾರೆ. ಉಪಾಧ್ಯಾಯರನ್ನು ಶಿಸ್ತಿನಲ್ಲಿಡುವುದಕ್ಕೆ ಒಂದು ಸ್ಕ್ವಾಡ್ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕಾನೂನನ್ನು ಪಾಲಿಸಿ ಎಂದು ವಿಶ್ವವಿದ್ಯಾನಿಲಯದವರನ್ನು ಕೇಳಿದ್ದೇವೆ. ಸರ್ಕಾರಿ ಪ್ರತಿನಿಧಿಗಳು ಅಲ್ಲಿ ಯಾರು ಇರುತ್ತಾರೆ ಅವರೂ ಸರ್ಕಾರದ ನಿರ್ದೇಶನವನ್ನು ಪಾಲಿಸಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡುತ್ತಾರೆ. ಮೀಸಲಾತಿ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರುವುದು ಇತ್ತೀಚೆಗೆ ಕಾಣಲಿಲ್ಲ. ಯಾವತ್ತಿನಿಂದ ನಿರ್ದೇಶನ ಕೊಟ್ಟಿದ್ದೇವೋ ಅಲ್ಲಿಂದೀಚೆಗೆ ಪಾಲಿಸಿಕೊಂಡು ಬಂದಿದ್ದಾರೆ. ಒಂದು ವೇಳೆ ಲೋಪದೋಷವಿದ್ದರೆ ಸಂದರ್ಭ ಬಂದಾಗ ಚರ್ಚೆ ಮಾಡಬಹುದು. ಖಾಸಗೀ ಶಾಲೆಯಲ್ಲಿ ಹರಿಜನ ಗಿರಿಜನರ ಹೆಸರನ್ನು ಉಪಯೋಗಿಸಿಕೊಂಡು ಹಣ ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅಂಥ ಸಂದರ್ಭವನ್ನು ನನ್ನ ಗಮನಕ್ಕೆ ತಂದರೆ ವಿಚಾರಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಮೂರನೆಯದಾಗಿ ಶಾಲೆಗಳಿದ್ದರೂ ಮೇಷ್ಟ್ರು ಬರುವುದಿಲ್ಲ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು.—ಇದು ಇಡೀ ಕರ್ನಾಟಕ ರಾಜ್ಯದಲ್ಲೇ ಇರುವ ಕಾಮನ್ ಕಂಪ್ಲೇಂಟ್.

ಶ್ರೀ ಶಿವಮೂರ್ತಿ.—ಡಿ.ಡಿ.ಪಿ.ಐ. ಎಲ್ಲಾ ಶಾಮೀಲಾಗಿದ್ದಾರೆ.

ಶ್ರೀ ಬಿ. ರಾಚಯ್ಯ.—ಶಿಕ್ಷಣ ವರ್ಗವೇ ಶಾಮೀಲಾಗಿದ್ದಾರೆ ಎಂದು ಆರೋಪಣೆ ಮಾಡಿದರೆ ನಾನು ಸಹಿಸುವುದಿಲ್ಲ. ನಿರ್ದಿಷ್ಟವಾಗಿ ಇಂಥಿಂಥವರು ಶಾಮೀಲಾಗಿದ್ದಾರೆ ಎಂದು ನನ್ನ ಗಮನಕ್ಕೆ ತಂದರೆ ನಾನು ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ತಿಪ್ಪಯ್ಯ.—ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಶಿಕ್ಷಣ ಮಂತ್ರಿಗಳು ಈ ದಿಸೆಯಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದೇನೆಂದರೆ ಶಿಕ್ಷಣಕ್ಕೆ ಒಂದು ನೀತಿಯನ್ನು ರೂಪಿಸಬೇಕು. ಕೆಲವು ರಾಜಕಾರಣಿಗಳು ಸೇರಿಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಕಲುಷಿತ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಸರಿಯಾದ ನಿಯಮಾವಳಿಯನ್ನು ಜಾರಿಗೆ ತರಬೇಕು. ಅವ್ಯವಹಾರಗಳನ್ನು ತಪ್ಪಿಸಬೇಕು. ಪ್ರೈಮರಿ ಶಾಲೆಗಳಲ್ಲಿ ಜವಾನರಿಲ್ಲದಿರುವುದರಿಂದ ಮಕ್ಕಳನ್ನೇ ಆ ಕೆಲಸಗಳಿಗೆ ಉಪಯೋಗಿಸುತ್ತಾ ಇದ್ದಾರೆ. ಆದ್ದರಿಂದ ಅಲ್ಲಿ ಜವಾನರನ್ನು ನೇಮಕ ಮಾಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಕಂಟಿಂಜೆನ್ಸಿಗೆ ಕೊಡುವ ಹಣ ತುಂಬಾ ಕಡಿಮೆ. ಅದನ್ನು ಹೆಚ್ಚು ಮಾಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮಾಡುವುದಕ್ಕೆ ಆಯೋಗಗಳನ್ನು ರಚಿಸುತ್ತಾರೆ. ಅವರು ಕೊಡುವ ಉತ್ತಮವಾದ ಸಲಹೆಗಳನ್ನು ಜಾರಿಗೆ ತರುವ ಏರ್ಪಾಡು ಮಾಡಬೇಕು. ಈಗ ಒಬ್ಬ ಎ.ಇ.ಓ.ಗಳ ಕೈಕೆಳಗೆ 200–300 ಶಾಲೆಗಳು ಇದ್ದು ಅವರು ಎಲ್ಲಾ ಶಾಲೆಗಳನ್ನೂ ಇನ್ಸ್‌ಪೆಕ್ಷನ್ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಇವರಿಗೆ ಮೋಟಾರ್ ವೆಹಿಕಲ್ ಕೊಟ್ಟ ಪಕ್ಷದಲ್ಲಿ ಎಲ್ಲಾ ಶಾಲೆಗಳನ್ನೂ ಕವರ್ ಮಾಡಲು ಆಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ನಿಮ್ಮ ಸಲಹೆಗಳನ್ನು ನಾನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಅಧ್ಯಕ್ಷರೇ. ಶಿಕ್ಷಣ ಇಲಾಖೆ ಬಹಳ ದೊಡ್ಡ ಇಲಾಖೆ ಇದೆ. ಸರ್ಕಾರದವರು ಬೇರೆ ಎಲ್ಲಾ ಇಲಾಖೆಗಳಿಗೂ ವಾಹನ ಒದಗಿಸಿದ್ದಾರೆ. ಆದರೆ ಶಿಕ್ಷಣ ಇಲಾಖೆಗೆ ವಾಹನಗಳನ್ನು ಒದಗಿಸಿಕೊಟ್ಟಿರುವುದಿಲ್ಲ. ಆದುದರಿಂದ ಸರ್ಕಾರ ದಯಮಾಡಿ ಶಿಕ್ಷಣ ಇಲಾಖೆಗೆ ವಾಹನಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತದೆಯೇ ?

ಉಪಾಧ್ಯಕ್ಷರು.—ಅದನ್ನು ವಿತ್ತ ಮಂತ್ರಿಗಳು ಪರಿಶೀಲಿಸುತ್ತಾರೆ ಬಿಡಿ.

ಶ್ರೀ ಎಂ. ಸೂರ್ಯನಾರಾಯಣರಾವ್.—ಈ ದಿನ ಶಿಕ್ಷಕರ ದಿನಾಚರಣೆ ಇದೆ. ಖಾಸಗೀ ಶಾಲೆಗಳವರ ಮೇಲೆ ಕಂಟ್ರೋಲ್ ತರಲು ಎಜುಕೇಷನ್ ಬಿಲ್ ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಈಗ ವಿಧಾನ ಸೌಧದ ಮುಂದೆ ಖಾಸಗಿ ಶಾಲಾ ಉಪಾಧ್ಯಾಯರು ಕುಳಿತಿದ್ದಾರೆ. ಇವರಿಗೆ ಖಾಸಗಿ ಶಾಲೆಯಲ್ಲಿ ತಿಂಗಳಿಗೆ 50–60 ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಇವರಿಗೆ ಸಂಬಳವನ್ನು ಚೆಕ್ ಮೂಲಕ ಕೊಡುತ್ತಿಲ್ಲ. ಇವರಿಗೆ, ಇವರ ಸಂಬಳವನ್ನು ಚೆಕ್ ಮುಖಾಂತರ ಕೊಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ? ಎರಡನೆಯದಾಗಿ, ಹಳ್ಳಿಗಾಡು ಪ್ರದೇಶದಲ್ಲಿ ಒಂದು ಸಣ್ಣ ಕೊಠಡಿಯಲ್ಲಿ 100 ರಿಂದ 120 ಜನರನ್ನು

ತುಂಬಿರುತ್ತಾರೆ. ಆದ್ದರಿಂದ ಹಳ್ಳಿಗಾಡಿನ ಕಡೆ ಹೆಚ್ಚು ಹಣವನ್ನು ಒದಗಿಸಿ ಅಲ್ಲಿ ವಿಶಾಲ ಸ್ಥಳದಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚು ಕೊಠಡಿಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಅನುದಾನ ಪಡೆಯದೇ ಇರತಕ್ಕ ಶಾಲೆಗಳ ಶಿಕ್ಷಕರು ಇವತ್ತು ಅಲ್ಲಿ ಬಂದಿದ್ದಾರೆ. ಅನುದಾನ ಪಡೆಯುವ ಶಾಲೆಯ ಶಿಕ್ಷಕರಾಗಿದ್ದರೆ ಅವರಿಗೆ ಚೆಕ್ ಮೂಲಕ ಸಂಬಳ ಕೊಡಿಸುವ ವ್ಯವಸ್ಥೆ ಮಾಡಬಹುದಾಗಿತ್ತು. ಅನುದಾನ ಪಡೆಯದೇ ಶಾಲೆ ನಡೆಸುತ್ತಿರುವವರು ಈ ರೀತಿ ವರ್ತನೆ ಮಾಡುತ್ತಿರುವುದರ ಬಗ್ಗೆ ಸಭೆ ತೀರ್ಮಾನ ಮಾಡಬೇಕಾಗುತ್ತದೆ. ಈಗಾಗಲೇ ಅನುದಾನ ಪಡೆಯುತ್ತಿರತಕ್ಕ ಸುಮಾರು 20–22 ಶಾಲೆಗಳ ಮೇಲೆ ನಮ್ಮ ಇಲಾಖೆಯ ಅಧಿಕಾರಿಗಳು ಧಾಳಿ ಮಾಡಿ ಅಲ್ಲಿನ ಸಂಬಂಧಪಟ್ಟ ಪುಸ್ತಕಗಳನ್ನು ನೋಡಿಕೊಂಡು ಬಂದು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಿದ್ದಾರೆ. ಹಾಗೂ ಅನುದಾನ ಪಡೆಯದೇ ಶಾಲೆ ನಡೆಸುತ್ತಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸ್ವಲ್ಪ ತಡ ಆಗುತ್ತವೆ. ಅವರು ಇಷ್ಟು ದಿನವೇ ಕಾಯ್ದರಂತೆ, ಇನ್ನು 2–3 ತಿಂಗಳು ಅವರು ಕಾಯುವಂತೆ ಅವರಿಗೆ ತಾವೇ ಹೇಳಬೇಕು. ಇವರ ಬಗ್ಗೆ ಯಾವುದೇ ಕಾಯ್ದೆ ಇಲ್ಲ. ಇವುಗಳನ್ನು ಮುಚ್ಚಿಸುವ ಬಗ್ಗೆ ಸಾರ್ವಜನಿಕರೇ ಕ್ರಮ ತೆಗೆದುಕೊಳ್ಳಬೇಕು. ಅವರು ಕಾಯಿದೆ ಪ್ರಕಾರ ಶಾಲೆಗಳನ್ನು ನಡೆಸುತ್ತಿದ್ದೇವೆಂದು ಅವರನ್ನು ಕೇಳಿದಾಗ ಹೇಳುತ್ತಾರೆ, ಸರ್ಕಾರದಿಂದ ಏನೂ ಅನುದಾನ ಬೇಕಾಗಿಲ್ಲ ಎಂದು. ಇವರುಗಳ ಬಗ್ಗೆ ಪರೀಕ್ಷೆ ನಡೆಯುವ ಸಮಯದಲ್ಲಿ ಏನಾದರೂ ಕಡ್ಡಾಯ ಮಾಡುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಇನ್ನು ಹಳ್ಳಿಗಾಡಿನ ಕಡೆ ಶಾಲಾ ಕೊಠಡಿ ಕಟ್ಟಿಸುವ ಬಗ್ಗೆ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನವರು ಒಂದು ಮಾಡೆಲ್ ಮಾಡಿ ಕಳುಹಿಸಿದ್ದಾರೆ. ಅದರ ಪ್ರಕಾರ ಹಳ್ಳಿಗಳಲ್ಲಿ ಸಿಗುವ ಮರಗಳು ಹಾಗೂ ಮಣ್ಣನ್ನು ಪಡೆದುಕೊಂಡು ಕಡಿಮೆ ದರ್ಜೆಯ ವಿಶಾಲವಾದ ಕೊಠಡಿಗಳನ್ನು ಕಟ್ಟಬಹುದಾಗಿದೆ. ಈ ಬಗ್ಗೆ ಹಿಂದೆ ಮಾನ್ಯ ದೇವರಾಜ ಅರಸ್‌ರವರು ಈ ಯೋಚನೆ ಮಾಡಿದ್ದರು. ಇದರಿಂದಾಗಿ ವಿಶಾಲವಾದ ಜಾಗದಲ್ಲಿ ಮಕ್ಕಳು ಪಾಠ ಕೇಳಲು ಅವಕಾಶವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದೀವಟರ್.—ಅಧ್ಯಕ್ಷರೇ...

ಶ್ರೀ ಬಿ. ರಾಚಯ್ಯ.—ಇನ್ನು ವಾಹನಗಳ ಬಗ್ಗೆ ಸದಸ್ಯರು ಕೇಳಿದ್ದಾರೆ. ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳಿಗೆ ಈ ಸಾರಿ 8 ವಾಹನಗಳನ್ನು ಕೊಂಡುಕೊಂಡು ಕೊಡುವ ವ್ಯವಸ್ಥೆ ಆಗಿದೆ. ಜಿಲ್ಲಾ ಮಟ್ಟದಲ್ಲಿರುವ ಎ.ಇ.ಒ. ಗಳಿಗೆ ವಾಹನಗಳನ್ನು ಕೊಡುವ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದು ಆ ಬಗ್ಗೆ ನಾವು ಈಗ ಅವರಿಗೆ ಏನು 50 ರೂಪಾಯಿಗಳ ಭತ್ಯೆಯನ್ನು ಕೊಡುತ್ತಿದ್ದೇವೆ ಅದನ್ನು ಹೆಚ್ಚು ಮಾಡಬೇಕೆಂದು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದೀವಟರ್.—ಶಿಕ್ಷಣ ಇಲಾಖೆಯ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಲು ನನಗೆ ಅವಕಾಶ ಕೊಡಲಿಲ್ಲ. ಈಗ ಕೆಲವು ಸ್ಪಷ್ಟೀಕರಣ ಕೇಳಬಯಸುತ್ತೇನೆ. ಅಧ್ಯಕ್ಷರೇ, ಶಿಕ್ಷಣ ಇಲಾಖೆ ಇರುವುದು ಸರ್ಕಾರದ ಹಿತಾಸಕ್ತಿಗಳನ್ನು ಮುಂದುವರಿಸಿಕೊಂಡು ಹೋಗಲೋ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳ ತಾಳಕ್ಕೆ ತಕ್ಕಂತೆ ನರ್ತನ ಮಾಡುವುದಕ್ಕೆ ಇದೆಯೋ ಎಂದು ಕೇಳಬೇಕಾಗುತ್ತದೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಅಳವಂಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ನಾನು ಹೋಗಿದ್ದೆ. ಸರ್ಕಾರದಿಂದ ಕೊಟ್ಟ ಸ್ಕೂಲ್ ಕ್ಯಾನ್ಸಲ್ ಆಗಿದೆ ಎಂದು ನಾವು ಅಲ್ಲಿಗೆ ಹೋದಮೇಲೆ ತಡೆ ಆಜ್ಞೆ ಬರುತ್ತದೆ. ಇವತ್ತು ಶಿಕ್ಷಣ ಇಲಾಖೆಯ ಕಮಿಷನರ್ ಮೇಲೆ ಸಾಕಷ್ಟು ಗುರುತರವಾದ ಆಪಾದನೆಗಳು ಇವೆ. ಉದಾಹರಣೆಗೆ ಹೇಳುವುದಾದರೆ 26–6–83ರ 'ಕನ್ನಡ ಪ್ರಭಾದ' ಸಂಪಾದಕೀಯದಲ್ಲಿ ಮಾನ್ಯ ನಾರಾಯಣರಾವ್ ಹಾಗೂ ಫಿಲಿಪ್ಸ್ ಮತಿಯಾಸ್‌ರವರ ಮೇಲೆ ಖಾದ್ರಿ ಶಾಮಣ್ಣನವರು ಗುರುತರವಾದ ಆಪಾದನೆ ಮಾಡಿದ್ದಾರೆ. ಅದೂ ಅಲ್ಲದೇ 'ಕುರುಕ್ಷೇತ್ರ' ವಾರಪತ್ರಿಕೆಯಲ್ಲಿ 10–7–83, 17–7–83 ಹಾಗೂ 14–8–83ರಲ್ಲಿ ನಿರ್ದಿಷ್ಟ ಆಪಾದನೆಗಳನ್ನು ಅದರ ಸಂಪಾದಕರು ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಏನೂ ಕ್ರಮ ತೆಗೆದುಕೊಂಡಿಲ್ಲ. ಇವರ ಕು–ಕೃತ್ಯಗಳಿಗೆ ತಮ್ಮ ಪರೋಕ್ಷ ಬೆಂಬಲ ಇದೆ ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಆಪಾದನೆ ಮಾಡುತ್ತೇನೆ. ಈ ಸರ್ಕಾರ ಬಂದಮೇಲೆ ಅಷ್ಟೊಂದು ಐ.ಎ.ಎಸ್. ಅಧಿಕಾರಿಗಳನ್ನು ವರ್ಗ ಮಾಡಿದ್ದು ಈ ಅಧಿಕಾರಿಗಳನ್ನು ವರ್ಗ ಮಾಡದೇ ಏಕೆ ಅಲ್ಲಿ ಇಟ್ಟುಕೊಂಡಿದೆ ? ಇದರಿಂದ ಸಂಶಯ ನಮಗೆ ಬರುತ್ತದೆ. ಈ ಬಗ್ಗೆ ನನ್ನಲ್ಲಿ ನಿರ್ದಿಷ್ಟ ಆಪಾದನೆಗಳು ನನ್ನ ಹತ್ತಿರ ಇದ್ದು ಇವು ಪತ್ರಿಕೆಗಳಲ್ಲೂ ಸಹ ಬಂದಿವೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಸಿ.ಓ.ಡಿ. ತನಿಖೆ ಮಾಡಿ ಸಂಬಂಧಪಟ್ಟವರ ಮೇಲೆ ಬೇಗನೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಭೆಯ ಮುಖಾಂತರ ತಿಳಿಸಬಯಸುತ್ತೇನೆ.

ಶ್ರೀ ಶ್ರೀಪಾದ ಹೆಗ್ಗಡೆ.—ಹೊಸ ಶಿಕ್ಷಕರನ್ನು ನೇಮಕ ಮಾಡುವಾಗ ಗ್ರಾಮೀಣ ಪ್ರದೇಶಗಳ ಕಡೆ ಅವರು ಹೋಗಲೇಬೇಕು ಎನ್ನುವ ಕಡ್ಡಾಯವನ್ನು ಹಾಕುವುದಕ್ಕೆ ಸಾಧ್ಯವಿದೆಯೇ ? ಇನ್ನು ಮಲೆನಾಡಿನ ಕಡೆ ಶಾಲೆಗಳಿಗೆ ಹೊರಗಿನವರು ಹೋಗಲು ಇಷ್ಟಪಡದ್ದರಿಂದ ಸ್ಥಳೀಯರಿಗೇ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಅವರನ್ನೇ ಅಲ್ಲಿ ನೇಮಕ ಮಾಡಿದರೆ ಶಿಕ್ಷಕರ ಕೊರತೆಯನ್ನು ನೀಗಿಸಬಹುದಲ್ಲವೇ ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ಮೀಸಲಾತಿಯಲ್ಲಿ ಎಷ್ಟು ಸಂಖ್ಯೆಯಲ್ಲಿ ಶಿಕ್ಷಕರು ಬೇಕು ಅಷ್ಟು ಜನರು ಬಾರದ ಸಮಯದಲ್ಲಿ ಸ್ಥಳೀಯ ಜನರಿಗೆ ಆದ್ಯತೆ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಮಲೆನಾಡಿನ ಕಡೆ ಕೆಲಸ ಮಾಡುವ ಬಗ್ಗೆ ಶಿಕ್ಷಕರಿಗೆ ಏನಾದರೂ ಇನ್‌ಸೆಂಟಿವ್ ಕೊಡಬೇಕಾಗುತ್ತದೆಂಬುದು ಸರ್ಕಾರದವರ ಗಮನದಲ್ಲಿ ಇದೆ. ಏನು ಮಾಡಲು ಸಾಧ್ಯವಿದೆಯೋ ಅದನ್ನು ನಾವು ಮಾಡುತ್ತೇವೆ. ಇನ್ನು ಒಬ್ಬ ಮಾನ್ಯ ಸದಸ್ಯರು ಆರೋಪಣೆ ಮಾಡಿ ವಿಷಯ ಪ್ರಸ್ತಾಪ ಮಾಡಿದರು. ಅವರು ತಮ್ಮ ಹತ್ತಿರ ಇರುವ ಮಾಹಿತಿಗಳನ್ನು ಕಳುಹಿಸಿಕೊಡಲಿ, ಈ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಲಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ನಾವು ಇಬ್ಬರು, ಮೂವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ತಮ್ಮಲ್ಲಿ ಇರುವ ವಿವರಗಳನ್ನು ಕಳುಹಿಸಿಕೊಟ್ಟಲ್ಲಿ ಯಾವ ರೀತಿ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಖಾಸಗೀ ಶಾಲೆಗಳಿಗೆ ಆದ್ಯತೆ ಕೊಡುವ ಉದ್ದೇಶ ಇಷ್ಟೆ ಖಾಸಗೀ ಶಾಲೆಗಳಿಗೆ 5 ವರ್ಷಗಳವರೆಗೆ ಗ್ರ್ಯಾಂಟ್-ಇನ್-ಏಡ್ ಪ್ರಕಾರ ಅವರು ಕೆಲವೊಂದು ಸವಲತ್ತುಗಳನ್ನು ಒದಗಿಸಿಕೊಳ್ಳುತ್ತಾರೆ. ಸರ್ಕಾರಿ ಶಾಲೆಗಳಾದರೆ ಎಲ್ಲವನ್ನೂ ಸರ್ಕಾರವೇ ಭರಿಸಿ ಕೊಡಬೇಕಾಗುತ್ತದೆ. ಜೊತೆಗೆ ಜನತೆಯ ಅವಶ್ಯಕತೆಯನ್ನು ಈಡೇರಿಸುವುದಕ್ಕೆ ಸರ್ಕಾರಿ ಶಾಲೆಗಳನ್ನು ಹೆಚ್ಚು ಹೆಚ್ಚು ಮಾಡಬೇಕೆಂದುಬುದೇ ಸರ್ಕಾರದ ಉದ್ದೇಶ. ಮುಂದಕ್ಕೆ ಖಾಸಗೀ ಶಾಲೆಗಳಿಗೆ ಉತ್ತೇಜನ ಕಡಿಮೆ ಮಾಡಬೇಕೆಂದು ಇಚ್ಛೆ ಇದೆ.

ಶ್ರೀ ಸಿ. ಭೈರೇಗೌಡ.—ಈ ವರ್ಷ ವೈದ್ಯಕೀಯ ಕಾಲೇಜುಗಳಲ್ಲಿ, ಇಂಜನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ವೃತ್ತಿಪರ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದ ಮಕ್ಕಳಿಗೆ ಅವಕಾಶ ಇಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೆ? 92 ಪರ್ಸೆಂಟ್ ಮೆರಿಟ್‌ಗೆ ಪ್ರವೇಶಾತಿಯನ್ನು ನಿಲ್ಲಿಸಲಾಗಿದೆ. ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ದಾಮಾಶಾ ಪ್ರಕಾರ ಮೀಸಲಾತಿಯನ್ನು ಇಡುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೆ?

ಶ್ರೀ ಬಿ. ರಾಚಯ್ಯ.—ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಮಕ್ಕಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೂ ಹಿಂದಿಗಿಂತಲೂ ಸ್ವಲ್ಪಮಟ್ಟಿಗೆ ಉತ್ತಮವಾಗಿದೆ. ಇವತ್ತು ಮೆರಿಟ್‌ನಲ್ಲಿ ಬರತಕ್ಕ ಮಕ್ಕಳು ಪಟ್ಟಣದಲ್ಲಿ ಅದರಲ್ಲಿಯೂ ಇಂಗ್ಲೀಷ್ ಮಾಧ್ಯಮದಲ್ಲಿ ಓದಿರುವ ಮಕ್ಕಳೇ ಬರುತ್ತಾರೆ. ಹಳ್ಳಿಗಾಡಿನ ಮಕ್ಕಳಿಗೆ ಪ್ರಾತಿನಿಧ್ಯ ಕೊಡಬೇಕಾದರೆ, ಕಾನೂನು ಪ್ರಕಾರ ನೋಡಿ ಮಾಡಬೇಕಾಗುತ್ತದೆ. ಈ ವರ್ಷವೇ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಶಾನಪ್ಪ.—ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಹರಿಜನ ಗಿರಿಜನರಿಗೆ ಸಲ್ಲಬೇಕಾದ ಮೀಸಲಾತಿಯನ್ನು ಪಾಲಿಸದೇ ಇರುವುದು ಸರ್ಕಾರದವರಿಗೆ ಗೊತ್ತಿದೆಯೆ? ಆ ಭಾಗದಲ್ಲಿ 162 ಉರ್ದು ಶಾಲೆಗಳಿದ್ದು, 32 ಶಾಲೆಗಳಲ್ಲಿ ಮಾತ್ರ ಕನ್ನಡ ಉಪಾಧ್ಯಾಯರು ಇದ್ದಾರೆ. ಉಳಿದ 130 ಉರ್ದು ಶಾಲೆಗಳಿಗೆ ಯಾವಾಗ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೀರಿ?

ಶ್ರೀ ಬಿ. ರಾಚಯ್ಯ.—ಎರಡನೇ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದೇನೆ. ತಾವೂ ಕೂಡ ಅಲ್ಲಿನ ಸೆನೆಟ್ ಸದಸ್ಯರಾಗಿದ್ದೀರಿ, ವಿಚಾರಗಳನ್ನು ತಿಳಿಸಿದರೆ, ಸಾಧ್ಯವಾದಮಟ್ಟಿಗೆ ರಿಸರ್ವೇಷನ್ ಪಾಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು.—ಪ್ರಸ್ತಾವನೆ ಹೀಗಿದೆ.

ಅಭಿಯಾಚನೆ ಕ್ರಮಾಂಕ 9—ಲೇಖನ ಸಾಮಗ್ರಿ ಮತ್ತು ಮುದ್ರಣ

31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,30,67,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 10—ಉಚ್ಚ ಶಿಕ್ಷಣ

31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45,15,60,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 53,00,000 ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 13—ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 210,52,70,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,00,000 ರೂ.

ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವ ಅಂಗೀಕೃತವಾಗಿದೆ ಮತ್ತು ಮೊಬಲಗನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ 27—ರಸ್ತೆ ಸಾರಿಗೆ

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಮಂತ್ರಿಯವರು) :—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,42,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,37,60.000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಬಿಯಾಚನೆ ಕ್ರಮಾಂಕ 2—ತೋಟಗಾರಿಕೆ

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಪಶುಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು). ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,75,94,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 4—ಪಶುಸಂಗೋಪನಾ ಮತ್ತು ಡೇರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೇರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 27,91,95,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,56,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 53—ವಕ್ಫ್

ಶ್ರೀ ಎಂ. ರಘುಪತಿ (ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳ ಪರವಾಗಿ). ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 37,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 60—ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,55,14,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವನೆಯನ್ನು ಸಭೆಯ ಮುಂದಿಡಲಾಗಿದೆ.

ಉಪಾಧ್ಯಕ್ಷರು.—ಈಗ ಎಲ್ಲಾ ಬೇಡಿಕೆಗಳನ್ನು ಚರ್ಚೆಗಾಗಿ ಸಭೆಯ ಮುಂದೆ ಇಡಲಾಗಿದೆ. ಚರ್ಚೆಯನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಪ್ರಾರಂಭ ಮಾಡುತ್ತಾರೆ.

*ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ ಬೇಡಿಕೆಗಳ ಸಂಖ್ಯೆ, 27, 2, 4, 53, 60 ಇವುಗಳ ಬಗ್ಗೆ ಬೆಂಬಲಿಸಿ ಕೆಲವು ವಿಷಯಗಳನ್ನು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಮೊದಲು ಕಾರ್ಮಿಕರ ಇಲಾಖೆಯ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಅನಂತರ ಸಾರಿಗೆ ಇಲಾಖೆಯ ಬಗ್ಗೆ ಹೇಳುತ್ತೇನೆ. ಹೆಚ್ಚು ವಿಷಯಗಳನ್ನು ನನ್ನ ಮಿತ್ರರು ಮಾತನಾಡುತ್ತಾರೆಂದು ನಂಬಿದ್ದೇನೆ. ಈ ಕಾರ್ಮಿಕರ ಬಗ್ಗೆ, ಈಗ ಹಂಗಾಮಿ ಮಾಸ್ಟರುಗಳ ತರಹ, ಹಂಗಾಮಿ ಕಾರ್ಮಿಕ ಸಚಿವರಾಗಿರತಕ್ಕ ರಘುಪತಿಯವರು ಕೆಲವು ದಿವಸಗಳ ಹಿಂದೆ ಒಂದು ಮಾತನ್ನು ಆಡಿದ್ದಾರೆ. ಮಾನ್ಯ ಅಜೀಜ್ ಸೇಟ್ ಅವರು ಬಂದಮೇಲೆ ಇವರು ಸೀಟು ಬಿಟ್ಟುಕೊಡಬೇಕಾಗುತ್ತದೆ. ಈಗ ಸದ್ಯಕ್ಕೆ ಇವರು ಹಂಗಾಮಿ. ತಾವು ಮಾತಾಡುತ್ತಾ ಒಂದು ಮಾತನ್ನು ಹೇಳಿದ್ದೀರಿ, ಜನತಾ ಸರ್ಕಾರ ಕಾರ್ಮಿಕರ ಪರವಾದ ಸರ್ಕಾರ. ರೈತರ ಪರವಾದ ಸರ್ಕಾರ ಎಂದು ಯಾವುದೋ ಒಂದು ಫಂಕ್ಷನ್‌ನಲ್ಲಿ ಮಾತನಾಡುತ್ತಾ ತಿಳಿಸಿದ್ದೀರಿ. ರೈತರ ಪರವಾಗಿ ಇರತಕ್ಕ ಸರ್ಕಾರ ಅಂದರೆ ಅವರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡಲಿಕ್ಕೆ ಹೋಗುವು

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದಿಲ್ಲ. ಕಾರ್ಮಿಕರ ಪರವಾಗಿ, ಲೇಬರ್ ಇಲಾಖೆ ಯಾವ ರೀತಿ ನಡೆದುಕೊಳ್ಳುತ್ತಿದೆ, ಅದರ ಆಧಾರದ ಮೇಲೆ ಸ್ವಲ್ಪ ವಿಶ್ಲೇಷಣೆ ಮಾಡಿದರೆ ಇವರು ಇನ್ನೂ ಬಹಳ ದೂರ ಇದ್ದಾರೆ. ಇವೊತ್ತು ಕಾರ್ಮಿಕರ ವಿರೋಧವಾಗಿ ಇವರು ನಡೆದುಕೊಳ್ಳುತ್ತಿದ್ದಾರೆ, ಬಂಡವಾಳಗಾರರ ಪರವಾಗಿ ಇದ್ದಾರೆ ಎಂದು ತಕ್ಷಣ ದೂರಲಿಕ್ಕೆ ಹೋಗುವುದಿಲ್ಲ. ಕಾರ್ಮಿಕರ ಪರವಾಗಿ ಏನೇನು ಕೆಲಸ ನಡೆಯಬೇಕೋ, ಆ ಕೆಲಸ ಇಲಾಖೆಯಲ್ಲಿ ನಡೆಯುತ್ತಿಲ್ಲ, ಮಂತ್ರಿಮಂಡಲದಲ್ಲಿ ನಡೆಯುತ್ತಿಲ್ಲ. ಮಾನ್ಯ ಮಂತ್ರಿಗಳು ಆ ರೀತಿ ವರ್ತಿಸುತ್ತಾ ಇಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಏಕೆಂದರೆ, ಈ ಕಾರ್ಮಿಕರ ಇಲಾಖೆಯ ಬಗ್ಗೆ ನಾವು ರಿಪೋರ್ಟ್ ಕೊಟ್ಟಿದ್ದೀರಿ. ಮುಖ್ಯವಾಗಿ ಹೇಳಿರುವುದು ಎಂದರೆ, ಕೈಗಾರಿಕಾ ವಿವಾದಗಳನ್ನು ಸಡಿಲ ಮಾಡುವುದು, ಮತ್ತು ಕೈಗಾರಿಕಾ ಬಾಂಧವ್ಯ ಹೆಚ್ಚು ಮಾಡುವುದು, ಲೇಬರ್ ವೆಲ್‌ಫೇರ್ ಸೆಂಟರ್‌ಗಳನ್ನು ಮುಂದುವರಿಸುವುದು, ಕನ್ನಡದಲ್ಲಿಯೇ ಒಂದು ಕಾರ್ಮಿಕರಿಗೆ ಮೀಸಲಾತಿ ಪತ್ರಿಕೆ ತರಿಸುವುದು, ತ್ರಿಪಕ್ಷ ಸಮಿತಿಗಳ ವೇತನ ಸಮಿತಿಗಳು ಏನು ಶಿಫಾರಸ್ಸು ಮಾಡುತ್ತಾರೆ ಅದನ್ನು ಜಾರಿಗೆ ತರುವುದು, ಕಾರ್ಮಿಕರ ವಿದ್ಯಾಭ್ಯಾಸ ಶಿಕ್ಷಣಕ್ಕೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡುವುದು, ಇಂಡಿಯನ್ ಲೇಬರ್ ಆರ್ಗನೈಜೇಷನ್ ಜಾರಿಗೆ ತರುವುದು, ಹೇಳಿದ್ದೀರಿ, ಇದು ಬಹಳ ಉದಾತ್ತವಾದುದು. ಆದರೆ ಕಾರ್ಯರೂಪ ನೋಡಿದರೆ ಅದರ ಬಗ್ಗೆ ಬಹಳ ದೂರ ಇದ್ದೀರಿ. ಅದರ ಹತ್ತಿರ ಕೂಡ ನೀವು ಹೋಗಿಲ್ಲ. ಇನ್ನು 8 ತಿಂಗಳು ಆಗಿದೆ, ಇಷ್ಟು ಅವಧಿಯಲ್ಲಿ ಮಾಡಲಿಕ್ಕೆ ಆಗುವುದಿಲ್ಲ ಎಂದು ತಾವು ಹೇಳಬಹುದು, ಆ ರೀತಿ ಹೇಳುತ್ತೀರಾ ಎಂದು ನಂಬಿಕೆ ಇದೆ. ತಾವು ಹೋಗುವ ದಾರಿ, ಅದು ಕಾರ್ಮಿಕರ ಪರವಾಗಿ ಇರುವುದು ಇದ್ದರೆ, ಕಾರ್ಮಿಕರ ಸಮಸ್ಯೆ ಬಗೆಹರಿಸುವುದು, ಇದ್ದರೆ ನಾವು ಬೆಂಬಲ ಕೊಡಬಹುದು. ಹೋಗುತ್ತಾ ಇರುವ ದಾರಿ ಅಡ್ಡಾದಿಡ್ಡಿ ದಾರಿ ಆದರೆ. ಆದರ ಬಗ್ಗೆ ಖಂಡಿಸಬೇಕಾಗುತ್ತದೆ. ಅದಕ್ಕೆ ಪರಿಹಾರ ಹುಡುಕಬೇಕು ಎಂದು ಕೇಳಿಕೊಳ್ಳಬೇಕಾಗುತ್ತದೆ. ಈಗ ಒಂದೆರಡು ಕೆಲಸ ಚೆನ್ನಾಗಿ ಮಾಡಿದ್ದಾರೆ. ಹಿಂದೆ ಗುಂಡೂರಾವ್ ಸರ್ಕಾರ ಇದ್ದಾಗ ನಮ್ಮ ರಾಜ್ಯದಲ್ಲಿ ಒಂದು ದೊಡ್ಡ ಹೋರಾಟ ನಡೆಯಿತು ಪಬ್ಲಿಕ್ ಸೆಕ್ಟಾರ್ ಕಾರ್ಮಿಕರ ಮುಷ್ಕರದಿಂದ ಒಂದು ತಿಂಗಳು ಲಾಕೌಟ್ ಆಯಿತು. 87 ದಿವಸ ಮುಷ್ಕರ ಆಯಿತು. ಒಂದು ಲಕ್ಷದ 25 ಸಾವಿರ ಜನ ಕಾರ್ಮಿಕರಿಗೆ ತೊಂದರೆಯಾಯಿತು. ಮೂರು ಜನ ಪ್ರಾಣ ಕಳೆದುಕೊಂಡರು. ಇದೇ ಜನಗಳು ಕೋರ್ಟುಗಳಿಗೆ ಹೋಗುತ್ತಿದ್ದರು. ಈ ಕೇಸುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಿ, ಈ ಪ್ರಶ್ನೆಗಳನ್ನು ಇತ್ಯರ್ಥ ಮಾಡಿ ಎಂದು ನಾವು ಕೇಳಿಕೊಂಡೆವು. ಕೆಲವರದನ್ನು ಡಿಸ್‌ಮಿಸ್ ಮಾಡಿದರು. ಇನ್ನು ಕೆಲವರದು ಹಾಗೇ ಉಳಿದವು. ಇವರೇನು ಯಾರನ್ನೂ ಹೊಡೆದಿಲ್ಲ, ಏನೂ ಇಲ್ಲ. ಇವರು ಹೋರಾಟದಲ್ಲಿ ಭಾಗವಹಿಸಿದವರು. ಪಬ್ಲಿಕ್ ಸೆಕ್ಟಾರ್ ಕಾರ್ಮಿಕರನ್ನು ಕೋರ್ಟುಗಳಿಗೆ ಹೋಗುವಂತೆ ಮಾಡಿದರು. ಬಿ.ಇ.ಎಲ್., ಹೆಚ್.ಎ.ಎಲ್., ಬಿ.ಇ.ಎಮ್.ಎಲ್., ಕೆ.ಜಿ.ಎಫ್. ಕಾರ್ಖಾನೆ ನೌಕರರೂ ಇದರಲ್ಲಿ ಸೇರಿದ್ದಾರೆ. ಇವರುಗಳ ಮೇಲೆ ಇರತಕ್ಕ ಕೇಸುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹಿಂದಿನ ಸರ್ಕಾರಕ್ಕೆ ಕೇಳಿಕೊಂಡೆವು. ಮಾನ್ಯ ಮಂತ್ರಿಗಳನ್ನು ಎಷ್ಟೋ ಸಾರಿ ಭೇಟಿ ಮಾಡಿದ್ದೇವೆ. ಆಗ ಆಗಲಿ ನೋಡೋಣ ಎಂದು ಹೇಳಿದರು. ಅಂದಿನ ರಾಜಕೀಯ ಪರಿಸ್ಥಿತಿ, ನೇರವಾಗಿ ಇಂದಿರಾ ಗಾಂಧಿ ಸರ್ಕಾರದ ವಿರುದ್ಧ ತಿಕ್ಕಾಟ ಇದ್ದುದರಿಂದ, ತೀರ್ಮಾನ ಮಾಡಲಿಕ್ಕೆ ಅವರು ತಯಾರು ಇರಲಿಲ್ಲ. ಸ್ಟೀಫನ್ ಅಂಥ ಮಹನೀಯರನ್ನು ಕರೆಯಿಸಿ ನಮ್ಮನ್ನು ಅಧೋಗತಿ ಮಾಡಿಬಿಟ್ಟರು. ಈಗ ತಮ್ಮ ಸರ್ಕಾರ ಬಂದಮೇಲೆ ಇದನ್ನು ಬಗೆಹರಿಸುತ್ತೀರಾ ಎಂದು ಯೋಚನೆ ಮಾಡಿದ್ದೆವು. ಒಂದು ರೀತಿಯಲ್ಲಿ ಅರ್ಧ ಬಗೆಹರಿಸಿದ್ದೀರಿ. ಅದರಲ್ಲಿ ಯಾವ ಕಾರ್ಮಿಕರಿಗೆ ಕೇಸುಗಳನ್ನು ಹಾಕಿದ್ದರು, ಆ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿದ್ದೀರಿ. ಅವುಗಳಲ್ಲಿ ಕೆಲವು ಪಾಪಸ್ಸು ತೆಗೆದುಕೊಂಡಿದ್ದಾರೆ. ಇನ್ನು ಕೆಲವು ಹಾಗೇ ಉಳಿದಿವೆ. ಅವುಗಳನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೂ ತೆಗೆದುಕೊಂಡಿಲ್ಲ. ಇನ್ನು ರೈಲ್ ರೋಖೋ ನಡೆದಾಗ ಆಗಿರತಕ್ಕದ್ದರ ಬಗ್ಗೆ ಸೆಂಟ್ರಲ್ ಗವರ್ನ್‌ಮೆಂಟ್ ಕಡೆ ಕೈ ತೋರಿಸುತ್ತಾರೆ. ಅದರಿಂದ ಪ್ರಯೋಜನ ಇಲ್ಲ. ಇಲ್ಲಿ ಸರ್ಕಾರವೇ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬಹುದು. ಹಿಂದಿನ ಸರ್ಕಾರದಲ್ಲಿ ಗುಂಡೂರಾವ್ ಅವರು ಕೇಂದ್ರಕ್ಕೆ ಪತ್ರ ಬರೆದಿದ್ದೇವೆಂದು ಹೇಳಿದ್ದರು. ಅದರ ಬಗ್ಗೆ ನೀವು ಏನು ಮಾಡಿದ್ದೀರೋ ಗೊತ್ತಿಲ್ಲ. ಪ್ರತಿಯೊಂದು ಸಾರಿ ಕೇಳಿದಾಗಲೂ ಆಗುತ್ತದೆಯೆಂದು ಹೇಳುತ್ತಿದ್ದಾರೆ. ನೂರಾರು ಜನ ಪಬ್ಲಿಕ್ ಸೆಕ್ಟಾರ್ ಕಾರ್ಮಿಕರು ಇವೊತ್ತಿಗೂ ಕೋರ್ಟಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಇವೊತ್ತು ಕೆಲವು ಕಡೆ ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅದಕ್ಕೆ ಮರ್ಯಾದೆ ಕೊಡುತ್ತೇವೆ. ಇನ್ನೊಂದು ಕಡೆ ಕೇಸುಗಳನ್ನು ವಾಪಸ್ಸು ಪಡೆಯುವಲ್ಲಿ ಸರಿಯಾದ ಕ್ರಮ ಆಗಿಲ್ಲ. ಅದೇ ರೀತಿ ನಿಮ್ಮ ಕಾಲದಲ್ಲಿ ನಡೆದ ಇನ್ನೊಂದು ವಿಷಯವನ್ನು ಹೇಳಬೇಕೆಂದರೆ, ಕೈಗಾರಿಕಾ ಬಾಂಧವ್ಯದ ಬಗ್ಗೆ ಮಾತನಾಡುವಾಗ ತಾವು ಬಂದ ತಕ್ಷಣ ಒಂದು ದೊಡ್ಡ ಗೋಷ್ಠಿ ನಡೆಯಿತು. ಕಾರ್ಮಿಕರ ಯೂನಿಯನ್ ಮೇ ದಿನವನ್ನು ಅಂತರ್‌ರಾಷ್ಟ್ರೀಯ ಕಾರ್ಮಿಕರ ವರ್ಗ, ಆ ದಿನಾಚರಣೆಯನ್ನು ಸಂಬಳ ಸಮೇತ ರಜವಾಗಿ ಘೋಷಿಸಬೇಕೆಂದು ಹೇಳಿದೆವು. ಈ ಬಗ್ಗೆ ಮಾನ್ಯ ಮಂತ್ರಿಗಳು, ಮುಖ್ಯ ಮಂತ್ರಿಗಳು ಕರೆಯಿಸಿ ಮಾತನಾಡಿದಾಗ ಮಾಡೋಣ ಎಂದು ಒಪ್ಪಿಕೊಂಡರು. ಇದುವರೆಗೂ ಅದು ಏನಾಗಿದೆ? ಮೇ ದಿನಾಚರಣೆ ಮಾಡಿದರೇ ಹೊರತು ಸಂಬಳ ಸಮೇತ ರಜ ಯಾರಿಗೂ ನಮ್ಮ ರಾಜ್ಯದಲ್ಲಿ ಸಿಕ್ಕಲಿಲ್ಲ. ಕೆಲವು ಸಾರಿ ಸಂಬಳ ಸಮೇತ ರಜ ಘೋಷಿಸಿ ಎಂದು

ಒತ್ತಾಯ ಮಾಡಿದ್ದರೂ ಸರ್ಕಾರದ ನೀತಿಯಿಂದ ಏನೂ ಮಾಡಿಲ್ಲ. ಕೇಂದ್ರದವರು ಕಾನೂನಿನಲ್ಲಿ ಅಳವಡಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ ಎಂದು ಇವರು ನಮಗೆ ಹೇಳುತ್ತಿದ್ದಾರೆ. ನ್ಯಾಷನಲ್ ಲಿಸ್ಟ್ ಫೆಸ್ಟಿವಲ್ ಆ್ಯಕ್ಟ್‌ನಲ್ಲಿ ಸೇರಿಸಿ ತಿದ್ದುಪಡಿ ಮಾಡಿ ತೆಗೆದುಕೊಂಡು ಬನ್ನಿ ಎಂದು ಹೇಳಿದರು ಎಂದು ಹೇಳುತ್ತಾರೆ. ನನಗನ್ನಿಸುತ್ತದೆ, ಈ ಕಾರಣ ಸರಿಯಾದುದು ಅಲ್ಲ, ನ್ಯಾಯವಾದುದು ಅಲ್ಲ ಎಂದು. ಇದು ಒಂದು ಸಬೂಬನ್ನು ಕೇಂದ್ರದವರು ತಮಗೆ ಹೇಳಿರಬಹುದು. ನೀವು ಇದಕ್ಕೆ ಆರ್ಡಿನೆನ್ಸ್ ತಂದಿದ್ದರೆ ಯಾರಾದರೂ ಅಡ್ಡ ಬರುತ್ತಿದ್ದರೇನು ? ಅದಕ್ಕೆ ಯಾರೂ ಅಡ್ಡ ಬರುತ್ತಾ ಇರಲಿಲ್ಲ. ಮೇ ದಿನಾಚರಣೆಯ ಬಗ್ಗೆ ಆರ್ಡಿನೆನ್ಸ್ ತರಬಹುದಾಗಿತ್ತು. ತಮಿಳುನಾಡಿನಲ್ಲಿ, ಕೇರಳಾದಲ್ಲಿ, ಪಶ್ಚಿಮ ಬಂಗಾಳದಲ್ಲಿ ಇದೆ. ಇಲ್ಲಿ ಕಾರ್ಮಿಕರ ದಿನಾಚರಣೆಯ ಬಗೆ ತಾವು ಒಂದು ಆರ್ಡಿನೆನ್ಸ್ ತಂದು ಕಡ್ಡಾಯವಾಗಿ ಸಂಬಳ ಸಮೇತ ರಜ ಕೊಡಬೇಕೆಂದು ಮಾಡಬಹುದಿತ್ತು. ತಾವು ಮಾಡುವುದರಲ್ಲಿ ವಿಫಲತೆಯನ್ನು ತೋರಿಸಿದ್ದೀರಿ. ಈಗಲಾದರೂ ಸಹ ಎಚ್ಚೆತ್ತು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು 'ಮೇ' ದಿನಾಚರಣೆಯ ದಿವಸದ್ದು ಅನೇಕ ಕಡೆಗಳಲ್ಲಿ ಸಂಬಳ ಕೊಟ್ಟಿಲ್ಲ. ಆ ಒಂದು ದಿವಸದ ಸಂಬಳ ಕೊಡಿಸತಕ್ಕ ಜವಾಬ್ದಾರಿ ತಮ್ಮ ಮೇಲೆ ಇದೆ. ಇನ್ನೊಂದು ವಿಷಯ ಹೇಳಬೇಕೆಂದರೆ, ಚುನಾವಣೆ ನಡೆಯುವ ಸಂದರ್ಭದಲ್ಲಿ ಜನತಾ ಪಕ್ಷ, ನಾವು, ನೀವು ಸೇರಿ ಗೆದ್ದು ಬಂದಿದ್ದೇವೆ. ಚುನಾವಣೆ ನಡೆಸುವ ದಿನ ಜನವರಿ 5, 1983 ಸಂಬಳ ಸಮೇತ ರಜ ಕೊಡಬೇಕೆಂದು ನೀವು ಆರ್ಡರ್ ಹೊರಡಿಸಿಬಿಟ್ಟಿರಿ. ಆದರೆ ಇವತ್ತಿನವರೆಗೂ ಅನೇಕ ಜನರಿಗೆ ಸಂಬಳ ಸಹಿತ ರಜೆಯನ್ನು ಕೊಟ್ಟಿಲ್ಲ. ತಾವು ಏತಕ್ಕೆ ಇದರ ಬಗ್ಗೆ ಒಂದು ಕಾನೂನು ತಂದು ಬಂದೋಬಸ್ತ್ ಮಾಡಲಿಲ್ಲ ? ನಾವು ಅವತ್ತಿನ ಸಂಬಳವನ್ನು ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಈಗ ಅಕ್ಟೋಬರ್‌ನಲ್ಲಿದ್ದೇವೆ, ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಹಾಗಾದರೆ ಕಾರ್ಮಿಕ ವರ್ಗದವರು ತಮ್ಮ ಮೇಲೆ ಯಾವ ರೀತಿ ವಿಶ್ವಾಸವನ್ನು ಇಡುವುದಕ್ಕೆ ಸಾಧ್ಯವಿದೆ ? ಈ ವಿಚಾರ ತಮಗೆ ಸಣ್ಣದಾಗಿ ಕಾಣಬಹುದು. ಆದರೆ ಇದು ಸಣ್ಣದಲ್ಲ. ಇದು ದೊಡ್ಡ ಪ್ರಶ್ನೆ. ತಾವು ಸರಿಯಾದ ದಾರಿಯಲ್ಲಿ ಹೋದರೆ ಆಗ ಕಾರ್ಮಿಕ ವರ್ಗದವರು ತಮ್ಮ ಬೆಂಬಲವನ್ನು ಕೊಡುತ್ತಾರೆ. ನೀವು ಇದು ಸಣ್ಣ ವಿಷಯ ಎಂದು ಹೇಳುವುದಾದರೆ ಆಗ ಇದು ಎಂಥ ಸರ್ಕಾರ ? ಹಿಂದಿನ ಸರ್ಕಾರಕ್ಕೂ ಇಂದಿನ ಸರ್ಕಾರಕ್ಕೂ ಏನೂ ವ್ಯತ್ಯಾಸ ಇಲ್ಲ ಎನ್ನುವ ಭಾವನೆ ಅವರಲ್ಲಿ ಬರುತ್ತದೆ. ತಾವು ಈ ವಿಚಾರದಲ್ಲಿ ಸ್ಪಷ್ಟವಾಗಿರಬೇಕು. ಅದು ಬಿಟ್ಟು ಸಮಸ್ಯೆ ಬಂದಾಗ ನೋಡೋಣ, ಪರಿಹಾರ ಮಾಡೋಣ ಎಂದು ಸರ್ಕಾರವಾಗಲಿ, ಕಾರ್ಮಿಕ ಇಲಾಖೆಯಾಗಲಿ ಅಭಿಪ್ರಾಯವನ್ನು ತಾಳುವುದಾದರೆ ಬಹಳ ಕಷ್ಟವಾಗುತ್ತದೆ. ಕಾರ್ಮಿಕ ವರ್ಗದ ಬಗ್ಗೆ ತಾವು ಸಮಗ್ರವಾದ ಒಂದು ನೀತಿಯನ್ನು ಹಾಕಿಕೊಂಡು ಕೆಲಸ ಮಾಡಬೇಕು. ಕೈಗಾರಿಕಾ ಬಾಂಧವ್ಯದ ಬಗ್ಗೆ ಸಮಗ್ರವಾದ ನೀತಿ ಇರಬೇಕು. ಈ ಸಂಬಂಧದಲ್ಲಿ ಶಾಸನವನ್ನು ಮಾಡುವಾಗ ಒಂದು ಸಮಗ್ರವಾದ ನೀತಿ ತೋರಬೇಕು. ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗದ ಜನರು ಯಾರಿದ್ದಾರೆ, ಯಾರು ದಿನಕ್ಕೆ 2–3 ರೂಪಾಯಿಗಳ ಕೂಲಿ ತೆಗೆದುಕೊಳ್ಳತಕ್ಕ ಬೀಡಿ ಕಾರ್ಮಿಕರು, ಅಗರಬತ್ತಿ ಕಾರ್ಮಿಕರು, ಮುಂತಾದವರು ಇದ್ದಾರೆ ಅವರ ಬಗ್ಗೆ ಒಂದು ಮಾನವೀಯ ದೃಷ್ಟಿ ಇಟ್ಟುಕೊಂಡು ಅವರಿಗೆ ಕನಿಷ್ಠ ಕೂಲಿ ಶಾಸನವನ್ನು ಜಾರಿಗೆ ತಂದು ಆ ಮಾಲೀಕರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಏನಾದರೂ ಒಂದು ಧೋರಣೆಯನ್ನು ಸರ್ಕಾರದವರು ರೂಪಿಸಿದ್ದಾರೆಯೋ ? ಎಂದು ನೋಡಿದರೆ ಅಂಥಾದ್ದು ಯಾವುದೂ ಇಲ್ಲವೆಂದು ಅನ್ನಿಸುತ್ತದೆ. ಇದರ ಬಗ್ಗೆ ತಾವು ಯೋಜನೆಯನ್ನೇ ಮಾಡಿಲ್ಲ. ಕನಿಷ್ಠ ಕೂಲಿ ಶಾಸನದ ಬಗ್ಗೆ ತಮ್ಮ ವರದಿಯಲ್ಲಿ ಪ್ರಸ್ತಾಪ ಮಾಡುತ್ತಾ ಇನ್ನು ಸ್ವಲ್ಪ ದಿವಸದಲ್ಲೇ ಬೋರ್ಡ್ ಅನ್ನು ರೀಕಾನ್‌ಸ್ಟಿಟ್ಯೂಟ್ ಮಾಡುತ್ತೇವೆಂದು ಹೇಳಿದ್ದೀರಿ. ಈ ಬೋರ್ಡ್ ಅನ್ನು ತಾವು ಮಾಡಿದ್ದೀರಿ ಎಂಬ ವಿಚಾರವನ್ನೂ ಕೂಡ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಕನಿಷ್ಠ ಕೂಲಿಯ ಬಗ್ಗೆ ನಿಮ್ಮ ಖಚಿತವಾದ ನಿಲುವು ಇಲ್ಲದಿದ್ದರೆ ಮುಂದೆ ಬಹಳ ತೊಂದರೆಗೆ ಒಳಗಾಗಬೇಕಾಗುತ್ತದೆ. ಕನಿಷ್ಠ ಕೂಲಿಯ ವಿಚಾರದಲ್ಲಿ ಕೇಂದ್ರ ಸರ್ಕಾರದ ತೀರ್ಮಾನಗಳೇನು, ನ್ಯಾಯಾಲಯಗಳ ತೀರ್ಮಾನ ಏನು ಎಂಬುದನ್ನು ನೋಡಿ ಅದರ ಆಧಾರದ ಮೇಲೆ ಈ ಬೋರ್ಡ್‌ನವರಿಗೆ ನಿರ್ದೇಶನ ಕೊಡಬೇಕಾದುದು ತಮ್ಮ ಆದ್ಯ ಕರ್ತವ್ಯ. ಪ್ಲಾನಿಂಗ್ ಕಮಿಷನ್‌ರವರು ಇದರ ಬಗ್ಗೆ ಚರ್ಚೆ ಮಾಡಿ ಕನಿಷ್ಠ 2200 ಕ್ಯಾಲರಿಯಷ್ಟಾದರೂ ಕೊಟ್ಟರೆ ಸುಮಾರು 300–400 ರೂಪಾಯಿಗಳು ಅವರಿಗೆ ಸಿಕ್ಕುತ್ತದೆಂದು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಕನಿಷ್ಠ ದಿನಗೂಲಿ 8–10 ರೂಪಾಯಿಗಳು ಎಂದು ನಿಗದಿ ಮಾಡಿದ್ದಾರೆ. ಇದರ ಜೊತೆಗೆ ಒಂದು ಪಾಯಿಂಟ್‌ಗೆ 2 ಪೈಸೆಯಂತೆ ಕೊಡಬೇಕೆಂದು ತೀರ್ಮಾನ ಮಾಡಿದರು. ಇದೂ ಕೂಡ ಸುಮಾರು 50–60 ರೂಪಾಯಿಗಳು ಕಡಿಮೆಯಾಗುತ್ತದೆ. ಖಾಸಗೀ ಕಾರ್ಖಾನೆಗಳ ಮಾಲೀಕರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದರು. ಅವರು ಮಿನಿಮಮ್ ವೇಜಸ್ ನೋಟಿಫಿಕೇಷನ್ ಅನ್ನು ಸ್ಟ್ರೈಕ್‌ಡೌನ್ ಮಾಡಿದ್ದಾರೆ. ಇಲ್ಲಿ ತಾವು ಒಂದು ಅಡ್ವೈಸರಿ ಬೋರ್ಡ್ ಅನ್ನು ರಚನೆ ಮಾಡಿದ್ದೀರಿ. ಹೈಕೋರ್ಟಿನಲ್ಲಿ ಅರ್ಲಿ ಹಿಯರಿಂಗ್‌ಗೆ ಅರ್ಜಿ ಹಾಕಿಕೊಳ್ಳಲು ಅವಕಾಶ ಕೊಡುತ್ತೇವೆಂದು ಹೇಳಿದಿರಿ, ಆದರೆ ಕೊಡಲಿಲ್ಲ. ನಿಮ್ಮ ಅಡ್ವೋಕೇಟ್ ಜನರಲ್‌ರವರಿಗೆ ತುಂಬಾ ಕೆಲಸವಿರುತ್ತವೆ. ಅವರು ತುಂಬಾ ಬುದ್ಧಿವಂತರು ಇರಬಹುದು, ಆದರೆ ಅವರಿಗೆ ತಾವು ತಿಳುವಳಿಕೆಯನ್ನು ಕೊಟ್ಟಿದ್ದೀರೋ, ಇಲ್ಲವೋ ನನಗೆ ಗೊತ್ತಿಲ್ಲ. ಅವರಂತೂ ಅರ್ಲಿ ಹಿಯರಿಂಗ್ ಕೇಳಿಯೂ

ಇಲ್ಲ, ಕೇಳುವುದಕ್ಕೆ ತಯಾರೂ ಇಲ್ಲ. ಡಿವಿಜನ್ ಬೆಂಚ್‌ನವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ, ಅನಂತರ ನೋಡೋಣವೆಂದು ಸುಮ್ಮನಿರಬಹುದು. ಇದನ್ನು ಬೇಗ ಮುಗಿಸುವ ಯೋಚನೆ, ಜವಾಬ್ದಾರಿ ಈ ಸರ್ಕಾರದ ಮೇಲೆ ಇಲ್ಲವೇ ? ಇದನ್ನು ಬೇಗ ಇತ್ಯರ್ಥ ಮಾಡದಿದ್ದರೆ ಸರ್ಕಾರದವರು ಮಾಡಿರುವುದು ತಪ್ಪು ಎನ್ನುವ ಅಭಿಪ್ರಾಯ ಬರುವುದಿಲ್ಲವೇ ? ಇದನ್ನು ಆದಷ್ಟು ಬೇಗ ಇತ್ಯರ್ಥ ಮಾಡಿಸುವ ಜವಾಬ್ದಾರಿ ಮಂತ್ರಿಗಳ ಮೇಲಿದೆ. ತಾವು ತಕ್ಷಣ ಇದನ್ನು ಇತ್ಯರ್ಥ ಮಾಡಿಸಬೇಕೆಂದು ನಿಮ್ಮ ಅಡ್ವೋಕೇಟ್ ಜನರಲ್‌ರವರಿಗೆ ಹೇಳಬೇಕು. ಈ ಬಗ್ಗೆ ಮಾನ್ಯ ಅಜೀಜ್‌ಸೇಠ್‌ರವರ ಜೊತೆ ಅನೇಕ ಸಾರಿ ಮಾತನಾಡಿದ್ದರೂ ಇದುವರೆಗೂ ದುರದೃಷ್ಟವಶಾತ್ ತೀರ್ಮಾನವಾಗಿಲ್ಲ. ಇದು ತೀರ್ಮಾನವಾಗಬೇಕಾದರೆ ಇನ್ನು 6 ತಿಂಗಳಾದರೂ ಆಗಬಹುದು ಅಥವಾ ಒಂದು ವರ್ಷವಾದರೂ ಆಗಬಹುದು. ಯಾವ ಕಾರ್ಮಿಕರ ಬಗ್ಗೆ ತಮಗೆ ಕಳಕಳಿ, ಕಾಳಜಿ ಇದೆಯೆಂದು ಹೇಳುತ್ತಿದ್ದೀರಿ; ಯಾವ ಕಾರ್ಮಿಕರು ಮಾಲೀಕರ ಶೋಷಣೆಗೆ ಒಳಗಾಗಿದ್ದಾರೆ ಅವರ ಹಿತದೃಷ್ಟಿಯನ್ನು ನೀವು ಕಾಪಾಡಬೇಕೆಂದು ಹೇಳುತ್ತಿದ್ದೇನೆ. 1981 ರಲ್ಲೇ ಇದರ ಬಗ್ಗೆ ಒಂದು ನೋಟಿಫಿಕೇಷನ್ ಆಯಿತು. ಇವತ್ತು 1983 ನೇ ಇಸವಿಗೆ ಬಂದರೂ ಕೂಡ ಇದು ಇತ್ಯರ್ಥವಾಗಿಲ್ಲ ಎಂದರೆ ಇನ್ನು ಯಾವಾಗ ಮಾಡುತ್ತೀರಿ ? ಇದರಲ್ಲಿ ಇನ್ನೊಂದು ಸಮಸ್ಯೆ ಏನೆಂದರೆ 1981 ನೇ ಇಸವಿಯ ನೋಟಿಫಿಕೇಷನ್ ಕೆಲವು ಕಾರ್ಮಿಕರಿಗೆ ಅನ್ವಯಿಸದೇ ಸ್ಟೇ ಆಗಿದೆ. ಇನ್ನೊಂದು ವಿಧವಾದ ಕಾರ್ಮಿಕರು ಅಂದರೆ ಪವರ್‌ಲೂಂ ಮತ್ತು ಹ್ಯಾಂಡ್‌ಲೂಂ ಕಾರ್ಮಿಕರಿಗೆ ಸಂಬಂಧಪಟ್ಟಂತೆ 1981 ರಲ್ಲಿ ನೋಟಿಫಿಕೇಷನ್ ಆಗಿದ್ದರೂ ಇದು 1977 ರಿಂದ ಪೆಂಡಿಂಗ್ ಇದೆ. ಈ ಮಾಲೀಕರು ಹೈಕೋರ್ಟಿನಿಂದ 1979 ನೇ ಇಸವಿಯಲ್ಲಿ ಸ್ಟೇ ತೆಗೆದುಕೊಂಡು ಬಂದರು. ಆದರೆ ಇದರ ಬಗ್ಗೆ ಇವತ್ತಿನವರೆಗೂ ಸರ್ಕಾರ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ಹಿಂದಿನ ಸರ್ಕಾರದವರು ಮಾಡಬೇಕಾಗಿತ್ತು ಎಂದು ತಾವು ಹೇಳಬಹುದು. ಆದರೆ ತಾವು ಅಧಿಕಾರಕ್ಕೆ ಬಂದಮೇಲೆ ಮಾಡಿದ್ದಾದರೂ ಏನು ? ಎಂದು ನಾವು ನಿಮ್ಮನ್ನು ಕೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕ ಸುಮಾರು 3–4 ಲಕ್ಷ ಜನ ಹ್ಯಾಂಡ್‌ಲೂಂ ಮತ್ತು ಪವರ್‌ಲೂಂ ಕಾರ್ಮಿಕರ ಗತಿ ಏನು ? ಅವರು ಯಾವ ರೀತಿ ಜೀವನ ಮಾಡಬೇಕು ? ಈ ರೀತಿ ಕಾರ್ಮಿಕ ಇಲಾಖೆಯಾಗಲಿ ಸರ್ಕಾರವಾಗಲಿ ನಡೆದುಕೊಂಡರೆ ಜನರಲ್ಲಿ ನಂಬಿಕೆ ಬರುವುದಾದರೂ ಹೇಗೆ ? ಇದರಲ್ಲಿ ಇನ್ನೊಂದು ವಿಚಾರ ಎಂದರೆ ಕನಿಷ್ಠ ಕೂಲಿಯನ್ನು ಹಿಂದೆ ನಿಗದಿ ಮಾಡಿರುವುದಕ್ಕೂ ಮತ್ತು ಈಗಿರುವುದಕ್ಕೂ ಏನು ವ್ಯತ್ಯಾಸ ಇದೆ ? ಇದರಲ್ಲಿ 50 ಪರ್ಸೆಂಟ್ ಕೊಡಬೇಕೆಂದು ನ್ಯಾಯಾಲಯದವರು ಹೇಳಿದ್ದರೂ, ಸರ್ಕಾರ ಅದನ್ನೂ ಕೂಡ ಕೊಡಿಸುವ ಪ್ರಯತ್ನವನ್ನು ಮಾಡಿಲ್ಲ. 50 ಪರ್ಸೆಂಟ್ ಕೊಟ್ಟಿದ್ದರೆ ಹೋಟೆಲ್ ಕಾರ್ಮಿಕರಿಗೆ, ಬೀಡಿ ಕಾರ್ಮಿಕರಿಗೆ, ಸಿನಿಮಾ ಕಾರ್ಮಿಕರಿಗೆ, ಅಗರಬತ್ತಿ ಕಾರ್ಮಿಕರಿಗೆ ಸ್ವಲ್ಪವಾದರೂ ಸಹಾಯವಾಗುತ್ತಿತ್ತು. ಈ ಕಾರ್ಮಿಕ ಸಂಘಗಳವರು ಧರಣಿ ಮಾಡಿದ್ದಾರೆ, ಸತ್ಯಾಗ್ರಹ ಮಾಡಿದ್ದಾರೆ, ಮೆರವಣಿಗೆ ಮಾಡಿದ್ದಾರೆ, ಮಂತ್ರಿಗಳ ಜೊತೆ ಮಾತನಾಡಿದ್ದಾರೆ, ಆದರೂ ಇತ್ಯರ್ಥವಾಗಿಲ್ಲ. ಯಾರೋ ಒಬ್ಬರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದಿದ್ದನ್ನು ನೋಡಿ ಬೇರೆ ಎಲ್ಲಾ ಕಾರ್ಖಾನೆಗಳ ಮಾಲೀಕರೂ ಇದನ್ನೇ ಮುಂದಿಟ್ಟುಕೊಂಡು ತೋರಿಸುತ್ತಿದ್ದಾರೆ. ಈ ತಡೆಯಾಜ್ಞೆ ಸಿಕ್ಕಿರುವುದು ಯಾರು ಕೋರ್ಟಿಗೆ ಹೋಗಿದ್ದರೋ ಅವರಿಗೆ ಮಾತ್ರ. ಆದರೆ ಬೇರೆಯವರೂ ಇದನ್ನೇ ತೋರಿಸುತ್ತಿದ್ದಾರೆ. ಕನಿಷ್ಠ ಕೂಲಿಯನ್ನು ಕೊಡದೇ ಇರತಕ್ಕ ಮಾಲೀಕರ ಮೇಲೆ ಸರ್ಕಾರವಾಗಲಿ, ಕಾರ್ಮಿಕ ಇಲಾಖೆಯಾಗಲಿ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ? ನಾವು ಒಂದು ಬೋರ್ಡ್ ಅನ್ನು ಮಾಡಿದ್ದೇವೆ, ಅದು ತೀರ್ಮಾನ ಮಾಡುತ್ತದೆಂದು ಹೇಳುತ್ತಿದ್ದೀರಿ. ಆದರೆ ಆ ಬೋರ್ಡಿನ ಬಗ್ಗೆ ನನಗೆ ನಂಬಿಕೆ ಇಲ್ಲ. ಅದು ನಂಬಿಕೆಯನ್ನು ಹುಟ್ಟಿಸತಕ್ಕ ಬೋರ್ಡ್ ಅಲ್ಲ. ಏಕೆಂದರೆ ಅದರಲ್ಲಿರುವ ಹೆಸರುಗಳನ್ನು ನೋಡಿದರೆ ಹಾಗೆ ಎನಿಸುತ್ತದೆ. ಕಾರ್ಮಿಕ ವರ್ಗದ 7 ಜನ ನಾಯಕರನ್ನು ಅದರಲ್ಲಿ ಹಾಕಿದ್ದೀರಿ. ಇದವರೆಗೆ 5 ಜನ ಸರ್ಕಾರದ ಪ್ರತಿನಿಧಿಗಳು, 5 ಜನ ಕಾರ್ಮಿಕ ಪ್ರತಿನಿಧಿಗಳು ಮತ್ತು 5 ಜನ ಮಾಲೀಕರ ಪ್ರತಿನಿಧಿಗಳು ಇರುತ್ತಿದ್ದರು. ಆದರೆ ಯಾವ ಉದ್ದೇಶದಿಂದ ಈ 7 ಜನ ಕಾರ್ಮಿಕ ವರ್ಗದ ಪ್ರತಿನಿಧಿಗಳನ್ನು ಹಾಕಿದ್ದೀರೆಂಬುದನ್ನು ದಯವಿಟ್ಟು ಹೇಳಬೇಕು. ತಮ್ಮ ಮನಸ್ಸಿಗೆ ಬಂದವರಿಗೆ ಯಾರಿಗಾದರೂ ಕೊಡಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿದ್ದೀರೋ ಏನೋ ಗೊತ್ತಿಲ್ಲ. ಅವರು ಯಾರು ? ಯಾರೋ ಬೀಡಿ ವರ್ಕರ್ಸ್ ಫೆಡರೇಷನ್‌ನವರನ್ನು ಹಾಕಿದ್ದೀರಿ. ಆದರೆ ಅವರು ಯಾವ ಬೀಡಿ ವರ್ಕರ್ಸ್ ಫೆಡರೇಷನ್‌ನವರೋ ಗೊತ್ತಿಲ್ಲ. ಬೀಡಿ ಫೆಡರೇಷನ್ ಎಂದು ಇದೆ, ಅದು ಯಾವುದು ಎನ್ನುವುದು ನಮಗೆ ಗೊತ್ತಿಲ್ಲ. ಬೀಡಿ ವರ್ಕರ್ಸ್ ಫೆಡರೇಷನ್ ಎಂದು ನಮ್ಮದು ಇದೆ. ಸಿ.ಪಿ.ಎಂ. ಮಾನ್ಯ ಸೂರ್ಯನಾರಾಯಣರಾವ್ ಅವರದು ಒಂದು ರೈತ ಸಂಘ ಎಂದು ಇದೆ. ಮತ್ತೆ ಮಾನ್ಯ ಅಜೀಜ್‌ಸೇಠ್‌ರವರ ಬೀಡಿ ವರ್ಕರ್ಸ್ ಫೆಡರೇಷನ್ ಎಂದು ಇದೆ. ಅವರಿಗೆಲ್ಲ ಒಂದು ಸಂದರ್ಶನಕ್ಕೆ ಅವಕಾಶ ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಕೆ.ಐ.ಸಿ.ಸಿ. ಮತ್ತು ಸಿ.ಐ.ಟಿ.ಯು., ಐ.ಎನ್.ಟಿ.ಸಿ. ಇವರಿಗೆಲ್ಲರಿಗೂ ಸಂದರ್ಶನಕ್ಕೆ ಅವಕಾಶ ಕೊಡಬೇಕಾಗಿತ್ತು. ಅಂದು ಕರ್ನಾಟಕ ಪ್ರಾಂತ್ಯ ರೈತ ಸಂಘ ಎಂದು ಪ್ರಾತಿನಿಧ್ಯವನ್ನು ಕೊಟ್ಟಿರುತ್ತೀರಿ. ಅದು ಯಾವುದು ಎನ್ನುವುದು ಗೊತ್ತಿಲ್ಲ. ಮಾನ್ಯ ರುದ್ರಪ್ಪನವರ ಹೆಸರಿನಲ್ಲಿ ಒಂದು ರೈತ ಸಂಘ ಇದೆ. ನಮ್ಮದು ಒಂದು ಕರ್ನಾಟಕ ಪ್ರಾಂತ್ಯ ರೈತ ಸಂಘ ಎಂದು ಒಂದು

ಇದೆ. ನಮ್ಮ ಸ್ನೇಹಿತರಾದ ಸೂರ್ಯನಾರಾಯಣರಾವ್ ಅವರದು ಒಂದು ಸಂಘ ಇದೆ. ರೇವಣ ಸಿದ್ದಪ್ಪ ನವರದು ಒಂದು ರೈತ ಸಂಘ ಇದೆ. ಅಗ್ರಿಕಲ್ಚರ್ ಕೃಷಿ ಕಾರ್ಮಿಕ ರೈತ ಸಂಘ ಇದೆ. ಹಾಗೇ ನಮ್ಮ ಭಾರತೀಯ ಜನತಾ ಪಕ್ಷದ್ದು ಇದೆ, ಭಾರತೀಯ ಮಜದೂರ್ ರೈತ ಸಂಘ ಇದೆ. ಇದಕ್ಕೆಲ್ಲ ಏತಕ್ಕೆ ಕೊಡಲಿಲ್ಲ ? ಅವರಿಗೂ ಕೊಡಬೇಕಾಗಿತ್ತು. ನಾನು ಅವರಿಗೆ ಪ್ರಾತಿನಿಧ್ಯ ಕೊಡಬೇಡಿ ಎಂದು ಹೇಳುವುದಿಲ್ಲ. ನೀವು ಪ್ರಾತಿನಿಧ್ಯವನ್ನು ಕೊಟ್ಟಿರುತ್ತೀರಲ್ಲಾ ಅದು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ? ಇಷ್ಟು ಮಾತ್ರವೇ ಅಲ್ಲ, ಅದರಲ್ಲಿ ಅಧಿಕಾರಿಗಳನ್ನು ಮಾತ್ರ ಹಾಕಿದ್ದೀರಿ. ರಿಟೈರ್ಡ್ ಆಗಿರತಕ್ಕಂಥ ಅಧಿಕಾರಿಗಳು ಕೆಲವರನ್ನು ಇಲ್ಲಿ ಹಾಕಿದ್ದೀರಿ. ಅದರ ಬಗ್ಗೆ ನಾನು ವೈಯಕ್ತಿಕವಾಗಿ, ಒಂದು ವಿಷಯವನ್ನು ನನ್ನ ಅನುಭವದಲ್ಲಿ, ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ನೀವು ಹಾಕಿರತಕ್ಕಂಥ ಜನಗಳ ಬಗ್ಗೆ ನಾನು ಆರೋಪಣೆಯನ್ನು ಹಿಂದೆಯೇ ಕೇಳಿದ್ದೇನೆ. ಭ್ರಷ್ಟಾಚಾರದ ಆರೋಪಣೆ, ಅದಕ್ಷತೆ, ಅಪ್ರಮಾಣಿಕತೆ, ಇರತಕ್ಕಂಥ ಕೆಲವು ಅಧಿಕಾರಿಗಳನ್ನು ಆ ಬೋರ್ಡ್‌ನಲ್ಲಿ ಹಾಕಿದರೆ ಕನಿಷ್ಠ ಕೂಲಿ ಶಾಸನ ಎಷ್ಟು ದೂರ ಹೋಗುತ್ತದೆ, ಯಾವ ರೀತಿ ನಿಷ್ಕರ್ಷೆ ಮಾಡುತ್ತಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ನನಗೆ ಏನು ಅನಿಸುತ್ತದೆ ಎಂದರೆ ಇದನ್ನು ಪುನರ್ ವಿಮರ್ಶೆ ಮಾಡಿ, ಇದನ್ನು ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಹೇಳುತ್ತೇನೆ. ನನ್ನ ಅನುಭವದ ಪ್ರಕಾರ ಮಾನ್ಯ ಸಚಿವರು ವೇಜ್ ಬೋರ್ಡ್‌ನವರೆಲ್ಲರನ್ನೂ ಕೇಳಿ ಸಲಹೆ ಪಡೆಯಬೇಕಾಗಿತ್ತು. ನಿಮಗೆ ಯಾರು ಈ ಸಲಹೆಯನ್ನು ಮಾಡಿದ್ದು ? ಶ್ರೀಮಾನ್ ರಾಮ್‌ದೇವ್‌ರವರು ಸಲಹೆಯನ್ನು ಮಾಡಿದರೋ ಅಥವಾ ಶ್ರೀಮಾನ್ ಪರ್ನಾಂಡೀಸ್ ಸಲಹೆ ಮಾಡಿದರೋ ಗೊತ್ತಾಗಲಿಲ್ಲ.

ಶ್ರೀ ಪಿ. ರಾಮ್‌ದೇವ್.—ನಮ್ಮನ್ನು ಕೇಳಲೂ ಇಲ್ಲ, ನಮ್ಮ ಸಲಹೆಯನ್ನು ಪಡೆಯಲೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆರಂಭಶೂರರು, ಮೊದಲು ನಮ್ಮನ್ನು ಕರೆದರು, ಒಳ್ಳೆಯ ಚಾ ಕೊಟ್ಟರು, ಬಿಸ್ಕೆಟ್ ತಿಂಡಿ ಎಲ್ಲ ಕೊಟ್ಟರು, ಚೀಫ್ ಮಿನಿಸ್ಟರ್ ಇದ್ದರು, ಮಾನ್ಯ ಅಜೀಜ್‌ಸೇಠ್‌ರವರು ಇದ್ದರು, ಶ್ರೀಮಾನ್ ಪಾಟೀಲರು ಇದ್ದರು, ಕಾರ್ಮಿಕ ಮಂತ್ರಿಗಳಾಗಿದ್ದವರು ಕಾರ್ಮಿಕರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇನ್ನೇನು ಎಲ್ಲಾ ಸರಿಮಾಡಿಬಿಡುತ್ತೇವೆ ಎಂದು, ಮಾನ್ಯ ಅಜೀಜ್‌ಸೇಠ್ ಅವರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಇದ್ದು ಏನೋ ಬಹಳ ಆಶೆಯನ್ನು ಇಟ್ಟುಕೊಂಡಿದ್ದೆವು. ನಾವೇನು ಎಲ್ಲಾ ವಿಷಯಗಳಿಗೂ ನಮ್ಮನ್ನು ಕರೆಯಬೇಕೆಂದು ಹೇಳಲಿಲ್ಲ. ಇಂಥ ಕೆಲವೊಂದು ವಿಷಯಗಳಿಗೆ ಕರೆಯಬೇಕೆಂದು ನಾವು ಹೇಳುವುದು ಅಷ್ಟೆ. ಏತಕ್ಕೆಂದರೆ ಸುಮಾರು 26–35 ಲಕ್ಷ ಜನ ಕಾರ್ಮಿಕರು ಇರುವಂಥ ನಮ್ಮ ರಾಜ್ಯದಲ್ಲಿ ಮಿನಿಮಮ್ ವೇಜ್ ಬೋರ್ಡ್ ಯಾವ ರೀತಿ ಇರಬೇಕು ? ಅಸೋಸಿಯೇಷನ್ ಯಾವ ರೀತಿ ಇರಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿದ್ದರೆ ಒಳ್ಳೆಯದಾಗಿರುತ್ತಿತ್ತು. ಅದೇ ದಾರಿಯಲ್ಲಿ ಹೋದರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. ಅಡ್ಡದಾರಿಯಲ್ಲಿ ಹೋಗದೆ ಸರಿಯಾದ ದಾರಿಯಲ್ಲಿ ಹೋಗಬೇಕೆಂದು ಮತ್ತೊಮ್ಮೆ ನಾನು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರ, ಕೈಗಾರಿಕಾ ಬಾಂಧವ್ಯ ಸರಿಯಾಗಿ ಇರಬೇಕಾದರೆ ಅತಿಮುಖ್ಯವಾಗಿ ಇದರ ಅಸ್ತಿಭಾರ ಸರಿಯಾಗಿರಬೇಕು. ತಮಗೆ ಗೊತ್ತಿರುವ ಹಾಗೆ, ಕಾನೂನುಗಳನ್ನು, ಅವಾರ್ಡ್‌ಗಳನ್ನು, ತೀರ್ಮಾನಗಳನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದರೆ ತೀರ್ಮಾನಗಳು ಜಾರಿಗೆ ಬರುವುದು ಇರಲಿ, ಅವಾರ್ಡ್ ಕೊಟ್ಟ ತಕ್ಷಣ ಕೋರ್ಟ್‌ಗಳಿಗೆ ಮಾಲೀಕರು ಹೋಗಿ ರಿಟ್ ಅಪ್ಲಿಕೇಷನ್ ಹಾಕಿಬಿಡುತ್ತಾರೆ. ಏತಕ್ಕೆಂದರೆ ಮಾಲೀಕರ ಹತ್ತಿರ ದುಡ್ಡು ಇರುತ್ತದೆ. ಬಂಡವಾಳ ಇರುತ್ತದೆ. ಆದ್ದರಿಂದ ತಕ್ಷಣ ರಿಟ್ ಹಾಕಿಬಿಡುತ್ತಾರೆ. ಆದರೆ ನಮ್ಮ ಕಾರ್ಮಿಕರ ಹತ್ತಿರ ದುಡ್ಡು ಇರುವುದಿಲ್ಲ, ಅವರು ಆ ರೀತಿ ಹೋಗಲು ಸಾಧ್ಯವಾಗುವುದಿಲ್ಲ. ಇವರು ಹೈಕೋರ್ಟಿಗೆ ಹೋಗುತ್ತಾರೆ, ಯಾರೋ ಒಬ್ಬ ಲಾಯರನ್ನು ಹಿಡಿದು ಸಾವಿರಾರು ರೂಪಾಯಿಗಳನ್ನು ಕೊಟ್ಟು ತಕ್ಷಣವೇ ಸ್ಟೇ ಆರ್ಡರನ್ನು ತಂದುಬಿಡುತ್ತಾರೆ, ಅವರಿಗೆ ಸ್ಟೇ ಆರ್ಡರನ್ನು ಕೊಟ್ಟುಬಿಡುತ್ತಾರೆ. ಇನ್ನೊಂದು ಕಷ್ಟ ಪರಿಸ್ಥಿತಿ ಎಂದರೆ ಬೇಕಾದಷ್ಟು ಕೇಸ್ ಇದರಿಂದಾಗಿ ಹೈಕೋರ್ಟಿನಲ್ಲಿ ಕೊಳೆಯುತ್ತಾ ಇವೆ. ನಾನು ವೈಯಕ್ತಿಕವಾಗಿ ಯಾರನ್ನೂ ಟೀಕೆ ಮಾಡುತ್ತಾ ಇಲ್ಲ. ಈವತ್ತಿನ ದಿವಸ ರಿಟ್ ಪಿಟಿಷನ್ಸ್ ಹೈಕೋರ್ಟ್‌ನಲ್ಲಿ ಐದು ಸಹಸ್ರ ಕಾರ್ಮಿಕರಿಗೆ ಅನ್ವಯಿಸತಕ್ಕಂಥದ್ದು ಇದೆ ಎಂದು ತಿಳಿದುಬಂದಿದೆ. ಅದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ಐದು ಸಾವಿರ ರಿಟ್ ಪಿಟಿಷನ್ಸ್ ಕಾರ್ಮಿಕರಿಗೆ ಅನ್ವಯಿಸತಕ್ಕಂಥದ್ದು 1974–75 ನೇ ಇಸವಿಯಿಂದ ಇಲ್ಲಿಯವರೆಗೆ ಅಂದರೆ 1983 ನೇ ಇಸವಿಯವರೆಗೆ ಹೀಗೆ ಪೆಂಡಿಂಗ್ ಇದ್ದರೆ ಯಾವ ರೀತಿ ನ್ಯಾಯ ದೊರಕುವುದಕ್ಕೆ ಸಾಧ್ಯವಾಗುತ್ತದೆ ? ತಾವೇ ಯೋಚನೆ ಮಾಡಿ. ತಾವು ಮಂತ್ರಿಗಳಾಗಿರುವುದರಿಂದ ತಮಗೆ ಗೊತ್ತಿದೆ. ಇದು ಹೇಗೆ ಎನ್ನುವುದನ್ನು ಹೇಳಬೇಕು. ಯಾವುದೇ ರಿಟ್ ಪಿಟಿಷನ್ ಬಂದರೆ ಅದನ್ನು ಯೋಚನೆ ಮಾಡಿ ಅಡ್ಮಿಟ್ ಮಾಡಿಕೊಳ್ಳಬೇಕೇ ಅಥವಾ ರಿಟ್ ಪಿಟಿಷನ್ ಬಂದ ತಕ್ಷಣವೇ ಏನೂ ಯೋಚನೆ ಮಾಡದೇ ಅಡ್ಮಿಟ್ ಮಾಡಿಕೊಳ್ಳಬಹುದೇ ಎನ್ನುವುದು ಮುಖ್ಯವಾದ ಪ್ರಶ್ನೆ. ಇದು ಹೈಕೋರ್ಟಿಗೆ ಬಿಟ್ಟಿರತಕ್ಕಂಥದ್ದು. ಮತ್ತೆ ಈವತ್ತು ಏನಾಗಿದೆ ಎಂದರೆ, ಯೋಚನೆ ಮಾಡದೆ ರಿಟ್ ಪಿಟಿಷನ್ ಒಪ್ಪಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ ಮತ್ತು ಜಾರಿಯೂ ಕೂಡ ಆಗಿದೆ. ಕಾರ್ಮಿಕರ ಸಂಬಂಧ ಮತ್ತು ಮಾಲೀಕರ ಸಂಬಂಧ ಮುಖ್ಯವಾದ ಸಂಬಂಧ. ಆದ್ದರಿಂದ ನಾನು ಇದನ್ನು ಹೇಳುತ್ತಾ ಇರುವುದು.

ನಾನು ಹೈಕೋರ್ಟನ್ನು ಟೀಕೆ ಮಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಹೀಗೆ ಅನೇಕ ಸಮಸ್ಯೆಗಳು ಹಾಗೆಯೇ ಕೊಳೆಯುತ್ತಾ ಇವೆ.

ಶ್ರೀ ಕೆ. ಹೆಚ್. ರಂಗನಾಥ್.—ನಂಬೂದರಿಪಾಡ್ ಏನು ಹೇಳಿದ್ದಾರೆಂದರೆ Class from which you come.

ಶ್ರೀ ಎಂ. ಎಸ್. ಕೃಷ್ಣನ್.—Sri Ranganath says it depends upon the class from which you come. ಅಲ್ಲೂ ಕೂಡ ತಪ್ಪಾಗುತ್ತದೆ.

ಶ್ರೀ ಎಂ. ರಘುಪತಿ.—ಭಾಷಣ ಮಾಡುವುದು ಬಹಳ ಸುಲಭ.

ಶ್ರೀ ಕೆ. ಹೆಚ್. ರಂಗನಾಥ್.—ಐದು ಸಾವಿರ ರಿಟ್ ಪಿಟಿಷನ್ಸ್. ತಾವು ವಕೀಲರಾಗಿ ಇರಲಿಲ್ಲ.

ಶ್ರೀ ಎಂ. ರಘುಪತಿ.—ಅದು ನಮ್ಮ ಕಾಲದಲ್ಲ, ನಿಮ್ಮ ಕಾಲದ್ದು.

ಶ್ರೀ ಕೆ. ಹೆಚ್. ರಂಗನಾಥ್.—ವಕೀಲನಾಗಿ ಕೆಲಸ ಮಾಡಿದ ನಾನು ಮಾನ್ಯ ಕೃಷ್ಣನ್‌ರವರಿಗೆ ಹೇಳುವುದೇನೆಂದರೆ, ರಿಟ್ ಪಿಟಿಷನ್ಸ್ ಹೋಗುತ್ತದೆ, ನೋಡುತ್ತಾರೆ, ವಕೀಲರು ಯಾರು ಎಂದು ಹೇಳುತ್ತಾರೆ. "ಅಡ್ಮಿಟೆಡ್ ಸ್ಟೇ ಗ್ರ್ಯಾಂಟೆಡ್" ಎಂದು ಹೇಳುತ್ತಾರೆ. ನಾನು ನೀವು ಮಂತ್ರಿಯಾಗಿರುವುದು ಅವರಿಗೆ ಹೇಳುತ್ತಿಲ್ಲ.

ಶ್ರೀ ಪಿ. ರಾಮ್‌ದೇವ್.—ಎಷ್ಟೋ ಕಮಿಷನ್ ಮೇಲೆ ಅಡ್ಮಿಟ್ ಮಾಡಿಕೊಳ್ಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಖಾಸಗಿಯವರ ರಿಟ್ ಪಿಟಿಷನ್ ತೆಗೆದುಕೊಳ್ಳುವುದೇ ಇಲ್ಲ. ಮಾನ್ಯ ಪ್ರಕಾಶ್‌ರವರದು ಟ್ರಾನ್ಸ್‌ಪೋರ್ಟ್‌ನಲ್ಲಿಯೂ ಅದೇ ಗೋಳು. ತೀರ್ಮಾನ ತೆಗೆದುಕೊಳ್ಳತಕ್ಕಂಥ ಕಾಲದಲ್ಲಿ ಕೆಳಗಿನ ಕೋರ್ಟಿನಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಹೈಕೋರ್ಟಿಗೆ ಹೋದರೂ ಅದೇ ತೀರ್ಮಾನ. ಕೆ.ಎಸ್.ಆರ್‌ಟಿ.ಸಿ. ವರ್ಕರ್ ರಾಮಕೃಷ್ಣನನ್ನು ಜಾಯಿಂಟ್ ಸೆಕ್ರಟರಿಯವರು ಆಕ್ಸಿಡೆಂಟ್ ಏನೋ ಕಾರಣಕ್ಕಾಗಿ ಡಿಸ್‌ಮಿಸ್ ಮಾಡಿಬಿಟ್ಟರು. ಡಿಸ್‌ಮಿಸ್ ಮಾಡಿದ ಮೇಲೆ ಅವರು ಎರಡು ಸಾರಿ ಹೈಕೋರ್ಟಿಗೆ ತೆಗೆದುಕೊಂಡು ಹೋದರು. ಹೈಕೋರ್ಟಿಗೆ ತೆಗೆದುಕೊಂಡು ಹೋದರೂ ಕೆಳಗಿನ ಕೋರ್ಟಿನಲ್ಲಿ ಏನು ತೀರ್ಮಾನವಾಗಿತ್ತೋ ಮೂರು ತಿಂಗಳ ಸಂಬಳವನ್ನು ಕೊಟ್ಟು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಅದೇ ತೀರ್ಮಾನ ಮೂರು ತಿಂಗಳ ಸಂಬಳವನ್ನು ಕೊಟ್ಟು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಬಂದಿತು. ಮತ್ತೆ ಬಂದರು. ಮಾನ್ಯ ಪ್ರಕಾಶ್‌ರವರನ್ನು ಹಿಡಿದು ಏತಕ್ಕೆ ಹೀಗೆ ಮಾಡುತಿದ್ದೀರಿ, ಅವರು ರಿಟೈರ್ ಆಗುವ ಸಮಯ ಎಂದು ಹೇಳಿದ ಮೇಲೆ ಏನು ತೀರ್ಮಾನ ಮಾಡಿದರು ಎಂದರೆ ಕೆಲಸದ ಮೇಲೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಬೇಕಾದರೆ ಸಂಬಳವನ್ನು ಮಾತ್ರ ಕೊಡುತ್ತೇವೆಂದು ಹೇಳಿದರು. ಇದು ಅನ್ಯಾಯವಲ್ಲವೇ? ಇವರೂ ಸಹ ಟಾಟಾ ಬಿರ್ಲಾ ತರಹ ವ್ಯಾಪಾರ ಮಾಡುವುದು ಸರಿಯೇ? ಇದು ನ್ಯಾಯವಲ್ಲ. ಕೆಲಸಕ್ಕೆ ವಾಪಸ್ ತೆಗೆದುಕೊಳ್ಳಬೇಕೆಂದು ತಿಳಿಸಿದರೂ ಸಹ ಇವರು ಈ ರೀತಿ ನಡೆದುಕೊಂಡರೆ ಹೇಗೆ? ಎಕ್ಸ್‌ಟೆನ್‌ಷನ್ ಕೊಡಬೇಕಾಗಿತ್ತು. ಆದರೆ ಕೊಡಲಿಲ್ಲ. ಮಾನ್ಯ ರಾಮ್‌ದೇವ್‌ರವರು ಹೇಳಿದ್ದರಿಂದ ಇದನ್ನು ಹೇಳಬೇಕಾಯಿತು. ಯಾವುದೇ ಕೇಸ್ ತೆಗೆದುಕೊಂಡು ಹೋಗಲಿ, ಹೈಕೋರ್ಟಿನಲ್ಲಿ ಸ್ಟೇ ಸಿಗುತ್ತದೆ. There was no point of law. Nothing was involved in it. ಆದರೂ ಮೊದಲು ಸ್ಟೇ ಕೊಟ್ಟು ಆಮೇಲೆ ತಳ್ಳಿಹಾಕುತ್ತಾರೆ, ನಮ್ಮ ಕಾರ್ಮಿಕರು ಈ ರೀತಿಯೆಲ್ಲಾ ಕಷ್ಟಪಡಬೇಕಾಗಿದೆ. ಶ್ರೀ ಎ. ಸುಬ್ಬರಾವ್ ಎಂಬುವರು ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್‌ನಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಇವರನ್ನು ಯಾವುದೋ ಕಾರಣಕ್ಕಾಗಿ ಅಕ್ಟೋಬರ್ 1970 ರಲ್ಲಿ ಕೆಲಸದಿಂದ ತೆಗೆದುಹಾಕಿದರು. ನಂತರ ಇವರು 32(ಬಿ) ಪ್ರಕಾರ ತಮಗೆ ಇಷ್ಟು ಹಣ ಬರಬೇಕೆಂದು ಕೋರ್ಟಿಗೆ ಹೋದರು. 1975 ರಲ್ಲಿ ಕೋರ್ಟಿನವರು 22,929 ರೂಪಾಯಿಗಳನ್ನು ಇವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದರು. ಆದರೆ ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಅವರು ಈ ಹಣ ಕೊಡಲು ಒಪ್ಪದೆ ಹೈಕೋರ್ಟಿಗೆ ಹೋದರು. ಈ ರಿಟ್ ಅಪ್ಲಿಕೇಷನ್ ನಂ. 1958 : 76 ಇದನ್ನು ತಾವು ಸ್ವಲ್ಪ ತರಿಸಿ ನೋಡಬೇಕು. 1976 ರಲ್ಲಿ ಸ್ಟೇ ಕೊಟ್ಟರೆ ಮೊನ್ನೆ ಆರ್ಗ್ಯುಮೆಂಟಿಗೆ ಬಂದಿದೆ. ಹೋದ ವಾರ ಸಿಂಗಲ್–ಜಡ್ಜ್ ಅವರು ವರ್ಕರ್ ಪರವಾಗಿಯೇ 22 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಕೊಟ್ಟರೂ ಸಹ ಶ್ರೀ ಸುಬ್ಬರಾವ್ ಅವರು ಈ ಹಣ ತೆಗೆದುಕೊಳ್ಳಲೂ ಇಲ್ಲ. ಅವರು ಕಾಲವಾಗಿದ್ದಾರೆ. ಈ 22 ಸಾವಿರ ರೂಪಾಯಿಗಳನ್ನು ಪಡೆಯಲು 13 ವರ್ಷಗಳು ಬೇಕಾಯಿತು. ಕಾರ್ಮಿಕರು ಮತ್ತು ಮಾಲೀಕರಿಗೆ ಸಂಬಂಧಪಟ್ಟಂತೆ ಇಂತಹ ನೂರೆಂಟು ಕೇಸ್‌ಗಳಿವೆ. ಇವುಗಳು ಬಹಳ ನಿಧಾನವಾಗಿ ತೀರ್ಮಾನವಾಗುತ್ತಿವೆ. ಆದ್ದರಿಂದ ಸರ್ಕಾರದವರು ಒಂದು ಕಡೆ ಪ್ರತಿ ಕೇಸ್‌ಗೆ ಸಂಬಂಧಪಟ್ಟಂತೆ ರಿಟ್‌ಗಳನ್ನು ಅಡ್ಮಿಟ್ ಮಾಡಿಕೊಳ್ಳುವುದರ ಬಗ್ಗೆ ಗಮನ ಹರಿಸಬೇಕು ಮತ್ತೊಂದು ಕಡೆ ಇವು ಅಲ್ಲಿ ಬಹಳ ನಿಧಾನವಾಗಿ ತೀರ್ಮಾನವಾಗುತ್ತಿರುವುದನ್ನು ತಪ್ಪಿಸಬೇಕು. ನನ್ನ ಅಭಿಪ್ರಾಯದಲ್ಲಿ ಹೈಕೋರ್ಟಿನಲ್ಲಿ ಇಂತಹ ಕೇಸ್‌ಗಳು ಬಹಳ ನಿಧಾನವಾಗಿ ತೀರ್ಮಾನವಾಗುತ್ತಿರುವುದನ್ನು ತಪ್ಪಿಸಲು ಒಂದು ಪ್ರತ್ಯೇಕ ಲೇಬರ್–ಬೆಂಚನ್ನು ಸ್ಥಾಪಿಸುವುದು ಒಳ್ಳೆಯದು. ಇಲ್ಲಿ ಕೇವಲ ಲೇಬರ್ ಕೇಸ್‌ಗಳನ್ನು ಮಾತ್ರ ತೆಗೆದುಕೊಳ್ಳಬೇಕು. ಜಾಗ್ರತೆಯಾಗಿ

ಇಂತಹ ಕೇಸ್‌ಗಳನ್ನು ತೀರ್ಮಾನ ಮಾಡುವುದರ ಮೂಲಕ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಕೊಟ್ಟಂತಹ ಅವಾರ್ಡ್‌ಗಳನ್ನು ಜಾರಿಗೆ ಕೊಡುವುದು ಮುಖ್ಯ. ಅಲ್ಲಿ ಅನೇಕ ಮಾಲೀಕರುಗಳು ಕೋರ್ಟಿನ ತೀರ್ಮಾನವನ್ನು ಜಾರಿಗೆ ತರುವುದಿಲ್ಲ. ಈಗಿನ ಕಾನೂನು ಪ್ರಕಾರ ಇಂತಹವರ ಮೇಲೆ ತಾವು ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇದರಿಂದ ಅವರು ತಪ್ಪಿಸಿಕೊಂಡು ಹೋಗುತ್ತಾರೆ. ಒಂದು ವೇಳೆ ತಾವು ಏನಾದರೂ ನೋಟೀಸ್ ಕೊಟ್ಟರೆ ಅವರು ಏನೋ ಒಂದು ಉತ್ತರ ಕೊಡುತ್ತಾರೆ. ಇದೇ ಕಾರಣದಿಂದ ಕೆಲವು ಸಲ ಸ್ಟ್ರೈಕ್‌ಗಳಾಗುವುದೂ ಸಹ ಉಂಟು. ಸರ್ಕಾರದ ಅಧೀನದಲ್ಲಿರುವಂತಹ ಸಂಸ್ಥೆಗಳೇ ಎಷ್ಟೋ ಸಲ ಆ ಅವಾರ್ಡ್‌ಗಳನ್ನು ಕಾರ್ಯರೂಪದಲ್ಲಿ ತರುವುದಿಲ್ಲ. ಕಾನೂನು ಇದ್ದರೂ ಸಹ ಜಾರಿಗೆ ತರುವುದಿಲ್ಲ. ಕೆಲವು ಸಲ ಹೆದರಿಕೊಂಡು ಅವಾರ್ಡ್‌ಗಳನ್ನು ಜಾರಿಗೆ ಕೊಡಬಹುದು. ಆದರೆ ಬಹಳ ಕೇಸ್‌ಗಳಲ್ಲಿ ಕಾರ್ಯಗತ ಮಾಡುತ್ತಿಲ್ಲ. ಇದಕ್ಕೆ ಮತ್ತೊಂದು ಉದಾಹರಣೆ ಕೊಡಬೇಕೆಂದರೆ, ಮಾನ್ಯ ದೇವೇಗೌಡರ ಇಲಾಖೆಗೆ ಸಂಬಂಧಪಟ್ಟಂತೆ ಹೈದರಾಬಾದ್–ಕರ್ನಾಟಕ ಏರಿಯಾದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುವಂತಹ ಗ್ಯಾಂಗ್‌ಮನ್ ವರ್ಕರ್ಸ್ ಯೂನಿಯನ್ ಇದೆ. ಈ ಯೂನಿಯನ್ ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿದೆ. ಕೆಲಸವರಿಗೆ 22 ರಿಂದ 30 ಸಾವಿರದವರೆಗೆ ಬಾಕಿ ಬರಬೇಕಾಗಿದೆ. ಟ್ರಿಬ್ಯೂನಲ್ ತೀರ್ಮಾನವಾಗಿದೆ ಹಾಗೂ ಕೋರ್ಟಿನ ತೀರ್ಮಾನವಾಗಿದೆ. ಆದರೆ ಈ ತೀರ್ಮಾನಗಳನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ಮತ್ತು ಈ ತೀರ್ಮಾನದ ವಿರುದ್ಧ ಹೈಕೋರ್ಟಿಗೂ ಹೋಗಿಲ್ಲ. ಈ ರೀತಿಯಾಧರೆ ಈ ಬಡ ಕಾರ್ಮಿಕರು ಇನ್ನು ಯಾರನ್ನು ಕೇಳಬೇಕು ? ಇಷ್ಟೊಂದು ನಿಧಾನವಾದರೆ ಅವರ ಪರಿಸ್ಥಿತಿ ಏನಾಗಬೇಕು ? ಕೆ.ಎಸ್.ಆರ್.ಟಿ.ಸಿ.ಯಲ್ಲಿಯೂ ಸಹ ಇದೇ ರೀತಿ ಆಗುತ್ತಿದೆ. ಯಾವುದೇ ಒಂದು ಲೇಬರ್ ಕೋರ್ಟು ಕೊಟ್ಟ ತೀರ್ಮಾನವಾಗಲೀ, ಟ್ರಿಬ್ಯುನಲ್ ಕೊಟ್ಟ ತೀರ್ಮಾನವಾಗಲೀ ಕೂಡಲೇ ಅದನ್ನು ಜಾರಿಗೆ ತರಬೇಕು, ಇದರ ವಿರುದ್ಧ ಸುಮ್ಮಸುಮ್ಮನ ಮೇಲಿನ ಹೈ ಕೋರ್ಟಿಗೆ ಹೋಗುವುದು ಸರಿಯಲ್ಲ ಎಂಬುದನ್ನು ತ್ರಿಪಕ್ಷೀಯ ಸಮ್ಮೇಳನದಲ್ಲಿ ತೀರ್ಮಾನಕ್ಕೆ ಬಂದಿದ್ದರೂ ಸಹ ಅದು ಅನುಷ್ಠಾನದಲ್ಲಿ ಮಾತ್ರ ಬಂದಿಲ್ಲ. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನವರು ಇದೇ ವಿಚಾರದಲ್ಲಿ ಏನು ಒಂದು ನೀತಿ ನಿರೂಪಣೆ ಮಾಡಿದ್ದಾರೆ, ಅದೂ ಸಹ ಕಾರ್ಯರೂಪದಲ್ಲಿ ಬಂದಿಲ್ಲ. ಮುಖ್ಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳೇ ಇಂತಹ ಅವಾರ್ಡ್‌ಗಳನ್ನು ಕಾರ್ಯಗತ ಮಾಡದಿದ್ದರೆ ಏನು ಮಾಡಬೇಕು ? ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ದೇವೇಗೌಡರನ್ನು ಅಲ್ಲಾಡಿಸುವುದಕ್ಕಾಗುವುದಿಲ್ಲವೆಂದು ಮಾನ್ಯ ರಘುಪತಿಯವರು ಹೇಳಬಹುದು. ಆದರೆ ನಿಮಗೆ ಅನೇಕ ವಿಚಾರಗಳಲ್ಲಿ ಏನು ಒಂದು ಧೈರ್ಯ ಮತ್ತು ಕೆಚ್ಚೆದೆ ಇದೆ, ಅದನ್ನು ಇಲ್ಲಿಯೂ ತೋರಿಸಬೇಕೆಂದು ಹೇಳುತ್ತೇನೆ. ಕೈಗಾರಿಕಾ ಸಂಬಂಧ ಚೆನ್ನಾಗಿರಬೇಕಾದರೆ ಇಂತಹ ವಿವಾದಗಳನ್ನು ಜಾಗ್ರತೆ ಇತ್ಯರ್ಥಪಡಿಸಬೇಕು. ಇಂತಹ ವಿವಾದಗಳು ಏನಾದರೂ ಇದ್ದರೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಸಂಬಂಧಪಟ್ಟವರನ್ನು ಕರೆಯಿಸಿ ಒಂದು ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಇಲ್ಲಿ ತಾವು ಕೊಟ್ಟಿರುವ ವರದಿಯಲ್ಲಿ ಇತ್ಯರ್ಥವಾಗದಿರುವಂತಹ ವಿವಾದಗಳೇ ಜಾಸ್ತಿ ಇವೆ. ಪೇಜ್ 5 ರಲ್ಲಿ ಈ ರೀತಿ ಹೇಳಿದ್ದಾರೆ :—

Adjudication as on 1st January 1983

(1)	No. of disputes pending with Labour Courts, Tribunals as on 1st January 1982 ..	2,959
(2)	No. of disputes received during the year upto December 1982 for adjudication ..	1,342
(3)	No. of disputes disposed of ..	870
(4)	No. of disputes pending as on 31st December 1982 ..	3,431

ಇಲ್ಲಿ 2,959 ರಿಂದ 3,431 ಕ್ಕೆ ಹೋಗಿರುವುದನ್ನು ನೋಡಿದರೆ ಈ ನಿಮ್ಮ ಇಲಾಖೆಯಲ್ಲಿ ಎಫಿಷಿಯೆನ್ಸಿ ಜಾಸ್ತಿಯಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಹೇಳಬಹುದು. ಈ ಕೇಸ್‌ಗಳನ್ನು ಜಾಗ್ರತೆ ಇತ್ಯರ್ಥ ಪಡಿಸದಿದ್ದರೆ ಇದು ಹಳೆಯ ಬಂಡಿಯ ಜಾಗದಲ್ಲಿಯೇ ಈಗಲೂ ಹೋಗುತ್ತಿದೆ ಎಂದು ಹೇಳಬೇಕಾಗುತ್ತದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಟ್ರಿಬ್ಯೂನಲ್ ಮುಂದೆ ಇದೇ ರೀತಿ ಕೇಸ್‌ಗಳು ಬರುವುದು ಮತ್ತು ಹೀಗೆಯೇ ಮುಂದುವರೆದುಕೊಂಡು ಹೋಗುವುದಾದರೆ, ಇದಕ್ಕೆ ಇತಿಮಿತಿಯೇ ಇಲ್ಲವೆಂದು ಹೇಳಬೇಕಾಗುತ್ತದೆ. Conciliation cases pending as on 1-1-1982 : 241 ; Received during the year : 1515 ; Total number of cases pending : 1756. ಈ ಒಂದು ಡಿಪಾರ್ಟ್‌ಮೆಂಟ್‌ನಲ್ಲಿ ಖಂಡಿತವಾಗಿಯೂ ಕೂಡ ಸರಿಯಾಗಿ ನಡೆದುಕೊಂಡು ಹೋಗುತ್ತಿದ್ದಾರೆಂದು ಹೇಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಇನ್ನೊಂದು ವಿಷಯ ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳ

ಬೇಕಾದರೆ, ಲೇಬರ್ ಸೆಕ್ರಟರಿಗಳು ಇದ್ದಾರೆ, ಲೇಬರ್ ಕಮಿಷನರ್ ಇದ್ದಾರೆ. ಯಾವುದೇ ವಾದವಿವಾದಗಳು ಬಂದು ಇತ್ಯರ್ಥವಾಗದಿದ್ದರೆ ಕೋರ್ಟ್‌ಗೆ ಹೋಗಬೇಕೆಂದು ತೀರ್ಮಾನವಾಗಿದೆ. ಕೋರ್ಟ್‌ಗೆ ಹೋಗಬೇಕೆಂದು ಲೇಬರ್ ಕಮಿಷನರ್ ತೀರ್ಮಾನ ಮಾಡಿದ್ದರೂ ಅದು ಲೇಬರ್ ಸೆಕ್ರಟರಿಗೆ ಬರುತ್ತದೆ. ಲೇಬರ್ ಸೆಕ್ರಟರಿಗೆ ಬಂದಮೇಲೆ, ನಾರ್ಮಲ್ ಆಗಿರುವ ಪರಿಸ್ಥಿತಿಯನ್ನು ಲೇಬರ್ ಡಿಸ್‌ಪ್ಯೂಟ್ ಮಾಡಿದರೆ ಆ ವಾದವನ್ನು ಸರ್ಕಾರ ಒಪ್ಪಿಕೊಂಡು ಕೋರ್ಟ್‌ಗೆ ಹೋಗಬೇಕೆಂದು ಇರುವುದು. ಆದರೆ ಇಲ್ಲಿ ಏನಾಗಿದೆ ? ಲೇಬರ್ ಕಮಿಷನರ್‌ರವರು ಮಾಡಿದಂತಹ ಅನೇಕ ಸಿಫಾರಸ್‌ಗಳನ್ನು ಮೂಲೆಗೆ ಹಾಕಿ ಇಷ್ಟಬಂದ ರೀತಿಯಲ್ಲಿ ವಿಧಾನಸೌಧದೊಳಗೆ ಮಾಡಿ ಕೇಸುಗಳು ಕೋರ್ಟ್‌ಗೆ ಹೋಗದ ಪರಿಸ್ಥಿತಿ ಇದೆ. ಇದರ ಬಗ್ಗೆ ಸ್ಪಷ್ಟವಾದ ವಿವರಣೆ ಕೊಡಬೇಕು. ನಾನಾದರೂ ತಮ್ಮನ್ನು ಕೇಳುವುದು ಇಷ್ಟೆ, ಈ ತರಹ ಎಷ್ಟು ಕೇಸುಗಳನ್ನು ರೆಫರ್ ಮಾಡಿಲ್ಲ ? ಏತಕ್ಕೆ ರೆಫರ್ ಮಾಡಲಿಲ್ಲ ? ರೆಕಮೆಂಡ್ ಮಾಡಿದ್ದರೂ ಏತಕ್ಕೆ ರೆಫರ್ ಮಾಡಲಿಲ್ಲ ? ನಿಮಗೆ ಗೊತ್ತಿರುವ ಹಾಗೆ ಪಬ್ಲಿಕ್ ಸೆಕ್ಟಾರ್ ಕಾರ್ಮಿಕರು ಸ್ಟ್ರೈಕ್ ಮಾಡುತ್ತಿದ್ದರೂ, ಅದನ್ನು ಪ್ರಾಹಿಬಿಟ್ ಮಾಡಿ ಕೋರ್ಟ್‌ಗೆ ರೆಫರ್ ಮಾಡುವುದಕ್ಕೆ ಏತಕ್ಕೆ ತಯಾರಾಗಲಿಲ್ಲ ? ಈಗ ರೆಫರ್ ಮಾಡಿದ್ದೀರಿ. ಅದಕ್ಕೆ ವಂದನೆಗಳನ್ನು ಅರ್ಪಿಸುತ್ತೇನೆ. ಆದರೆ ರೆಫರ್ ಮಾಡತಕ್ಕ ಕೇಸುಗಳನ್ನು ರೆಫರ್ ಮಾಡಿಲ್ಲ. ಉದಾಹರಣೆಗೆ ಒಂದು ಹೇಳುತ್ತೇನೆ, 'ಸೇನಾಪತಿ ವೈಟ್‌ಲೀ ಫ್ಯಾಕ್ಟರಿ', ರಾಮನಗರ—ಆ ಫ್ಯಾಕ್ಟರಿ ಲಾಕ್‌ಔಟ್ ಆಗಿದೆ. ಲಾಕ್‌ಔಟ್ ಆದಮೇಲೆ ಏನಾಯಿತು ಅಂದರೆ, ಕಾನೂನು ಪ್ರಕಾರ ಯಾವ ರೀತಿ ಮಾಡಬೇಕೋ ಆ ರೀತಿ ಮಾಡಿಲ್ಲ. ಲಾಕ್‌ಔಟ್ ಆದಮೇಲೆ ಕಾರ್ಮಿಕರ ಕೇಳಿಕೆಗಳನ್ನು ಕೋರ್ಟ್‌ಗೆ ಹಾಕಿ ಲಾಕ್‌ಔಟನ್ನು ಪ್ರಾಹಿಬಿಟ್ ಮಾಡಬೇಕು ಎಂದು ಕಾನೂನು ಇರುವುದು, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಇಲ್ಲಿ ಜವಾಬ್ದಾರಿ ಸರ್ಕಾರದ್ದೂ ಇದೆ. ಆದರೆ ಇಲ್ಲಿ ಜವಾಬ್ದಾರಿಯನ್ನು ತಪ್ಪಿಸಿದರು, ಅಲ್ಲಿ ಏನು ಮಾಡಿದ್ದಾರೆ ಎಂದರೆ ಕೇಳಿಕೆಗಳನ್ನು ಕೋರ್ಟ್‌ಗೆ ಹಾಕಿದರು, ಆದರೆ ಲಾಕ್‌ಔಟ್ ತೆಗೆಯಲಿಲ್ಲ. ಏತಕ್ಕೆ ಲಾಕ್‌ಔಟ್ ತೆಗೆಯಲಿಲ್ಲ ? 'ಸೇನಾಪತಿ ವೈಟ್‌ಲೀ ಫ್ಯಾಕ್ಟರಿ'ಯ ಮಾಲೀಕರು ಯಾರಿಗಾದರೂ ದುಡ್ಡು ಕೊಟ್ಟಿದ್ದಾರೆಯೋ ಎಂದು ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಮತ್ತು ತಮ್ಮ ಮೇಲೆ ಈ ಅಪಾದನೆ ಹೊರಿಸುತ್ತೇನೆ. ಇಲ್ಲಿ ತಮ್ಮ ಮೇಲೆ ಅನುಮಾನ ಬರುತ್ತದೆ. ತಾವು ಏತಕ್ಕೆ ಮಾಡಲಿಲ್ಲ ? ಈ ರೀತಿ ಕಾನೂನು ಇರಬೇಕಾದರೆ ಅದನ್ನು ನೀವು ಪಾಲನೆ ಮಾಡದೇ ಹೋದರೆ ನಮಗೆ ಅನುಮಾನ ಬರುವುದಕ್ಕೆ ಅವಕಾಶ ಆಗುವುದಿಲ್ಲವೇ ? ನಾನು ಇನ್ನೂ ಮುಂದೆ ಹೋಗಿ ಹೇಳುತ್ತೇನೆ, ಹೈಕೋರ್ಟ್‌ನಲ್ಲಿ ಇದರ ಬಗ್ಗೆ ಜಡ್ಜ್‌ಮೆಂಟ್ ಪಾಸ್ ಮಾಡಿದ್ದಾರೆ. ಅದರಲ್ಲಿ ಸರ್ಕಾರ ಮಾಡಿರುವುದು ತಪ್ಪು, ಕಾನೂನು ಪ್ರಕಾರ ಲಾಕ್‌ಔಟನ್ನು ಪ್ರಾಹಿಬಿಟ್ ಮಾಡಿ ಕೋರ್ಟ್‌ಗೆ ರೆಫರ್ ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ನಮ್ಮ ಕರ್ನಾಟಕ ಹೈಕೋರ್ಟ್‌ನವರು ತೀರ್ಮಾನ ಮಾಡಿದ್ದಾರೆ. ನೀವು ಮಾಡಿರುವುದು ತಪ್ಪು, ನೀವು ಲಾಕ್‌ಔಟನ್ನು ಪ್ರಾಹಿಬಿಟ್ ಮಾಡಬೇಕಾಗಿತ್ತು, Strictures have been passed against the Minister and the Government. ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಪಿ. ರಾಮ್‌ದೇವ್.—ಕಳೆದ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು, ಮಾನ್ಯ ಮೈಕೇಲ್ ಫರ್ನಾಂಡೀಸ್‌ರವರು ಈ ವಿಚಾರವನ್ನು ಎತ್ತಿದ್ದಾರೆ.

SRI M. S. KRISHNAN.—Strictures have been passed against the previous Labour Minister. But now, the employer has gone in appeal and the Government has also gone in appeal. Why should the Government go in appeal ? I can understand the employer going in for an appeal. But why did the Government go in for appeal ? Have you looked into the file ? Whether there is any case for going in appeal in the High Court ? As per the Industrial Disputes Act, it is very clear that you have got to prohibit the lock-out and refer the dispute to the tribunal. Today, the workers are left high and dry. ಇದನ್ನು ಏತಕ್ಕೆ ಮಾಡಿದಿರಿ ಎಂದು ಕೇಳಿದರು, ಇದರಿಂದ ಏನಾಗಿದೆ ಎಂದರೆ, ಕಾರ್ಮಿಕರನ್ನು ಕೈಬಿಟ್ಟಿದ್ದಾರೆ. ಇವತ್ತು ಇದನ್ನು ಒಂದು ಶೋಚನೀಯವಾದ ಪರಿಸ್ಥಿತಿ ಎಂದರೂ ಕೂಡ ತಪ್ಪಾಗಲಾರದು. ಇದೇ ರೀತಿ ತಮಗೆ ಇನ್ನೊಂದು ವಿಷಯವನ್ನು ಹೇಳಬೇಕಾದರೆ, ಕಾರ್ಮಿಕರಿಗೆ ಇದು ಏನು ತೋರಿಸುತ್ತದೆ, ಕೋರ್ಟ್‌ನಲ್ಲಿ ಕೇಸುಗಳ ಬಗ್ಗೆ ಸರಿಯಾದ ಧೋರಣೆ, ನೀತಿ, ವಾದ ವಿವಾದಗಳನ್ನು ಇತ್ಯರ್ಥ ಮಾಡುವುದರ ಬಗ್ಗೆ ಆಗಲಿ, ಕೇಸುಗಳನ್ನು ಕೋರ್ಟ್‌ಗೆ ರೆಫರ್ ಮಾಡುವುದರ ಬಗ್ಗೆ ಆಗಲೀ ಹೈಕೋರ್ಟ್‌ಗೆ ರಿಟ್ ಅಪ್ಲಿಕೇಷನ್ ಹಾಕುವುದರ ಬಗ್ಗೆಯಾಗಲೀ, ಇದರ ಬಗ್ಗೆ ಯಾವುದೇ ರೀತಿಯ ಸಮಗ್ರವಾದ ನೀತಿಯಿಲ್ಲ. ಸಮಗ್ರವಾದ ನೀತಿ ಇದ್ದು ಸರಿಯಾದ ರೀತಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ.

ಉಪಾಧ್ಯಕ್ಷರು.—ತಾವು ಈಗಾಗಲೇ 45 ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ಪಿ. ರಾಮ್‌ದೇವ್.—ಭಾಷಣವನ್ನು ಇನಿಷಿಯೇಟ್ ಮಾಡಿದವರಿಗೆ 1 ಗಂಟೆ ಸಮಯ ಕೊಡಲಾಗುತ್ತದೆ,

ಶ್ರೀ ಎಸ್. ಸೂರ್ಯನಾರಾಯಣರಾವ್.—ಲೇಬರ್ ಬಗ್ಗೆ ಚರ್ಚೆ ಮಾಡುವಾಗ ಸ್ವಲ್ಪ ಜಾಸ್ತಿ ಸಮಯ ಕೊಡಬೇಕು. ಇದು ಬಹಳ ಕ್ರಾಂತಿಕಾರಕವಾದ ವಿಷಯ.

ಶ್ರೀ ಪಿ. ರಾಮ್‌ದೇವ್.—ಕಾರ್ಮಿಕರ ವಿಷಯ ಬಂದಾಗ ಜಾಸ್ತಿ ಸಮಯ ಕೊಡಿ ಎಂದು ಆಗಲೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ, ನಿಮಗೆ ಸೂರ್ಯನಾರಾಯಣರಾವ್‌ರವರು ಸಪೋರ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೂ ನಮಗೂ ಭಿನ್ನಾಭಿಪ್ರಾಯವಿರಬಹುದು. ಅವರದೂ ನಮ್ಮದೂ ಬೇರು ಒಂದೇ.

ಶ್ರೀ ಪಿ. ರಾಮ್‌ದೇವ್.—ಈ ಸಾರಿ ಬೇಡಿಕೆಗಳ ಕಾಂಬಿನೇಷನ್ ಸರಿಯಾಗಿ ಬರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬಹಳ ಮುಖ್ಯವಾದ ವಿಷಯ., ಹಲವಾರು ವರ್ಷಗಳ ಹಿಂದೆ ಲೇಬರ್ ಇಲಾಖೆ ಬೇರೆ ಇತ್ತು, ಟ್ರಾನ್ಸ್‌ಪೋರ್ಟ್ ಬೇರೆ ಇತ್ತು. ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಅವಕಾಶ ಸಿಗುತ್ತಿತ್ತು. ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಹೋಗಲಿಲ್ಲ, ಎರಡೂ ಇಲಾಖೆಗಳನ್ನು ಒಟ್ಟಿಗೆ ಸೇರಿಸಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಟ್ಟಿಗೆ ಸೇರಿಸಿದ ಮೇಲೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾಳೆ ಸಹ ಚರ್ಚೆ ಮುಂದುವರಿಯಬೇಕು. ಚರ್ಚೆ ಮುಂದುವರಿದರೆ ಬಹಳ ಜನಗಳಿಗೆ ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ. ಇನ್ನೊಂದು ವಿಷಯ, ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ವಾದ ವಿವಾದಗಳು ಇರುವಾಗ ಪೋಲೀಸ್‌ನವರು ಮಧ್ಯೆ ಪ್ರವೇಶಿಸಕೂಡದು. ಇದು ಬಹಳ ಮುಖ್ಯವಾದ ವಿಷಯ. ಕಾರ್ಮಿಕರಿಗೂ ಮಾಲೀಕರಿಗೂ ವಾದ ವಿವಾದಗಳು ನಡೆದಾಗ ಕಾರ್ಮಿಕರನ್ನು ಪೋಲೀಸ್‌ನವರು ಹೊಡೆದು ಬಡಿದು ಹಿಂಸೆ ಕೊಡುವುದು ಬೇಡ. ಹಿಂಸಾಚಾರ ಮಾಡಿದರೆ ಪೋಲೀಸ್‌ನವರು ಮಧ್ಯೆ ಪ್ರವೇಶ ಮಾಡಲಿ. ಅದಕ್ಕೆ ವಿರೋಧವಿಲ್ಲ. ಕಾರ್ಮಿಕರು ಸ್ಟ್ರೈಕ್ ಮಾಡುತ್ತಾರೆ ಎಂದು ಗೊತ್ತಾದ ತಕ್ಷಣ 10 ವ್ಯಾನುಗಳಲ್ಲಿ ಎಸ್.ಪಿ., ಡಿ.ಸಿ.ಪಿ., ಇನ್ಸ್‌ಪೆಕ್ಟರ್ ಎಲ್ಲರೂ ಬಂದುಬಿಡುತ್ತಾರೆ. ಏತಕ್ಕೆ ಸ್ವಾಮಿ ಅಷ್ಟು ಜನಗಳೆಲ್ಲ ಬರಬೇಕು? ತುಮಕೂರು ರಸ್ತೆಯಲ್ಲಿರುವ ಸಣ್ಣ ಫ್ಯಾಕ್ಟರಿ, ಅದು ವೆಲ್‌ಪ್ಯಾಕ್ ಫ್ಯಾಕ್ಟರಿ, ಅಲ್ಲಿ ಕೆಲಸ ಮಾಡತಕ್ಕವರು 100 ಜನ, ಅವರು ತಮ್ಮ ಬೇಡಿಕೆಗಳ ಬಗ್ಗೆ ಸ್ಟ್ರೈಕ್ ಮಾಡುವಾಗ 300 ಜನ ಪೋಲೀಸ್‌ನವರು ಬಂದು ಅವರನ್ನು ಕಾಯ್ದರೆ, ಅದನ್ನು ನೋಡಿ ಕಾರ್ಮಿಕರಿಗೆ ಮತ್ತು ಸಾರ್ವಜನಿಕರಿಗೆ ಗಾಬರಿಯಾಗಬೇಕು, ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪೋಲೀಸ್‌ನವರು ಬರುತ್ತಾರೆ. ಅಲ್ಲಿ ಏನಾಗಿದೆ, ಕಾರ್ಮಿಕರ ಯೂನಿಯನ್ ಅನ್ನು ಮಾಲೀಕರು ಮುರಿಯಬೇಕೆಂದು ಮಾಡಿದ್ದಾರೆ. ಯೂನಿಯನ್ ಅನ್ನು ಮುರಿಯಕೂಡದು ಎಂದು ಕಾರ್ಮಿಕರು ಸ್ಟ್ರೈಕ್ ಮಾಡದ ಹಾಗೆ ಮಾಡಿದ್ದಾರೆ. ಇದು ಜನತಾ ಪಕ್ಷದ ಧೋರಣೆ ಅಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಿಮ್ಮ ಧೋರಣೆ ಏನೆಂದು ಹೇಳಬೇಕು. ಈ ರೀತಿ ಮಾಡುವುದು ಸರಿಯಾದುದಲ್ಲ. ಪೋಲೀಸ್‌ನವರು ಯಾರಿಗೆ ರಕ್ಷಣೆ ಕೊಡಬೇಕು? ಕಾರ್ಮಿಕರಿಗೆ ರಕ್ಷಣೆ ಕೊಡುವವರೇ ಹೀಗಾದರೆ ಇನ್ನಾರು ರಕ್ಷಣೆ ಕೊಡುತ್ತಾರೆ? ಅಲ್ಲಿ ಪೋಲೀಸ್‌ನವರು ಕಾರ್ಮಿಕರಿಗೆ ರಕ್ಷಣೆ ಕೊಡಲಿಲ್ಲ. ಕಾರ್ಮಿಕರು ಧರಣಿ ಮಾಡುತ್ತಿದ್ದರು, ಮಾಲೀಕರನ್ನು ಒಳಗಡೆಯಿಂದ ಹೊರಗಡೆ ಕರೆದುಕೊಂಡು ಹೋಗುವುದಕ್ಕೆ ಪೋಲೀಸ್‌ನವರು ರಕ್ಷಣೆ ಕೊಟ್ಟರು. ಫ್ಯಾಕ್ಟರಿಯೊಳಗೆ ಇರತಕ್ಕ ಮಾಲುಗಳನ್ನು ತೆಗೆದುಕೊಂಡು ಹೊರಗಡೆ ಮಾರಾಟ ಮಾಡುವುದಕ್ಕೆ ರಕ್ಷಣೆ ಕೊಟ್ಟರು. ಸಂಘವನ್ನು ಮುರಿದಿದ್ದರಿಂದ ಕಾರ್ಮಿಕರಿಗೆ ಕಷ್ಟವಾಯಿತು, ಮಾಲೀಕರಿಗೆ ಅನುಕೂಲವಾಯಿತು. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿತ್ತು, ಮಾನ್ಯ ಸದಸ್ಯರಾದ ನಾರಾಯಣಗೌಡರು ಇಲ್ಲಿ ಇಲ್ಲ, .

ಚಿಕ್ಕಮಗಳೂರಿನಲ್ಲಿ ಕಾಫಿ ಪ್ಲಾಂಟೇಷನ್‌ನಲ್ಲಿ ಕೆಲಸ ಮಾಡುವಂಥ ಕಾರ್ಮಿಕರು ಸಂಘವನ್ನು ಸ್ಥಾಪನೆ ಮಾಡಿಕೊಂಡು ಮಾಲೀಕರ ಮೇಲೆ ಕನಿಷ್ಠ ವೇತನವನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದರು. ಮಾಲೀಕರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದಂಥ ವೇತನವನ್ನು ಕೊಡುವುದಕ್ಕಾಗಿ ಅವರು ಒತ್ತಾಯಪಡಿಸಿದರು. ಅದಕ್ಕೆ ಮಾಲೀಕರು ಏನು ಮಾಡಿದರು ಗೊತ್ತೆ? ಅವರನ್ನು ಮನೆಯಿಂದ ಬಡಿದು ಓಡಿಸಿದ್ದಾರೆ. ಅಷ್ಟೇ ಅಲ್ಲ, ಇನ್ನೂ ನಾನಾ ರೀತಿಯ ಕಿರುಕುಳ ಕೊಟ್ಟಿದ್ದಾರೆ. ಆದರೂ ಅವರು ಸಹಿಸಿಕೊಂಡೇ ಇದ್ದರು. ಆನಂತರ ರಾಜ್ಯ ರೈತ ಸಂಘದವರಿಂದ ಕೂಡ ಅವರಿಗೆ ತೊಂದರೆಯನ್ನು ಕೊಟ್ಟಿದ್ದಾರೆ. ಅದೂ ರಾಜ್ಯ ರೈತ ಸಂಘದ ಅಧ್ಯಕ್ಷರಾದಂಥ ಶ್ರೀಮಾನ್ ರುದ್ರಪ್ಪನವರ ಕಡೆಯವರು ಕಿರುಕುಳ ಕೊಟ್ಟಿದ್ದಾರೆ. ಇದರ ಜೊತೆಗೆ ಅಲ್ಲಿನ ರಾಜಕೀಯ ಪುಡಾರಿಗಳೂ ಸಹ ಸೇರಿಕೊಂಡು ಈ ಕೃಷಿ ಕಾರ್ಮಿಕರಿಗೆ ತೊಂದರೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಪೋಲೀಸ್‌ನವರನ್ನೂ ಸಹ ಕರೆಸಿ ತೊಂದರೆ ಕೊಟ್ಟಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಮತ್ತು ಮಾನ್ಯ ಮಂತ್ರಿಗಳಿಗೆ ಪತ್ರ

ವನ್ನೂ ಸಹ ಬರೆದು ತಿಳಿಸಿದ್ದೇನೆ. ಆಗ ಮಾನ್ಯ ಮಂತ್ರಿಗಳು ಹೇಳಿದರು, ನಾನು ಪೋಲೀಸ್‌ನವರಿಗೆ ಫೋನ್ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತರುತ್ತೇನೆಂದು ತಿಳಿಸಿದರು. ಆದರೆ ಇದುವರೆಗೂ ಅಲ್ಲಿ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಆದರೆ ಕೃಷಿ ಕಾರ್ಮಿಕರಿಗೆ ಕಿರುಕುಳ ಮಾತ್ರ ಜಾಸ್ತಿಯಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಪೋಲೀಸ್‌ನವರು ಅಲ್ಲಿಗೆ ಪ್ರವೇಶ ಮಾಡದಿದ್ದರೆ ಪರಿಸ್ಥಿತಿ ತನ್ನಷ್ಟಕ್ಕೆ ತಾನೇ ಹತೋಟಿಗೆ ಬರಬಹುದೆಂದು.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ಪೋಲೀಸ್‌ನವರು ವೈಟ್‌ಫೀಲ್ಡ್‌ನಲ್ಲಿ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಹೇಳಿ ಸಾರ್ವಜನಿಕರು ತುಂಬಾ ಬೇಸರಪಟ್ಟುಕೊಂಡಿದ್ದಾರೆ. ಇದಕ್ಕೆ ಮಾನ್ಯ ಸದಸ್ಯರು ಏನು ಹೇಳುತ್ತಾರೆ ?

ಶ್ರೀ ಎಂ. ಸೂರ್ಯನಾರಾಯಣರಾವ್.—ಸ್ವಾಮಿ, ವೈಟ್‌ಫೀಲ್ಡ್‌ನಲ್ಲಿ ಪೋಲೀಸ್‌ನವರು ಏನೂ ಕ್ರಮ ತೆಗೆದುಕೊಳ್ಳದಿದ್ದುದರಿಂದ ಅಲ್ಲಿ ಈಗ ಶಾಂತಿಯುತ ವಾಗ ಪರಿಸ್ಥಿತಿ ಉಂಟಾಗಿ ಅಲ್ಲಿ ಮಾಲೀಕರು ಮತ್ತು ವರ್ಕರ್ಸ್ ಚೆನ್ನಾಗಿದ್ದಾರೆ. ಈಗ ಪೀಸ್‌ಫುಲ್ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸ್‌ನವರು ಮಧ್ಯೆ ಪ್ರವೇಶ ಮಾಡದಿದ್ದರಿಂದ ಪರಿಸ್ಥಿತಿ ಶಾಂತಿಯುತವಾಗಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಮತ್ತೊಂದು ವಿಷಯವನ್ನು ತಿಳಿಯಬಯಸುವುದೇನೆಂದರೆ, ಕಾರ್ಮಿಕರ ಮೇಲೆ ಹಾಕಿರತಕ್ಕಂಥ ಕೇಸ್‌ಗಳನ್ನು ಇದುವರೆಗೂ ಇತ್ಯರ್ಥ ಮಾಡಿಲ್ಲ. ಅನೇಕ ವರ್ಷಗಳಿಂದ ಪೆಂಡಿಂಗ್ ಇದೆ. ಕೋರ್ಟ್‌ನಲ್ಲಿ ಕೂಡ ಇತ್ಯರ್ಥ ಮಾಡುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದ ಲೇಬರ್ ಕಾನೂನಿನಲ್ಲಿ ಇದೆ. ಅವರು 50 ರೂಪಾಯಿಗಳ ಪರಿಹಾರವನ್ನು ಕೂಡ ಕೊಡುವುದಕ್ಕೆ ಆಗುವುದಿಲ್ಲ. ಆದರೆ ತಮಿಳುನಾಡಿನಲ್ಲಿ ಅಂಥ ಒಂದು ಕಾನೂನನ್ನು ನಮ್ಮ ಮಾನ್ಯ ಎಂ. ಜಿ. ರಾಮಚಂದ್ರನ್‌ರವರು ತಂದಿದ್ದಾರೆ. ಅದು ಈ ರೀತಿ ಇದೆ :—

The Industrial Disputes (Tamil Nadu Amendment) Act, 1982

2. Insertion of new Section 10–B in Central Act XIV of 1947 :

" 10–B. *Power to issue order regarding terms and conditions of service pending settlement of disputes*:

(1) Where an industrial dispute has been referred by the State Government to a Labour Court or a Tribunal under Sub-Section (1) of Section 10 and if, in the opinion of the State Government, it is necessary or expedient so to do for securing the public safety or convenience or the maintenance of public order or supplies and services essential to the life of the community or for maintaining employment or industrial peace in the establishment concerning which such reference has been made, they may, by general or special order, make provision ;

(*a*) for requiring employers or workmen or both to observe such terms and conditions of employment as may be specified in the order or as may be determined in accordance with the order, including payment of money by the employer to any person who is or has been a workman."

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಕಾನೂನು ಇದೆ. ಆದರೆ ಸಂಬಳ ಮಾತ್ರ ಇಲ್ಲ. ಅದರ ಹಿಂದಿನ ಕಾಲಂ ಓದುವುದು ಬೇಡ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಯಾವುದು ಬೇಕೋ ಅದನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ಸದಸ್ಯರು ಅದನ್ನು ತಪ್ಪಾಗಿ ತಿಳಿದುಕೊಂಡರೆ ಅದು ನನ್ನ ತಪ್ಪು ಅಲ್ಲ. ನನಗೂ ಗೊತ್ತಿದೆ ಯಾವುದನ್ನು ಪ್ರಸ್ತಾಪ ಮಾಡಬೇಕು ಯಾವುದನ್ನು ಪ್ರಸ್ತಾಪ ಮಾಡಬಾರದು ಎಂದು. ನಾನು ಹಿಂದೆ ಶಾಸಕನಾಗಿದ್ದಾಗ ಇಂಥ ಒಂದು ಕಾನೂನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದ್ದೆ. ಆದರೆ ಅದು ಆಗ ಅಷ್ಟರಲ್ಲಿಯೇ ಮಾಯವಾಗಿಹೋಯಿತು. ಇಂಥ ಒಂದು ಕಾನೂನನ್ನು ಕೇರಳ ರಾಜ್ಯದಲ್ಲಿ

ಕೂಡ ಜಾರಿಗೆ ತಂದಿದ್ದಾರೆ. ಅವರು ತಂದಿರತಕ್ಕಂಥ ಕಾನೂನನ್ನು ಅಳವಡಿಸಿಕೊಂಡು ನಮ್ಮಲ್ಲಿ ಕೂಡ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ಕಾನೂನು ತರುವುದಕ್ಕೆ ಸದ್ಯಕ್ಕೆ ಸಾಧ್ಯವಾಗದಿದ್ದರೆ ಒಂದು ಆರ್ಡಿನೆನ್ಸ್ ಬೇಕಾದರೆ ಹೊರಡಿಸಿ. ಅದಕ್ಕೆ ನಮ್ಮೆಲ್ಲರ ಬೆಂಬಲವನ್ನೂ ಸಹ ಕೊಡುತ್ತೇವೆ. ಮತ್ತೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುತ್ತಾರೆ. ಆದರೆ ಅವರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳು ಸಿಗುತ್ತಿಲ್ಲ. ಇದು ಕೇಂದ್ರ ಸರ್ಕಾರದ ಕಾನೂನು. ಇದನ್ನು ಸ್ವಲ್ಪ ತಿದ್ದುಪಡಿ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಈ ಕಾನೂನನ್ನು ತಿದ್ದುಪಡಿ ಮಾಡುವಾಗ ಕಾರ್ಮಿಕ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿದರೆ ತಮಗೆ ಇನ್ನೂ ಹೆಚ್ಚಿನ ಸಲಹೆಗಳನ್ನು ಆಗ ನಾನು ಕೊಡುತ್ತೇನೆ. ಈಗ ಫ್ಯಾಕ್ಟರಿಗಳಲ್ಲಿ ಅಂದರೆ, ಕಿರ್ಲೋಸ್ಕರ್ ಫ್ಯಾಕ್ಟರಿಯಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುತ್ತಿರುವ ನೌಕರರ ಪಾಡು ಬೇಡ. ಈ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುವಂಥ ನೌಕರರು ಪರ್ಮನೆಂಟ್ ಆಗಿ ಕೆಲಸ ಮಾಡುವವರಿಗಿಂತ ಚೆನ್ನಾಗಿ, ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಆದರೆ ಅವರಿಗೆ ಸಂಬಳ ಹೆಚ್ಚು ಕೊಡುತ್ತಾರೆ. ಇವರಿಗೆ ಕಡಿಮೆ ಸಂಬಳ ಕೊಡುತ್ತಾರೆ. ಸುಮಾರು 10–12 ವರ್ಷಗಳಿಂದ ಅವರು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಶೋಷಣೆ ಫ್ಯಾಕ್ಟರಿಯೊಳಗೆ ನಡೆಯುತ್ತದೆ, ಇದಕ್ಕೆ ಒಂದು ತಿದ್ದುಪಡಿಯನ್ನು ತಂದು ನ್ಯಾಯ ದೊರಕಿಸಿಕೊಡಬೇಕು. 'Industrial Employment Standing Order Act' ಎಂದು ಇದೆ. ಅದಕ್ಕೆ ಮುಂಚೆ ಒಂದು ಭಾಗ ಇರಬೇಕಾಗಿತ್ತು. ಇಲ್ಲದಿದ್ದರೆ ತಪ್ಪಾಗುತ್ತದೆ. ಅದು ಏನೆಂದರೆ, ಯಾರು ಪ್ರಿಂಟ್ ಮಾಡಿದರೋ ಅದರಲ್ಲಿ ಮುದ್ರಣ ದೋಷ ಇದೆ. ಏಳನೇ ಪುಟದಲ್ಲಿ ನೋಡಿದರೆ 'Enforcement Statistics during 1982 under various labour laws' ಅದರ ಕಡೆಯಲ್ಲಿ "Industrial Employment (National and Festival Holidays Act)" ಎಂದು ಹಾಕಿದ್ದಾರೆ. ಪ್ಯಾರಾ 8 ಐಟಮ್ ನಂಬರ್ 6 ರಲ್ಲಿ ಅದನ್ನು ಹೇಳಿದ್ದಾರೆ. I want to know where is this Act ? Either the person who has written this report does not know Labour Laws or if he knows, he wants us to be misguided. It cannot be a typographical error. ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಅವರು ಇದನ್ನು ಗಮನಿಸಿರಬೇಕು. ಅವರು ನೋಡಿಲ್ಲದೆ ಇದು ಬರುವುದಿಲ್ಲ. ಕಾರ್ಮಿಕ ಇಲಾಖೆಯವರು ಕೆಲಸ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಏನೂ ಹೇಳಲಿಲ್ಲ.

ಶ್ರೀ ಎಂ. ರಘುಪತಿ.—ಅದನ್ನು ನೋಡದೇ ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೆಸ್‌ನಲ್ಲಿ ಹಾಗೆಯೇ ಪ್ರಿಂಟ್ ಮಾಡಲಿಕ್ಕೆ ಆಗುತ್ತದೆಯೇ ? ಎರಡು-ಮೂರು ಸಲ ಸ್ಕ್ರೂಟಿನಿ ಮಾಡಿ ಹಾಕಬೇಕಾಗುತ್ತದೆ. ತಾವು ಜಾಗ್ರತೆ ವಹಿಸಬೇಕು. Any how, I do not want to force him, let him reply slowly. Industrial Employment (National and Festival Holidays) Act ಎನ್ನತಕ್ಕಂಥ ಕಾನೂನೇ ಇಲ್ಲ. ಅದು ಬಹುಶಃ Industrial Employment Standing Orders Act ಎಂದು ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಸ್ವಲ್ಪ ನೋಡಿ ಯಾರು ತಪ್ಪು ಮಾಡಿದ್ದಾರೆ, ಅವರ ಕಿವಿಯನ್ನು ಸ್ವಲ್ಪ ಹಿಂಡಬೇಕು ಮತ್ತು ಏನು ಮಾಡಬೇಕೋ, ಅದನ್ನೆಲ್ಲಾ ಮಾಡಿ. ನಮಗಾದರೋ ಇದರ ಬಗ್ಗೆ ಓದಿಕೊಂಡಿದ್ದರಿಂದ ಗೊತ್ತಾಯಿತು. ಬೇರೆಯವರಿಗೆ ಇದು ಗೊತ್ತಾಗುವುದಿಲ್ಲ. ಇದು ಮಹಾ ತಪ್ಪು. ಆದ್ದರಿಂದ ನಾನು ಹೇಳುವುದೇನೆಂದರೆ, 'Industrial Employment Standing Orders Act' ಪ್ರಕಾರ Suspension period ಗೆ allowance ಕೊಡಬೇಕೆಂದಿದೆ. It is not mandatory and binding. We may or may not bring. I want you to make it mandatory and binding. ಅದಕ್ಕೆ Industrial Employment Standing Order ನಲ್ಲಿ 'Suspension period allowance' ಎಂದು ಹಾಕಿದ್ದಾರೆ. ಈ ಬಗ್ಗೆ ಕಾನೂನನ್ನು ತೆಗೆದುಕೊಂಡು ಬರಬೇಕು.

ಉಪಾಧ್ಯಕ್ಷರು.—ಬೇಗ ಮುಕ್ತಾಯ ಮಾಡಿ. ಇನ್ನು ಐದು ನಿಮಿಷಕ್ಕೆ ನೀವು ಮುಗಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಆಗುವುದಿಲ್ಲ. I have not spoken one hour. I have got more things to explain.

ಉಪಾಧ್ಯಕ್ಷರು.—ಈಗಾಗಲೇ ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಆಗಿದೆ. ಮೂರು ಗಂಟೆ ಐವತ್ತು ನಿಮಿಷಕ್ಕೆ ನೀವು ಶುರು ಮಾಡಿದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಫ್ಯಾಕ್ಟರಿ ಆಕ್ಟ್ ಇದೆ. ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಇದೆ. ಬಾಯ್ಲರ್ಸ್ ಬಗ್ಗೆ ನಾನಿನ್ನೂ ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು.—ನೀವು ಆದಷ್ಟು ಸಂಕ್ಷಿಪ್ತವಾಗಿ ಹೇಳಬೇಕು. ನಿಮ್ಮದು ಸ್ವಲ್ಪ ನಿಧಾನ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್ .—ನಾನು ವೇಗವಾಗಿಯೇ ಹೋಗುತ್ತಿದ್ದೇನೆ. ನನಗೆ ಎಲ್ಲವನ್ನೂ ಮುಗಿಸಲು ಇನ್ನೂ ಒಂದು-ಒಂದೂವರೆ ಗಂಟೆಯಾದರೂ ಬೇಕಾಗುತ್ತದೆ.

ಉಪಾಧ್ಯಕ್ಷರು.—ಬೇಗ ಮುಗಿಸಿಬಿಡಿ.

SRI M. S. KRISHNAN.—I will try to finish. Suspension period allowance ಬಗ್ಗೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದನ್ನು ವೆಸ್ಟ್ ಬೆಂಗಾಲ್‌ನಲ್ಲಿ ಇರುವ ಹಾಗೆ ತೆಗೆದುಕೊಂಡು ಬರಬೇಕು. ಆಗ ಕಾರ್ಮಿಕರಿಗೆ ಅನುಕೂಲವಾಗುತ್ತದೆ. Karnataka Industrial Relief Undertakings Act ಎಂದು ಇದೆ. Industrial Dispute Act ನಿಂದ ಕಾರ್ಮಿಕರ ಸಮಸ್ಯೆಗಳು ಇತ್ಯರ್ಥವಾಗುವ ಹಾಗಿಲ್ಲ. ಎಂ.ಇ.ಐ.ನಲ್ಲಿ ಮಾತ್ರ ಇದು ಎಫೆಕ್ಟ್ ಆಗಿದೆ. ಈ ಕಾನೂನನ್ನು ತಿದ್ದುಪಡಿ ಮಾಡದೆ ಮುಂದುವರೆಸುವುದು ಸರಿಯಾದುದಲ್ಲ. ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗಿದೆ.

ನಮ್ಮ ಲೇಬರ್ ಜರ್ನಲ್ ಬಗ್ಗೆ ಮಾತನಾಡುವುದಾದರೆ ಇದೊಂದು ಪ್ರಯೋಜನಕ್ಕೆ ಬಾರದ್ದು. Present administrative set-up cannot handle this. ಮಾನ್ಯ ಸಚಿವರು ಇಲ್ಲಿ ಇಲ್ಲ. ಶ್ರೀಮಾನ್ ಅಜೀಜ್ ಸೇಠ್ ಅವರಿಗೆ ಎಲ್ಲಾ ಗೊತ್ತಿದೆ. ಇಂಡಸ್ಟ್ರಿ ಬಗ್ಗೆ, ಲೇಬರ್ ಬಗ್ಗೆ ಅವರು ಮಾತನಾಡುತ್ತಾರೆ. ಆದರೆ ಸ್ವಲ್ಪಮಟ್ಟಿಗೆ ಕಾನೂನನ್ನು ತಿಳಿದುಕೊಂಡಿದ್ದರೆ ಒಳ್ಳೆಯದೆಂದು ಕಾಣುತ್ತದೆ. ಈಗಿರುವ ಐ.ಟಿ.ಐ.ಗಳನ್ನು ಜಾಸ್ತಿ ಮಾಡಿ. ಅದಕ್ಕೆ ಬೇಕಾದ ಹಣವನ್ನು ತಾವು ಒದಗಿಸಬೇಕು. ಐ.ಟಿ.ಐ. ಜಾಸ್ತಿ ಇದ್ದಷ್ಟೂ ಹುಡುಗರಿಗೆ ಒಕೇಷನಲ್ ಟ್ರೈನಿಂಗ್‌ನಿಂದ ಉದ್ಯೋಗಾವಕಾಶ ಸಿಗುತ್ತದೆ. ಇವುಗಳನ್ನು ಇನ್ನೂ ಹೆಚ್ಚು ಮಾಡಬೇಕು ಮತ್ತು ಇದಕ್ಕಾಗಿ ಹೆಚ್ಚು ಹಣವನ್ನು ಎತ್ತಿಡಬೇಕು. ಫ್ಯಾಕ್ಟರೀಸ್ ಮತ್ತು ಬಾಯ್ಲರ್ಸ್ ಬಗ್ಗೆ ಹೇಳುವುದಾದರೆ ಕಡೇ ಪುಟದಲ್ಲಿ ಅವರು ಹೇಳಿಬಿಟ್ಟಿದ್ದಾರೆ —

"The workers employed in factories mostly belong to economically backward groups. The production in factories may be hampered unless there is a good relationship between the management and workers and certain basic needs of the workers are satisfied so as to enable them to give their best with certain amount of peace of mind. By proper enforcement of the statutes referred to above, it is certainly possible to achieve the required objectives in ameliorating the working conditions of the workers for which sufficient staff in the Department required." ಇದನ್ನು ಪಾಸಿಟಿವ್ ಆಗಿ ಹೇಳಿಬಿಡಬೇಕು. ಎಷ್ಟು ಹಣವನ್ನು ಒದಗಿಸುತ್ತೀರಿ? ಈ ಇಲಾಖೆ ಬಗ್ಗೆ ಬಹಳ ದೂರುಗಳು ಇವೆ.

ಉಪಾಧ್ಯಕ್ಷರು.—ಬೇಗ ಮುಗಿಸಿಬಿಡಿ. ಈಗ ಚಿಮ್ಮನಕಟ್ಟಿಯವರು ಮಾತನಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಚಿಮ್ಮನಕಟ್ಟಿಯವರು ಮಾತನಾಡಲಿ, ನಾನು ಬೇಡ ಎಂದು ಹೇಳುವುದಿಲ್ಲ. ನಾನು 2-3 ಪ್ರಮುಖವಾದ ಪಾಯಿಂಟ್‌ಗಳನ್ನು ಮಾತ್ರ ಹೇಳುತ್ತೇನೆ. ನಾನು ಹೇಳ ತಕ್ಕಂತಹದ್ದನ್ನು ಅವರು ಹೇಳುವುದಕ್ಕಾಗುವುದಿಲ್ಲ. ಅವರು ಹೇಳುವುದನ್ನು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈಗಾಗಲೇ 5 ಗಂಟೆಯಾಗಿದೆ. ನಾಳೆ ಬೆಳಗ್ಗೆ 10 ನಿಮಿಷ ಅವಕಾಶ ಕೊಟ್ಟರೆ ಅವರು ಮುಗಿಸಿಬಿಡುತ್ತಾರೆ.

ಉಪಾಧ್ಯಕ್ಷರು.—ಇಲ್ಲ; ಬೇಗ ಮುಗಿಸಿ. ಬೇರೆ ಸದಸ್ಯರಿಗೂ ನಾನು ಅವಕಾಶ ಮಾಡಿಕೊಡ ಬೇಕಾಗುತ್ತದೆ.

SRI M. S. KRISHNAN.—Transport Department is a huge Department and there is so much to speak. I do not want to speak about everything. I do not want to take away the time unnecessarly. I do not think whatever I spoke now covers all the points. If that is the understanding of some people I am very sorry for it. I do not think so. ನಾನು ಗಹನವಾದ ವಿಷಯಗಳನ್ನು ತಮ್ಮ ಮೂಲಕ ಸದನದ ಗಮನಕ್ಕೂ ತರುತ್ತಿದ್ದೇನೆ. ದಯಮಾಡಿ ನನಗೆ 10 ನಿಮಿಷ ಅವಕಾಶ ಕೊಡಬೇಕು.

ಮಾನ್ಯ ಅಧ್ಯಕ್ಷರೇ, ಸಾರಿಗೆ ವ್ಯವಸ್ಥೆಯ ಬಗ್ಗೆ...

ಶ್ರೀ ಎಸ್. ಸೂರ್ಯನಾರಾಯಣರಾವ್.—5 ಗಂಟೆಯ ಮೇಲೂ ಈ ಸಭೆ ಕುಳಿತುಕೊಳ್ಳಬೇಕಾದರೆ ಸಭೆಯ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮೊನ್ನೆಯೂ ಕೂಡ ಇದೇ ರೀತಿಯಾಗಿದೆ.

MR. DEPUTY SPEAKER.—Is it the pleasure of the House to sit extra 10 minutes ?

(Permission was granted)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದರೆ ನಾನು ಮಾತನಾಡುವುದಕ್ಕೂ ತಯಾರಾಗಿದ್ದೇನೆ. ಸಾರಿಗೆ ಸಂಸ್ಥೆಯ ಇಲಾಖೆಯಲ್ಲಿ ಅತಿ ಮುಖ್ಯವಾದ ವಿಷಯವೇನೆಂದರೆ, ಈ ಇಲಾಖೆಯಲ್ಲಿ ಮೊನ್ನೆ ದಿವಸದ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾ, 17·13 ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಹೇಳಿದ್ದಾರೆ. ಮತ್ತು ಆ ನಷ್ಟಕ್ಕೆ ಕಾರಣವನ್ನೂ ಕೂಡ ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿದ್ದಾರೆ. ನಷ್ಟಕ್ಕೆ ಮೂಲಭೂತವಾದ 4–5 ಕಾರಣಗಳನ್ನು ಕೊಟ್ಟಿದ್ದಾರೆ. ಒಂದನೆಯದು, ಡೀಸೆಲ್ ಬೆಲೆ ಏರಿರುವುದು; ಎರಡನೆಯದು, ಇವತ್ತಿನ ದಿವಸ ಕಾರ್ಮಿಕರಿಗೆ ವೇತನ ಶ್ರೇಣಿಯನ್ನು ಮತ್ತೊಂದನ್ನು ಕೊಟ್ಟಿರುವುದು; ಮೂರನೆಯದು, ಇವತ್ತು ಮುಖ್ಯವಾಗಿ ಪಿಲ್‌ಫ್ರೇಜ್ ಆಗುವುದು. ಈ ರೀತಿಯ ಎಲ್ಲಾ ಕಾರಣಗಳನ್ನೂ ಕೊಟ್ಟಿದ್ದಾರೆ. ಆದರೆ ಇವೆಲ್ಲಕ್ಕಿಂತ ಮುಖ್ಯವಾದುದು ಕಾರ್ಮಿಕರಿಗೆ ವೇತನ ಶ್ರೇಣಿಯನ್ನು ಹೆಚ್ಚು ಮಾಡಿದ್ದರಿಂದ, ಮತ್ತು ಇತರೇ ಭತ್ಯಗಳನ್ನು ಕೊಟ್ಟಿದ್ದರಿಂದ ನಷ್ಟವಾಗಿದೆ ಎಂಬುದಾಗಿ ನಮ್ಮ ಸಾರಿಗೆ ಸಂಸ್ಥೆಯವರು ಕಾರ್ಮಿಕರ ಮೇಲೆ ಹಾಕಿದ್ದಾರೆ. ಶ್ರೀಮಾನ್ ಎಂ. ಪಿ. ಪ್ರಕಾಶ್‌ರವರು ಇದರ ಬಗ್ಗೆ ಮಾತನಾಡಿರುವುದು ದಿನಾಂಕ 12–8–1983 ರಂದು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದೆ. ಈ ಬಗ್ಗೆ ನಾನಾದರೂ ಹೇಳುವುದೇನೆಂದರೆ, ಮಂತ್ರಿಗಳು ಈ ರೀತಿಯ ಹೇಳಿಕೆಗಳನ್ನು ಕೊಡುವುದು ಮೊದಲನೆಯ ತಪ್ಪು. ಈ ತರಹ ಹೇಳಿರತಕ್ಕಂತಹ ಮನೋಭಾವ ಸರಿಯಲ್ಲ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎಲ್ಲವೂ ಕಾರ್ಮಿಕರಿಂದ ನಷ್ಟವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ನಷ್ಟವಾಗಿರುವುದಕ್ಕೆ ಕಾರಣಗಳು ಬೇರೆ ಇವೆ. ಅವುಗಳನ್ನು ನಷ್ಟವಾಗಿದೆ ಎಂದು ತೋರಿಸುತ್ತಿದ್ದೀರೇನೋ ಎಂಬುದಾಗಿ ನನಗೆ ಮೊದಲನೆಯ ಪ್ರಶ್ನೆ ಬರುತ್ತದೆ. ಆದರೆ ನೀವು ಕೊಟ್ಟಿರುವ 1982–83 ರ ವರದಿಯಲ್ಲಿ ಈ ನಷ್ಟವನ್ನು ಕಂಡುಹಿಡಿಯುವುದಕ್ಕೆ ಕಷ್ಟವಾಗುತ್ತದೆ. ಈ ವರದಿಯಲ್ಲಿ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನೇ ಕೊಟ್ಟಿಲ್ಲ. ಬಹಳ ಹುಷಾರಿ ಜನ ಇವರು. ಬರೀ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತ್ರ ವರದಿಯನ್ನು ಕೊಟ್ಟಿದ್ದಾರೆ. ಎರಡನೆಯ ಪಾರ್ಟನ್ನು ಆಮೇಲೆ ಕೊಡಲಾಗುವುದು ಎಂದು ಹೇಳಿದ್ದಾರೆ. ಹಾಗಾದರೆ ನಾವು ಯಾವ ಅಂಕಿ ಅಂಶಗಳನ್ನು ನೋಡಿಕೊಂಡು ಇಲ್ಲಿ ಚರ್ಚೆ ಮಾಡಬೇಕು ?

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಈ ಬೇಡಿಕೆಯನ್ನು ಹಾಗೇ ಇಟ್ಟುಬಿಡೋಣ. ಮುಂದಿನ ಸಾರಿ ಪಾಸ್ ಮಾಡಿಕೊಳ್ಳೋಣ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈ ಸಭೆಗೆ ಎಲ್ಲಾ ವಿಚಾರಗಳನ್ನೂ ಕೊಡದಿದ್ದರೆ ಹೇಗೆ ಆಗುತ್ತದೆ ? ಈ ಸಂಸ್ಥೆಯಲ್ಲಿ 5 ಕೋಟಿ ರೂಪಾಯಿಗಳ ನಷ್ಟದಿಂದ ಪ್ರಾರಂಭವಾಗಿ ಈಗ 17·13 ಕೋಟಿ ರೂಪಾಯಿಗಳ ನಷ್ಟಕ್ಕೆ ಹೋಗಿದೆ. ಕೋಟಿಗಟ್ಟಲೆ ನಷ್ಟವಾಗುತ್ತಿರುವಾಗ ಇದರ ಫೈನಾನ್ಷಿಯಲ್ ಪೊಜಿಷನ್ ಏನಿದೆ ಎಂಬುದನ್ನು ಕೊಡದಿದ್ದರೆ ಹೇಗೆ ? ನ್ಯಾಯವಾಗಿ ನೋಡುವುದಾದರೆ ಇದರ ಹಿಂದೆ ದೊಡ್ಡ ಹಗರಣವೇ ಇದೆ. ಅವುಗಳ ವಿವರಗಳನ್ನೆಲ್ಲಾ ಕೊಡದೇ ಡಿಮ್ಯಾಂಡ್ ಪಾಸ್ ಮಾಡಿಕೊಡಿ ಎಂದರೆ ಏಕೆ ಪಾಸ್ ಮಾಡಿಕೊಡಬೇಕು ?

ಶ್ರೀ ಎಂ. ಪಿ. ಪ್ರಕಾಶ್.—ಲೆಕ್ಕಪತ್ರಗಳು 31–3–1983 ಕ್ಕೆ ಮುಗಿದಿದ್ದು ಅದು ಸೆಪ್ಟಂಬರ್ ಅಂತ್ಯದವರೆಗೆ ಪರಿಶೀಲನೆಯಾಗುತ್ತದೆ. ನಂತರ ಅದು ಆಡಿಟ್ ಆಗಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನು ಕೊಡುವುದಕ್ಕಾಗಲಿಲ್ಲ. ಅದಕ್ಕೆ ಅದನ್ನು ಹಿಂದಿಡಿದು ಸರಬರಾಜು ಮಾಡಲಾಗುವುದು ಎಂಬುದಾಗಿ ತಿಳಿಸಲಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಅನ್–ಆಡಿಟೆಡ್ ಅಂತಲೇ ಕೊಡಿ. ಮಂತ್ರಿಗಳು ಮೇಲ್ಮನೆಯಲ್ಲಿ ಕೊಟ್ಟಿದ್ದಾರೆ. The whole Government is accountable to this House. This is very supreme. 31–3–1983 ರ ವರೆಗೆ ಸಬ್ಜೆಕ್ಟ್ ಟು ಆಡಿಟ್ ಎಂದು ಬರೆದು ಕೊಡಿ. ಆದರ ವಿವರ ಏನು ಇದೆ ಎಂಬುದನ್ನು ಸದಸ್ಯರಿಗೆ ಕೊಡಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ಯಾವುದನ್ನೇ ಮುಚ್ಚಿಡಬೇಕಾದಂತಹ ಪ್ರಸಂಗ ಇಲ್ಲ. ನಾನು ಮೊದಲೇ ಹೇಳಿದ್ದೇನೆ. ಇದು ಅನಿವಾರ್ಯ. ನಮ್ಮ ಕಾನೂನು ಪ್ರಕಾರ 31–9–1983 ರ ಅಂತ್ಯದವರೆಗೆ ಇರುವ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ನಂತರ ಅದು ಆಡಿಟ್ ಆಗಬೇಕಾಗುತ್ತದೆ. ನಂತರ ಅದನ್ನು ಅಚ್ಚು ಹಾಕಿಸಿ ಸದಸ್ಯರಿಗೆ ಕೊಡಬೇಕಾಗುತ್ತದೆ. ಸಮಯ ಇಲ್ಲದಿದ್ದರಿಂದ ಭಾಗ ಒಂದು ಆಡಳಿತಾತ್ಮಕ ವರದಿಯನ್ನು ಈಗ ಕೊಡಲಾಗಿದೆ. ತದನಂತರ ಪಾರ್ಟ್ 2 ನ್ನು ಕೊಡುತ್ತೇವೆ ಎನ್ನುವ ಮಾತನ್ನು ಸದನದಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—1982–83 ರ ವರದಿಯಲ್ಲಿ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನೇ ಕೊಟ್ಟಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ತಾವು ತಪ್ಪಾಗಿ ಭಾವಿಸುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಪತ್ರಿಕಾ ಹೇಳಿಕೆಯಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಪ್ರಕಾಶ್‌ರವರು ಶ್ರೀ ಒಡೆಯರಾಜ್‌ರವರ ಪ್ರಶ್ನೆಗೆ ಉತ್ತರ ಕೊಡುತ್ತಾ ಆ ರೀತಿ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ,

"Mr. Prakash told Mr. Govinda P. Vodeyaraj that the main factors contributed to the losses in the KSRTC were the increasing operational cost by way of raising emoluments to the personnel with the periodic revision of DA linked with the Government servants, rising cost of diesel, tyres, chassis, spare parts and other inputs without the corresponding revision of fares."

Now the point is that you have made the statement You wanted to accept it simply. If you accept it, if you have to challenge it, I must challenge it on the basis of facts and figures. You do not provide me the facts and figures. Hon. Minister has not discharged his responsibility. Here is a report which does not contain anything.

SRI M. S. KRISHNAN.—The last year report, *i.e.*, 1981–82 consists of everything. Can I speak on that report?

SRI M. P. PRAKASH.—It is not as though we wanted to keep the entire House in darkness. Mr. Krishnan told that we have not provided facts and figures. Because of the legal constraint we are experiencing and also, under the Road Transport Corporation Act accounts will have to be given till the end of September. It is not that we want to withhold facts of the case.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಆಡಿಟ್ಟನ್ನು ಬೇಗ ಮಾಡಿಸಬೇಕಾಗಿತ್ತು.

ಶ್ರೀ ಎಂ. ಪಿ. ಪ್ರಕಾಶ್.—ಸೆಪ್ಟೆಂಬರ್ ಮುಗಿಯುವುದರೊಳಗೆ ಇದು ಆಡಿಟ್ ಆಗಬೇಕಾಗಿತ್ತು. ಇನ್ನು 15 ದಿವಸ ಇತ್ತು, ಅದಾದಮೇಲೆ ಮಾಡಿಸೋಣ ಎಂದು ಮಾಡಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹೋದ ವರ್ಷ 15 ಕೋಟಿ ರೂಪಾಯಿಗಳ ಲುಕ್ಸಾನು ಆಯಿತು. ಈಗ ನೋಡಿದರೆ ಇದು 20 ಕೋಟಿ ರೂಪಾಯಿಗಳ ಹತ್ತಿರ ಹತ್ತಿರ ಲಾಸ್ ಆಗುವ ಸಂದರ್ಭ ಕಂಡುಬರುತ್ತಾ ಇದೆ. ಅದಕ್ಕೋಸ್ಕರ ನಾವು ಪ್ರಸ್ತಾಪ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಇದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವುದಾದರೆ ನಮಗೆ ಇದರ ಬಗ್ಗೆ ಸ್ಪಷ್ಟ ವಿಷಯ ಬೇಕು. ವಿಷಯ ಗೊತ್ತಿಲ್ಲದೇ ಹೋದರೆ ಹೇಗೆ ಚರ್ಚೆ ಮಾಡುವುದು? ನೀವು ಇದರ ಬಗ್ಗೆ ವಿಷಯ ಕೊಡದೇಹೋದರೆ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಹೇಳುತ್ತೇನೆ, ಇಲ್ಲಿ ಲಾಸ್ ಆಗುವುದಕ್ಕೆ ಸಾಧ್ಯವೇ ಇಲ್ಲ ಎಂದು. It is not a loss. It is a fictitious loss. I am speaking on the basis of 1981–82 report. The total investment comes to Rs. 116 crores. The Government has given it in the form of loan and the KSRTC has paid an interest of Rs. 5 crores in 1981–82. Supposing this loan had been converted into equity capital, what would have been the position? Would this loss have been there? No, this loss would not have been there. Why it has not been thought of? Why it should not be converted into equity capital? is my question.

Regarding depreciation, there is a depreciation reserve of Rs. 12 crores. It is not of 1982–83; it is of 1981–82. This depreciation is a sort of hidden reserve. If we take into account the tax of Rs. 19 crores plus depreciation amount of Rs. 12 crores, the total comes to Rs. 31 crores. So actually there is no loss. Please tell me, have you got depreciation fund?

SRI K. H. RANGANATH.—It is only in book.

SRI M. S. KRISHNAN.—If you utilise the depreciation, then the value of many items will be zero. According to your last year report the depreciation fund comes to Rs. 48 creres. That is the generation from internal resources out of 116 crores. Then the actual investment is only Rs. 56 crores. Then how can you say, it is running under loss ? Of course, book loss is there.

SRI M. P. PRAKASH.—It is a book loss.

SRI M. S. KRISHNAN.—Now what should be done ? ಈ ತರಹ ಹೇಳಿದರೆ ಜನಗಳಿಗೆ ಮೋಸ ಮಾಡಿದ ಹಾಗಾಗುತ್ತದೆ. ಇದರಲ್ಲಿ ಲಾಸ್ ಆಗುವುದಕ್ಕೆ ಕಾರಣವೇ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ನಮಗೆ ಮೋಸ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ನಾವು ಯಾರಿಗೆ ಮೋಸ ಮಾಡಬೇಕು ಹೇಳಿ. ಮೋಸ ಮಾಡುವ ಅಗತ್ಯ ಇದರಲ್ಲಿ ಬರುವುದೇ ಇಲ್ಲ. ಇದರಲ್ಲಿ ನಿಜಾಂಶ ಏನು ಇದೆ ಅದನ್ನು ಪ್ರಸ್ತಾಪ ಮಾಡುತ್ತೇನೆ. ನಾವು ಯಾರನ್ನೂ ಮೋಸ ಮಾಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಕ್ಕೆ ಯಾರನ್ನೂ ಕೂಡ ಮೋಸ ಮಾಡುವ ಅಗತ್ಯ ಇಲ್ಲ. ಅಂಥಾ ಜನರೂ ಇಲ್ಲ. ನಾನು ಇದನ್ನು ವೈಯಕ್ತಿಕವಾಗಿ ಹೇಳುತ್ತಾ ಇಲ್ಲ., ನಿಮ್ಮ ರಿಪೋರ್ಟ್ ಪ್ರಕಾರ ಏನು ಇದೆ ಅದನ್ನು ಹೇಳುತ್ತೇನೆ ಅಷ್ಟೆ. ಈ ವರದಿಯ ಪುಟ 20ರಲ್ಲಿ 1982–83 ರಲ್ಲಿ ಹತ್ತಿರ ಹತ್ತಿರ 46·8 ಪರ್ಸೆಂಟ್ ಬಸ್ಸುಗಳು ಇವೆ. ಸುಮಾರು 6 ಲಕ್ಷಕ್ಕಿಂತಲೂ ಹೆಚ್ಚು ಕಿಲೋಮೀಟರ್ಸ್ ಈ ಬಸ್ಸುಗಳು ಓಡಾಡಿವೆ. That means it has outlived its utility. Depreciation value in the actual balance sheet is zero. The buses are still plying. Actually it should have been scrapped. They are earning money for you. ಇದರಲ್ಲಿ ಫೈನಾನ್ಷಿಯಲ್ ಆಸ್ಪೆಕ್ಟ್ ನೋಡಿದರೆ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡಲಿಕ್ಕೆ ಬರುತ್ತದೆ. ಮಾತೆತ್ತಿದರೆ ಡಿ.ಎ., ವೇಜ್ ಹೆಚ್ಚು ಕೊಡಬೇಕು ಎನ್ನುವ ಮಾತನ್ನು ಹೇಳುತ್ತೀರಿ. ಆದರೆ ಇದರಲ್ಲಿ ನೀವು ಹಾಕಿರುವ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ನೋಡಿದರೆ ಅದಕ್ಕೆ ತಕ್ಕಂತೆ ವರ್ಕ್‌ಔಟ್ ಆಗಬೇಕು, ಆಗುತ್ತಾ ಇಲ್ಲ, ಕಾರ್ಮಿಕರ ಸಹಾಯ ಇಲ್ಲದೆ ಯಾವ ಕೆಎಸ್‌ಆರ್‌ಟಿಸಿ ಯನ್ನೂ ರನ್ ಮಾಡುವುದಕ್ಕಾಗುವುದಿಲ್ಲ ಯಾವ ಫ್ಯಾಕ್ಟರಿಯನ್ನೂ ರನ್ ಮಾಡುವುದಕ್ಕಾಗುವುದಿಲ್ಲ. ಲೆಕ್ಕಾಚಾರ ಹಾಕಿದರೆ ಒಂದು ಕಿಲೋಮೀಟರಿಗೆ 342 ಪೈಸೆ ಬೀಳುತ್ತದೆ. ಡೀಸೆಲ್ ಪೆಟ್ರೋಲ್ ಇವೆಲ್ಲದರ ಅಂಕಿ ಅಂಶ ತೆಗೆದುಕೊಂಡರೆ ಒಂದು ಕಿಲೋ ಮೀಟರ್‌ಗೆ 342 ಪೈಸೆ ಏನು ಬೀಳುತ್ತದೆ ಅದರಲ್ಲಿ ಸ್ಟಾಫ್‌ಗೆ 91 ಪೈಸೆ ಬೀಳುತ್ತದೆ. ಪೆಟ್ರೋಲ್, ಟೈರ್ ಟ್ಯೂಬ್ ಕಾಸ್ಟ್ ಎಲ್ಲಾ ಸೇರಿಕೊಂಡರೆ 251 ಪೈಸೆ ಒಟ್ಟು 342 ಪೈಸೆ ಆಗುತ್ತದೆ; ಹೀಗಿರುವುದರಿಂದ ನೀವು ಮಾತೆತ್ತಿದರೆ ಕಾರ್ಮಿಕರ ಮೇಲೆ ಇಷ್ಟು ಖರ್ಚು ತೋರಿಸುತ್ತೀರಿ. ಇದು ಸರಿಯೇ ? ಇದು ಸರಿಯಾದುದಲ್ಲ.

ಇನ್ನೊಂದು ಅಂಶ ಏನೆಂದರೆ ವರ್ಕ್‌ಲೋಡ್ ಇಷ್ಟು ಆಗಿದೆ ಕಾರ್ಮಿಕರ ಫಿಲ್‌ಫರೇಜ್ ಇಷ್ಟು ಎಂದು ಹೇಳುತ್ತೀರಿ. ಅದೂ ಸಹ ಸರಿಯಾದುದಲ್ಲ. ಬಸ್ಸುಗಳು ಜಾಸ್ತಿ ಮತ್ತು ಕಡಿಮೆ ಜನ ಇರುವುದರಿಂದ ಕಾರ್ಮಿಕರಿಗೆ ವರ್ಕ್‌ಲೋಡ್ ಜಾಸ್ತಿಯಾಗಿದೆ. ಈ ಕಾರ್ಮಿಕರು ಜಾಸ್ತಿ ಕೆಲಸ ಮಾಡಬೇಕಾಗಿದೆಯೇ ವಿನಹ ಇನ್ನೇನೂ ಇಲ್ಲ. ಈ ಬಗ್ಗೆ ನಿಮ್ಮ ಅಂಕಿ ಅಂಶ ನೋಡಿದರೇ ಗೊತ್ತಾಗುತ್ತದೆ. ತಮಗೆ ಹೇಳ ಬೇಕಾದರೆ ನಿಮ್ಮ ಷೆಡ್ಯೂಲ್ ಪ್ರಕಾರ 1981 ರಲ್ಲಿ ಒಂದು ಬಸ್ಸಿಗೆ, ಆ ಬಸ್ಸಿನ ಕಂಡಕ್ಟರ್ ಡ್ರೈವರ್ ಎಲ್ಲಾ ಸೇರಿ 8·27 ಜನ ಇದ್ದರು, 1982 ರಲ್ಲಿ 1 : 7 : 87 ಜನ ಇದ್ದರು, ಅದೇ 1983ರಲ್ಲಿ 1 : 7 : 61 ಜನ ಇದ್ದರು. ಇಷ್ಟು ಜನ ಕಡಿಮೆಯಾಗಿದ್ದಾರೆ. ಇದರಿಂದ ಕಾರ್ಮಿಕರಿಗೆ ವರ್ಕ್‌ಲೋಡ್ ಜಾಸ್ತಿಯಾಗಿದೆ. ಬಸ್ಸುಗಳ ಸಂಖ್ಯೆ ನೋಡಿದರೆ ಜಾಸ್ತಿಯಾಗಿದೆ. ಅಲ್ಲಿ ಇರತಕ್ಕಂಥಾ ಕಾರ್ಮಿಕರಿಗೆ ಕೆಲಸ ಜಾಸ್ತಿಯಾಗಿದೆ. ಹೀಗಿರ ಬೇಕಾದರೆ ಇದನ್ನು ಕಾರ್ಮಿಕರ ಮೇಲೆ ಹಾಕಿದರೆ ಅದು ಸರಿಯಾದುದಲ್ಲ ಎಂದು ನಾನು ಹೇಳಬೇಕಾಗಿದೆ.

ಇನ್ನು ನ್ಯಾಷನಲೈಸೇಷನ್ ಆಫ್ ರೂಟ್ಸ್ ಬಗ್ಗೆ ಹೇಳಬೇಕಾದರೆ ಏತಕ್ಕೆ ಇದನ್ನು ನೀವು ಮಾಡಲಿಲ್ಲ ? ಅದಕ್ಕೇ ಇದರಲ್ಲಿ ಲಾಸ್ ಆಗುವುದಕ್ಕೆ ಕಾರಣ. ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಪ್ರೈವೇಟ್ ಬಸ್ಸುಗಳ ಹಾವಳಿ ಜಾಸ್ತಿಯಾಗಿದೆ. ಅವರು ಆಲ್ ಇಂಡಿಯಾ ಪರ್ಮಿಟ್ ತೆಗೆದುಕೊಂಡು ಈ ಸರ್ಕಾರಿ ಬಸ್ಸುಗಳು ಓಡಾಡುವ ರೂಟ್ಸ್‌ನಲ್ಲಿ ಹಿಂದೆ ಒಂದು ಬಸ್ಸು, ಮುಂದೆ ಒಂದು ಬಸ್ಸು ಓಡಿಸುತ್ತಾ ಇರುವುದರಿಂದ ಜನತಾ ಬಸ್ಸು, ಶರ್ಮ ಬಸ್ಸು ಇನ್ನೂ ಇತರ ಖಾಸಗೀ ಬಸ್ಸುಗಳು ಸಿಕ್ಕಾಪಟ್ಟೆ ಓಡುತ್ತಾ ಇರುವುದರಿಂದ ನಮಗೆ ಲಾಸ್ ಆಗುವುದಕ್ಕೆ ಕಾರಣ ಆಗಿದೆ. ನೀವು ಇದುವರೆಗೆ ಯಾವ ಮಾರ್ಗದಲ್ಲೂ ಕೂಡ ನ್ಯಾಷನಲೈಸೇಷನ್ ಮಾಡಿಲ್ಲ. ಇವರನ್ನು ಬಲಿಹಾಕುವ ಜವಾಬ್ದಾರಿ ನಿಮಗೆ ಸೇರಿದ್ದಲ್ಲವೇ ? ಏತಕ್ಕೆ ನೀವು ಈ ಕೆಲಸವನ್ನು ಮಾಡುವುದಿಲ್ಲ ? ನೀವು ಈ ಕೆಲಸವನ್ನು ಹಿಂದಿನವರು ಮಾಡಲಿಲ್ಲ ಎನ್ನಬಹುದು. ನಾನು ನೀವು ಏನು ಮಾಡುತ್ತೀರಿ ಎಂದು

ಕೇಳುತ್ತೇನೆ. ಇದರ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ನೀವು ಅಧಿಕಾರಕ್ಕೆ ಬಂದ ಮೇಲೆ ನ್ಯಾಷನಲೈಸೇಷನ್ ಆಫ್ ರೂಟ್ಸ್ ಜಾಸ್ತಿ ಮಾಡಿಲ್ಲ. ಹಾಗೆಯೇ ಇದ್ದೀರಿ.

ವಿಷಯ ಹೀಗಿರಬೇಕಾದರೆ ಇದನ್ನು ಕಾಳಜಿ ವಹಿಸಿ ಮಾಡಿದ್ದಾರೆಂದು ಹೇಳುವುದಕ್ಕೆ ಹೇಗೆ ಸಾಧ್ಯ ವಾಗುತ್ತದೆ ? ಇದರ ಬಗ್ಗೆಯೂ ತಾವು ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಇನ್‌ಕಂ ಬಗ್ಗೆ ಸ್ಟೇಟ್ ಕ್ಯಾರೇಜಸ್‌ನಿಂದ ಸುಮಾರು 62·8 ಪರ್ಸೆಂಟ್ ಇನ್‌ಕಂ ಬಂದರೆ, 37 ಪರ್ಸೆಂಟ್ ಇನ್‌ಕಂ ಪ್ರೈವೇಟ್‌ನವರಿಂದ ಬರುತ್ತಿದೆ. ಇದು ನಿಮ್ಮ ಅಂಕಿ-ಅಂಶಗಳ ಪ್ರಕಾರ ನಾನು ಹೇಳುತ್ತಿದ್ದೇನೆ. ಆದ್ದರಿಂದ ತಾವು ಎಲ್ಲಾ ರೂಟ್‌ಗಳನ್ನೂ ನ್ಯಾಷನಲೈಸ್ ಮಾಡಬೇಕಾಗಿದೆ ಎಂದು ನಾನು ಒತ್ತಾಯ ಮಾಡಬೇಕಾಗಿದೆ. ಇಲ್ಲಿ ಲಾಸ್ ಆಗುವುದಕ್ಕೆ ಕಾರಣ ನಿಜವಾಗಿಯೂ ಹೇಳಬೇಕಾದರೆ, ಸಿಟಿ ಸರ್ವೀಸಸ್‌ನಿಂದ ಆಗುತ್ತಿದೆ. ಅಂತ ರಾಷ್ಟ್ರೀಯ ಮಟ್ಟದಲ್ಲಿ ಸಿಟಿ ಸರ್ವೀಸಸ್ ಯಾವಾಗಲೂ ಲಾಸಸ್‌ನಲ್ಲಿ ನಡೆಯುತ್ತಿರುತ್ತವೆ. ಇಲ್ಲಿ ನಾನು ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳಬೇಕಾದರೆ, actually the rural side is being fleeced in reagrd to fares. 8 ಕಿಲೋಮೀಟರ್ ದೂರಕ್ಕೆ ರೂರಲ್ ಸೈಡ್‌ನಲ್ಲಿ ಒಂದು ರೂಪಾಯಿ ಚಾರ್ಜು ಮಾಡುತ್ತಾರೆ, ಅದೇ ಬೆಂಗಳೂರಿನಲ್ಲಿ 50 ಪೈಸೆ ಚಾರ್ಜ್ ಮಾಡುತ್ತಿದ್ದಾರೆ. 15 ಕಿಲೋಮೀಟರ್ ದೂರಕ್ಕೆ 1 ರೂ. 50 ಪೈಸೆಯಾದರೆ ಸಿಟಿ ಸೈಡ್‌ನಲ್ಲಿ 70 ಪೈಸೆಯಾಗುತ್ತದೆ, 25 ಕಿಲೋ ಮೀಟರ್‌ಗೆ ಎರಡು ರೂಪಾಯಿಗಳಾದರೆ ಸಿಟಿ ಸೈಡ್‌ನಲ್ಲಿ 1 ರೂ. 10 ಪೈಸೆಯಾಗುತ್ತದೆ. 30 ಕಿಲೋಮೀಟರ್‌ಗೆ 2 ರೂ. 50 ಪೈಸೆಯಾದರೆ ಸಿಟಿ ಸೈಡ್‌ನಲ್ಲಿ 1 ರೂ. 30 ಪೈಸೆಯಾಗುತ್ತದೆ. ಇದರಿಂದಾಗಿ ಇವತ್ತು ಕೆ.ಎಸ್.ಆರ್. ಟಿ.ಸಿ, ಯವರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಇಷ್ಟು ಮಾತ್ರ ಹೇಳಿ, ಇಂಡಸ್ಟ್ರಿಯಲ್ ರಿಲೇಷನ್ಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸಂಪಂಗಿ ಫೆಡರೇಷನ್, ಶ್ರೀಕಂಠಯ್ಯ ಫೆಡರೇಷನ್ ಮತ್ತು ಎಂ. ಎಸ್. ಕೃಷ್ಣನ್ ಫೆಡರೇಷನ್ ಎಂದು ಹೇಳಿ ಮೂರು ಫೆಡರೇಷನ್‌ಗಳು ಇವೆ. When you recognise those two federations why don't you recognise the third one? According to code of discipline every organization must have a union not more than one. If you recognise more than one why not you recognise the other ? ಇದರ ಬಗ್ಗೆ ಚರ್ಚೆ ನಡೆದು ನಮಗೆ ತಲೆ ಕೆಟ್ಟುಹೋಗಿದೆ. ಸ್ವಾಮಿ ಎಲ್ಲಿಯತನಕ ಈ ಪ್ರಶ್ನೆ ಇತ್ಯರ್ಥವಾಗುವುದಿಲ್ಲವೋ ಅಲ್ಲಿಯತನಕ there will be no industrial peace in K.S.R.T.C. ಕಾರ್ಮಿಕರು ಅಶಾಂತಿಯಿಂದಾಗಿ ಅಲ್ಲಿಯ ಕೆಲಸ ಸಾಕಷ್ಟು ನಿಂತುಹೋಗಿದೆ. ತಮ್ಮ ವರದಿಯ ಪುಟ 6 ರಲ್ಲಿ ಇದರ ಬಗ್ಗೆ ಹೇಳಿದ್ದೀರಿ. ಕಾರ್ಮಿಕರ ಪ್ರಶ್ನೆ ಬಂದಾಗ, ಯಾರೂ ಸಹ ಬೇಕುಬೇಕಾಗಿಯೇ ಸ್ಟ್ರೈಕ್ ಮಾಡು ವುದಕ್ಕೆ ಇಷ್ಟಪಡುವುದಿಲ್ಲ. ಅವರು ಜನರಿಗೆ ತೊಂದರೆಯನ್ನು ಕೊಡಬೇಕೆಂದೇನೂ ಇರುವುದಿಲ್ಲ. ಎಲ್ಲಾ ಫೇಡರೇಷನ್‌ಗಳನ್ನೂ ಒಂದೇ ರೀತಿಯಾಗಿ ತಾವು ನೋಡುವುದಾದರೆ ಅಲ್ಲಿ ಇಂಡಸ್ಟ್ರಿಯಲ್ ಪೀಸ್ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇಂಡಸ್ಟ್ರಿಯಲ್ ಹಾರ್ಮೋನಿಯನ್ನು ಬೆಳೆಸುವುದಕ್ಕೆ ಬದಲಾಗಿ ಫೆಡರೇಷನ್ ನವರನ್ನು ಹೆರಾಸ್ ಮಾಡುವುದು ಮತ್ತು ಅಧಿಕಾರಿಗಳು ಸಿಕ್ಕಾಪಟ್ಟೆ ತೊಂದರೆ ಕೊಡುವುದು ಅಲ್ಲಿ ನಡೆದುಕೊಂಡು ಬಂದಿದೆ. ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಂಡು ಹಲವಾರು ಸಮಸ್ಯೆಗಳು ಇನ್ನೂ ಇತ್ಯರ್ಥವಾಗಿಲ್ಲ. ಅನೇಕ ವಿಷಯಗಳನ್ನು ಚರ್ಚೆ ಮಾಡಿ ಇತ್ಯರ್ಥ ಮಾಡ ಲಿಕ್ಕೆ, ಒಳ್ಳೆಯ ವಾತಾವರಣವನ್ನು ಕಲ್ಪಿಸಲಿಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಬೇಕು. ಅವರ ಪ್ರಾವಿಡೆಂಟ್ ಫಂಡ್ ವಿಷಯದಲ್ಲಾಗಲೀ, ಬೇರೆ ವಿಷಯಗಳಲ್ಲಾಗಲೀ ಮತ್ತು ಯೂನಿಯನ್‌ಗಳಿಗೆ ರೆಕಗ್ನಿಷನ್ ಕೊಡುವು ದಾಗಲೀ, ಇಲ್ಲಿ ಇವರು ಎರಡು ಯೂನಿಯನ್‌ಗಳಿಗೆ ರೆಕಗ್ನಿಷನ್ ಕೊಟ್ಟಿದ್ದಾರೆ. ಇನ್ನೊಂದಕ್ಕೆ ಏಕೆ ಕೊಡ ಬಾರದು ? ಮೂರು ಜನರೂ ಕೂತುಕೊಂಡು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬಹುದು. ಇದು ಬಿಟ್ಟು ಅಧಿಕಾರಿಗಳು ಇವರಿಗೆ ಸಿಕ್ಕಾಪಟ್ಟೆ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಮಾನ್ಯ ಮಂತ್ರಿಗಳು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಅವರಿಗೆ ಕೇಳಿಕೊಳ್ಳುತ್ತೇನೆ.

ಆಮೇಲೆ ನಿಮ್ಮ ಲಾ ಡಿಪಾರ್ಟ್‌ಮೆಂಟ್—ಇದನ್ನು ನೀವು ಸ್ಕ್ರ್ಯಾಪ್ ಮಾಡಬೇಕು. ಇವರು ರಾಂಗ್ ಗೈಡೆನ್ಸ್ ಕೊಟ್ಟು ಅನೇಕ ರೀತಿಯಲ್ಲಿ ನಿಮಗೆ ಮಿಸ್‌ಲೀಡ್ ಮಾಡುತ್ತಿದ್ದಾರೆ. ಇದಕ್ಕೆ ನಾನು ಬೇಕಾದಷ್ಟು ನಿದರ್ಶನಗಳನ್ನು ಕೊಡಬಲ್ಲೆ. ಇವರುಗಳು ರಾಂಗ್ ಅಡ್ವೈಸ್ ಕೊಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ನಿಮ್ಮ ಕೋಲಾರ ಡಿವಿಜನ್‌ನಲ್ಲಿ ಚಿಕ್ಕೇಗೌಡ ಎಂಬ ಅಧಿಕಾರಿ ಇದ್ದಾರೆ. ಇವರನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ ಅಥವಾ ಅವರು ಯಾರು ಎಂದು ಗೊತ್ತೂ ಇಲ್ಲ. ಇವರು ಎರಡು ಸಾವಿರ ಕಾರ್ಮಿಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಪನಿಷ್‌ಮೆಂಟ್ ಕೊಡುವುದು ಮಾಡುತ್ತಿದ್ದರೆ ಕಾರ್ಮಿಕರ ಗತಿ ಏನಾಗಬೇಕು ? ಕೈಗಾರಿಕಾ ಬಾಂಧವ್ಯ ಏನಾಗಬೇಕು ? ಇವರು ಕಾರ್ಮಿಕರನ್ನು ಸಸ್ಪೆಂಡ್ ಮಾಡುವುದು,

ಡಿಸ್‌ಮಿಸ್ ಮಾಡುವುದು ಮತ್ತು ಸಿಕ್ಕಾಪಟ್ಟೆ ಫೈನ್ ಹಾಕುವುದು ಮಾಡಿಕೊಂಡು ಹೋದರೆ ಕಾರ್ಮಿಕರ ಗತಿ ಏನಾಗಬೇಕು ? ಎಂದು ತಾವೇ ಯೋಚನೆ ಮಾಡಿ. ದಯವಿಟ್ಟು ಇಂಥವರನ್ನು ಈ ಕೆಲಸಕ್ಕೆ ಹಾಕಬೇಡಿ. ಬೇರೆ ಏನಾದರೂ ಕೆಲಸವನ್ನು ಇವರಿಗೆ ಕೊಡಿ. ಇವರಿಗೆ ಪ್ರೊಮೋಷನ್ ಕೊಡುವಂಥ ಸ್ಥಿತಿ ಇದೆಯೆಂದು ತಿಳಿದುಕೊಂಡಿದ್ದೇನೆ. ದಯವಿಟ್ಟು ಇವರನ್ನು ಅಲ್ಲಿ ಮಾತ್ರ ಇಡಬೇಡಿ. ಆಮೇಲೆ ನಿಮ್ಮಲ್ಲಿ 3688 ಜನ ಬದಲಿ ಕೆಲಸಗಾರರು ಏನು ಇದ್ದಾರೆ ಇವರನ್ನು ಕನ್‌ಫರ್ಮ್ ಮಾಡಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—Now the House stands adjourned to meet again tomorrow at 11-00 a.m.

The House adjourned twenty-nine minutes past five of the clock to meet again at Eleven of the clock on 6th September 1983.